ಅಪರಂಜಿ

ಏಪ್ರಿಲ್ 2007

ತಿಳಿನಗೆಯ ಕಾರಂಜಿ



ಪ್ರಕಾಶ್

ಬಾಗೂರು ಚಂದ್ರು

ಚಿ. ಶ್ರೀನಿವಾಸರಾಜು

ಶಿವು

ವತ್ಸನ

ಕು.ಕ.

ಎಚ್. ಗೋಪಾಲಕೃಷ್ಣ

ಗೌತಮ

ನೀರಗುಂದ ಕೇಶವಮೂರ್ತಿರಾವ್

ಎನ್. ರಾಮನಾಥ್

ಬೇಲೂರು ರಾಮಮೂರ್ತಿ

ದಂನಕಿ

ಬಿ. ಪ್ರಭಾಕರ ಶಿಶಿಲ

ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್



ಈ ಸಂಚಿಕೆಯಲ್ಲಿ .....

ಸಂಪುಟ 24 ಸಂಚಿಕೆ - 7
ಏಪ್ರಿಲ್ - 2007

ಪ್ರಕಾಶಕರು: ಕೋರಮಂಗಲ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080 - 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಜೆ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



○ ಪ್ರಕಾಶ್

ಮಗುವಿನ ಸೃಜನಶೀಲತೆಗೆ ಬಾಹ್ಯದ ಮೆರುಗನ್ನು ನೀಡಲು ಶಿಕ್ಷಣ ಪದ್ಧತಿ ವಿಫಲವಾಗಿದೆ.

- ಹೇಳಿಕೆ

ಅಂಗಂದ್ರೇನ್‌ಸಾ??

★★★

'ಪಥ್ಯದಲ್ಲಿ ಕೋಮು ಅಂಶ ತೆಗೆಯಬೇಕು'

- ಸ್ವಾಮಿ ಅಗ್ನಿವೇಶ್

ಹೌದು, 'ಕೋಮು' ಒಂದು ದಳ್ಳುರಿ!!

★★★

ಮೀರಾ ದತ್ತ ಅವರಿಂದ ಖಾಸಗಿ ಸಹಯೋಗದ ಮೊದಲ ಅಂಚೆ ಕಚೇರಿ ಉದ್ಘಾಟನೆ

- ಸುದ್ದಿ

ಸಿಬ್ಬಂದಿ ಶಕ್ತಿ ಮೀರಿ ಕೆಲಸ ಮಾಡುತ್ತಾರಂತೆ!!

★★★

ವೇತನಕ್ಕೆ 5 ಕೋಟಿ ರೂ. ನೆರವು: ಭೂ ಬ್ಯಾಂಕ್ ಸಿಬ್ಬಂದಿ ಮನವಿ

- ಪತ್ರಿಕೆ

ಹಣವನ್ನು ಭೂಗಳ್ಳರಿಂದ ಪಡೆಯುತ್ತಾರಂತೆ!!

★★★

''ಜಾನಪದ ಕಲಾವಿದರ ಹಾಡುಪಾಡು''

- ಶೀರ್ಷಿಕೆ

ಹಾಡಿಗಿಂತ...!

★★★

ಕಸದ ಬುಟ್ಟಿಗೆ ಎಸೆದಿದ್ದ ಲಾಟರಿ ಟಿಕೆಟ್‌ಗೆ ಜಾಕ್‌ಪಾಟ್ !!

- ಸುದ್ದಿ

ಇನ್ನಾದರೂ ಪತ್ರಿಕಾ ಸಂಪಾದಕರು ಜಾಗರೂಕರಾಗಿರಲಿ!!

★★★

ಖಾಸಗಿ ಕಾಲೇಜಿನಲ್ಲಿ ರೇಡಿಯಾಲಜಿ ಸೀಟಿಗೆ ಒಂದು ಕೋಟಿ ರೂ.

- ಸುದ್ದಿ

ಈ ಪಿಡುಗನ್ನು ರೇಡಿಯೋಥೆರಪಿಯಿಂದ ನಿರ್ಮೂಲ ಮಾಡಬೇಕು!!


★★★


''ವೀರೇಂದ್ರ ಸೆಹವಾಗ್ ಪುಟಿದೇಳುತ್ತಾರೆ''

- ಕ್ರೀಡಾ ಸುದ್ದಿ

ನಮಗೂ ಅದೇ ಭಯ!

★★★





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಜಿ. ಶ್ರೀನಿವಾಸರಾಜು ಬೆಂಗಳೂರು ಕ್ರೈಸ್ಟ್ ಕಾಲೇಜಿನಲ್ಲಿ ಮೂರು ದಶಕಗಳ ಕಾಲ ಕನ್ನಡ ಅಧ್ಯಾಪಕರಾಗಿ ದುಡಿದು, ಈಗ ಕನ್ನಡಕ್ಕೆ ಸಂಬಂಧಿಸಿದ ವಿವಿಧ ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಹಿರಿಯ ಸಾಹಿತಿ. ಇವರು ಮುಖ್ಯವಾಗಿ ನಾಟಕಕಾರರು, ತುರ್ತು ಪರಿಸ್ಥಿತಿ ಯಲ್ಲಿ ರಚಿಸಿದ ಐದು ಮೂಕ ನಾಟಕಗಳಿಂದ ತೀರಾ ಈಚಿನ ನಿಷ್ಕ್ರಮಣದವರೆಗೂ ಹಲವಾರು ನಾಟಕಗಳನ್ನು ಬರೆದಿದ್ದಾರೆ. ಇತರ ಸಾಹಿತ್ಯ ಪ್ರಕಾರಗಳಲ್ಲೂ ಇವರು ಕೈಯಾಡಿಸಿದ್ದಾರೆ.

ಶ್ರೀನಿವಾಸರಾಜು ತಾವು ಬರೆಯುವುದಕ್ಕಿಂತ ಹೆಚ್ಚಾಗಿ ಬೇರೆಯವರು ಅದರಲ್ಲೂ ಯುವಜನತೆ ಕನ್ನಡದಲ್ಲಿ ಬರೆಯುವುದನ್ನು ಪ್ರೋತ್ಸಾಹಿಸುತ್ತಿದ್ದಾರೆ. ಶ್ರೀನಿವಾಸರಾಜು ನೇತೃತ್ವದಲ್ಲಿ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಸುಮಾರು ಇನ್ನೂರು ಮೌಲ್ಯಾತ್ಮಕ ಕನ್ನಡ ಪುಸ್ತಕಗಳನ್ನು ಪ್ರಕಟಿಸಿತ್ತು. ಈ ಪುಸ್ತಕಗಳು ಕನ್ನಡದಲ್ಲಿ ಒಂದು ಮೌನಕ್ರಾಂತಿಗೆ ಕಾರಣವಾದವು ಎಂದು ಕನ್ನಡದ ಹಿರಿಯ ಚಿಂತಕರೊಬ್ಬರು ಹೇಳಿದ್ದಾರೆ. ಶ್ರೀನಿವಾಸರಾಜು ಈ ಕಾಲೇಜ್ ಕನ್ನಡ ಸಂಘದ ಮೂಲಕ ಮಾಡಿದ ಕೆಲಸವನ್ನು ಜಿ.ಪಿ. ರಾಜರತ್ನಂ 1950-60ರ ದಶಕದಲ್ಲಿ ಸೆಂಟ್ರಲ್ ಕಾಲೇಜು ಕನ್ನಡ ಸಂಘದ ಮೂಲಕ ಮಾಡಿದ ಕಾರ್ಯಕ್ಕೆ ಹೋಲಿಸಬಹುದು. ಆಗ ರಾಜರತ್ನಂ, ಬಿಜಿಎಲ್ ಸ್ವಾಮಿ, ಲಂಕೇಶ್ ಅಂತಹ ಪ್ರತಿಭೆಗಳು ಅರಳಲು ಕಾರಣರಾಗಿದ್ದರೆ ಶ್ರೀನಿವಾಸರಾಜು ಪ್ರೋತ್ಸಾಹದಿಂದ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಕೆಲವರು: ನಾಟಕಕಾರ- ಸಿನಿಮಾ ಸೀರಿಯಲ್ ನಿರ್ದೇಶಕ ಟಿ.ಎನ್ ಸೀತಾರಾಂ, ಭಾಷಾವಿಜ್ಞಾನಿ ಕೆ.ವಿ. ನಾರಾಯಣ, ನಾಟಕಕಾರ ಎಚ್.ಎಸ್. ಶಿವಪ್ರಕಾಶ್, ವಿಮರ್ಶಕ ಕಿ.ರಂ. ನಾಗರಾಜ, ಕವಿ-ಪತ್ರಕರ್ತೆ ಪ್ರತಿಭಾ ನಂದಕುಮಾರ್.

ಆಗ ರಾಜರತ್ನಂ ತಮ್ಮನ್ನು ಕನ್ನಡದ ಪರಿಚಾರಕ ಎಂದು ಕರೆದುಕೊಂಡಿದ್ದರು. ಇಂದಿನ ಸಂದರ್ಭದಲ್ಲಿ ಪರಿಚಾರಕ ಪದ ಬಳಸುವುದು ಸೂಕ್ತವಲ್ಲವೇನೋ. ಶ್ರೀನಿವಾಸರಾಜು ತಮ್ಮನ್ನು ಪೂರ್ತಿಯಾಗಿ ಕನ್ನಡ ಬಳಸುವ ಉಳಿಸುವ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದಾರೆ. ಇವರು ಕೆಲವು ವರ್ಷಗಳು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದರು. ಈಗಲೂ ಕನ್ನಡದ ಹಲವಾರು ಪ್ರಖ್ಯಾತ ಪ್ರಕಾಶನ ಸಂಸ್ಥೆಗಳಿಗೆ ಅವರು ಗೌರವ ಸಲಹೆಕಾರರು.

ಶ್ರೀನಿವಾಸರಾಜು ಹಾಸ್ಯ ಲೇಖನಗಳನ್ನು ಬರೆಯಲು ಬಹುಶಃ ಪ್ರಯತ್ನಿಸಿಲ್ಲ. ಆದರೆ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗಿರುವ ಅವರ ಪ್ರಬಂಧಗಳಲ್ಲಿ ಅಪರೂಪದ ಹಾಸ್ಯ ಕಾಣಿಸುತ್ತದೆ. ಕನ್ನಡದ ಪ್ರಖ್ಯಾತ ದಿನಪತ್ರಿಕೆಯ ದೀಪಾವಳಿ ಸಂಚಿಕೆಯಲ್ಲಿ ಕೆಲವು ವರ್ಷಗಳ ಹಿಂದೆ ಪ್ರಕಟವಾಗಿದ್ದ, ಮೊಬೈಲ್ ಫೋನ್ ಮತ್ತು ಜೆಟ್‌ಸ್ಪ್ರೆಗನ್ ಎನ್ನುವ ಆಧುನಿಕ ಸಲಕರಣೆಗಳನ್ನು ಬಳಸುವುದರಲ್ಲಿನ ಶ್ರೀನಿವಾಸರಾಜು ಅನುಭವ ಕಥನ ನನಗೆ ತುಂಬಾ ಇಷ್ಟವಾಗಿತ್ತು. ಆ ಲೇಖನದ ಕೆಲವು ಭಾಗಗಳು ಇಲ್ಲಿವೆ.

ಮೊಬೈಲ್ ಫೋನ್ ಮತ್ತು ಜೆಟ್‌ಸ್ಪ್ರೆ ಗನ್

- ಟಿ. ಶ್ರೀನಿವಾಸರಾಜು

ನನಗೆ ಅರವತ್ತು ದಾಟಿದ ಮೇಲೆ ಒಂದೆರಡು ಸ್ವಾರಸ್ಯಕರ ಪ್ರಸಂಗಗಳು ಎದುರಾದುವು. ಒಂದು 'ಮೊಬೈಲ್ ಫೋನ್' ಪ್ರಸಂಗ: ಇನ್ನೊಂದು 'ಜೆಟ್ ಸ್ಪ್ರೆ ಗನ್' ಪ್ರಸಂಗ. ಇವೆರಡಕ್ಕೆ ನಾನೇ ಹೊಂದಿಕೊಳ್ಳಲಿಲ್ಲವೊ ಇವೆರಡೂ ನನ್ನನ್ನು ಹೊಂದಿಕೊಳ್ಳಲಿಲ್ಲವೊ ಗೊತ್ತಿಲ್ಲ. ಇವೆರಡೂ ನನ್ನ ಇಳಿ ವಯಸ್ಸಿನಲ್ಲಿ ಕೇವಲ ಸ್ಥಳರೇಖೆಗಳಾಗಿ ಬಂದು ಹೋದವು. ಈ ದೇಹಕ್ಕೆ ಚಿಕ್ಕಂದಿನಿಂದ ರೂಢಿಯಾದ ಅಭ್ಯಾಸವನ್ನು ಸುಲಭವಾಗಿ ಬಿಟ್ಟುಕೊಡುವುದು ಕಷ್ಟ. ಮನಸ್ಸು ದೇಹವನ್ನು ಸವಾರಿ ಮಾಡುವುದೊ ದೇಹ ಮನಸ್ಸನ್ನು ಸವಾರಿ ಮಾಡುವುದೊ ಹೇಳುವುದು ಕಷ್ಟ. ಕೆಲವು ಸಂದರ್ಭಗಳಲ್ಲಿ ಈ ದೇಹವೇ ಒಗ್ಗುವುದಿಲ್ಲವೊ ಸೋಮಾರಿತನ ಕಾರಣವೊ ಗೊತ್ತಾಗುವುದಿಲ್ಲ.

ಇಂದಿನ ಧಾವಂತ ಜಗತ್ತಿಗೆ ಒಗ್ಗಿಕೊಳ್ಳುವುದು ಆಗಾಗ ಕಷ್ಟವಾಗುತ್ತದೆ. ಅನೇಕ ವಿಷಯಗಳಲ್ಲಿ ಮನಸ್ಸು ಮುನ್ನುಗ್ಗಬಹುದು, ಆದರೆ ದೇಹ ತಡವರಿಸುತ್ತದೆ. ನನ್ನ ಚಿಕ್ಕ ಮಗ ನನ್ನ ಅರವತ್ತನೆಯ ಹುಟ್ಟುಹಬ್ಬಕ್ಕೆ ಒಂದು 'ಮೊಬೈಲ್ ಫೋನ್' (ಜಂಗಮವಾಣಿ) ತಂದುಕೊಟ್ಟ. ನನಗೆ ತುಂಬಾ ಸಂತೋಷವಾಯಿತು. ಮೊದಮೊದಲು ನಾನು ಆಧುನಿಕ ನಾಗರೀಕನಾಗಿಬಿಟ್ಟೆನಲ್ಲಾ ಎಂಬ ಸಡಗರ ಸಂಭ್ರಮಗಳಿಂದ ಬೀಗಿದೆ. ಅದನ್ನು ಸರಿಯಾಗಿ ಬಳಸಲು ಗೊತ್ತಿಲ್ಲದಿದ್ದರೂ, ನನ್ನ ಕೈಚೀಲದಲ್ಲಿ ಹಾಕಿಕೊಂಡು ಓಡಾಡಿದೆ.

ಈಗ ಟೆಲಿಗ್ರಾಫ್, ಟೆಲಿಫೋನ್‌ಗಳ ಕಾಲ ಮುಗಿಯುತ್ತಿದೆ. ಈಗ 'ಮೊಬೈಲ್ ಫೋನ್'ಗಳ ಕಾಲ. ನನಗೆ ಮೊಬೈಲ್ ಫೋನ್ ಹೇಗೆ ಚಾರ್ಜ್ ಮಾಡಬೇಕು? ಅದನ್ನು ಹೇಗೆ ಭದ್ರಪಡಿಸಿಕೊಳ್ಳಬೇಕು? ಹೇಗೆ ಕರೆ ಮಾಡಬೇಕು? ಹೇಗೆ ಕರೆ ಪಡೆಯಬೇಕು? ಒಟ್ಟಿನಲ್ಲಿ ಅದನ್ನು ನಿಭಾಯಿಸುವ ಪಾಠ ಪ್ರಾರಂಭವಾಯಿತು. ಒಂದೊಂದನ್ನೇ ಕಲಿಯುತ್ತಿದ್ದಾಗ, ಕರೆಗಳು ಗೊತ್ತು ಗುರಿಯಿಲ್ಲದೆ ಬರಲು ಪ್ರಾರಂಭಿಸಿದಾಗ, ನಿಧಾನವಾಗಿ ನನ್ನ ಸ್ವಾತಂತ್ರ್ಯಾಪಹರಣವಾಗುತ್ತಿದೆ ಎನ್ನಿಸುವುದಕ್ಕೆ ಪ್ರಾರಂಭವಾಯಿತು. ಅದರ ಕಾಟವನ್ನು ತಪ್ಪಿಸಿಕೊಳ್ಳಲು ಅದನ್ನು ನನ್ನ ಟೇಬಲ್ ಮೇಲೆ ಇಟ್ಟು ಹೋಗುತ್ತಿದ್ದೆ. ನಾನು ಅದನ್ನು ಉಪಯೋಗಿಸುತ್ತಿದ್ದೇನೋ ಇಲ್ಲವೊ ಎಂಬುದನ್ನು ಪತ್ತೆ ಮಾಡಲು ನನ್ನ ಮಗ ಮೊಬೈಲ್ ಫೋನ್‌ಗೆ ಕರೆ ಮಾಡುತ್ತಿದ್ದ. ನಾನು ಅದನ್ನು ಟೇಬಲ್ ಮೇಲೆ ಇಟ್ಟು ಹೋದ ಕಥೆಯನ್ನು, ಉಪ್ಪು ಖಾರ ಹಾಕಿ ನನ್ನ ಹೆಂಡತಿ ಬೇರೆ ಸಂಜೆ ಹೇಳುತ್ತಿದ್ದಳು. ಯುವಕರಿಗೆ ಬದಲಾವಣೆ ಸುಲಭವಾದ ಸಂಗತಿ. ಅವರತ್ತು ದಾಟಿದವರಿಗೆ ತೊಡಕಾದ ಸಂಗತಿ ಎಂಬುದು ನನ್ನ ಮಗನಿಗೆ ಹೇಗೆ ಅರ್ಥವಾಗಬೇಕು? ಇಂದಿಗೆ ತಕ್ಕಂತೆ, ಹೇಗೆ ಬದುಕಬೇಕು ಎಂಬುದರ ಬಗ್ಗೆ ಆಗಾಗ ಫೋನೋಪದೇಶವಾಗುತ್ತಿತ್ತು.

ನಾನು ಒಂದು ಸಂಗೀತ ಕೇಳುವಾಗ, ನಾಟಕ ನೋಡುವಾಗ, ಪಾಠ ಮಾಡುವಾಗ, ಪ್ರಶಾಂತ ಸ್ಥಿತಿಯಲ್ಲಿದ್ದಾಗ ಈ ದರಿದ್ರ ಇದ್ದಕ್ಕಿದ್ದಂತೆ ಬಡಿದುಕೊಳ್ಳಲು ಪ್ರಾರಂಭಿಸುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಅಕ್ಕ ಪಕ್ಕ ನೋಡುತ್ತಾ ಅಪರಾಧ ಭಾವನೆಯಿಂದ ತಲೆತಗ್ಗಿಸಿಕೊಂಡು ಹೊರಗೆ ಓಡಬೇಕಿತ್ತು, ಇಲ್ಲವೇ ಅದನ್ನು ಅಲ್ಲೇ ಅದುಮಿಡಬೇಕಿತ್ತು. ಸಜ್ಜನರ ಸಹವಾಸವೆ ಇದು? ನನ್ನ ನೆಮ್ಮದಿಗೆ ಧಕ್ಕೆಯುಂಟಾಗುತ್ತಿತ್ತು. ನನ್ನ ನಂಬರ್ ಅನ್ನು ಹೇಗೋ ಪತ್ತೆ ಹಚ್ಚಿದವರು 'ಊಟವಾಯಿತೆ? ಕಾಫಿಯಾಯಿತೆ? ರಾತ್ರಿ ನಿದ್ದೆ ಬಂತಾ? ಆ ಸಮಾರಂಭಕ್ಕೆ ಬರುತ್ತೀರಾ? ನಿಮ್ಮ ತಂಗಿ ಮಗಳಿಗೆ ಗಂಡು ಗೊತ್ತಾಯಿತೆ? ಮುಂತಾದ ಅನಾವಶ್ಯಕ ಕರೆಗಳನ್ನು ಮಾಡುತ್ತಿದ್ದರು. ಕಿರಿಕಿರಿ ಉಂಟಾಗುತ್ತಿತ್ತು. ಈ ರೀತಿಯ ಕರೆಗಳು ನನ್ನ ಏಕಾಂತವನ್ನು ನುಚ್ಚು ನೂರು ಮಾಡುತ್ತಿದ್ದವು. ಈ 'ಮೊಬೈಲ್ ಫೋನ್' ಯಾವಾಗಲೂ ಕೆಟ್ಟದ್ದನ್ನೇ ಮಾಡುತ್ತದೆ ಎಂಬುದು ನನ್ನ ಅಭಿಪ್ರಾಯವಲ್ಲ. ಎಷ್ಟೋ ಬಾರಿ ಆತಂಕ ನಿವಾರಣೆಯಾಗುತ್ತದೆ. ಮೆಚ್ಚುಗೆಗೂ ಪಾತ್ರವಾಗುತ್ತದೆ. ಆದರೆ ನನ್ನ ವೈಯಕ್ತಿಕ ಲಾಭ ನಷ್ಟಗಳನ್ನು ಲೆಕ್ಕಾಚಾರ ಮಾಡಿದಾಗ ನನಗಾದ ನಷ್ಟವೇ ಹೆಚ್ಚೆನಿಸಿತು.

ನಮ್ಮ ಯುವಜನತೆ ಇದನ್ನು ಲಾಲನೆ ಪಾಲನೆ ಮಾಡುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಜೊತೆ ದುಃಖವೂ ಆಗುತ್ತದೆ. ಅವರಿಗೆ ಏಕಾಂತದ ಅರಿವಿನ ಆನಂದವೇ ಆಗಿಲ್ಲ, ಇಲ್ಲವೆ ಏಕಾಂತ ಏನೆಂಬುದೇ ಗೊತ್ತಿಲ್ಲ. 'ಹುತ್ತ ಕಟ್ಟದೆ ಚಿತ್ತ ಮತ್ತೆ ಕೆತ್ತೀನೇನು' ಎಂಬುದು ಅವರಿಗೆ ಹೇಗೆ ಅರ್ಥವಾಗಬೇಕು? ಆಪತ್ಕಾಲದಲ್ಲಿ, ಪ್ರವಾಸದಲ್ಲಿ, ಅಪಘಾತಗಳ ಸಂದರ್ಭದಲ್ಲಿ ಇದರ ಅನುಕೂಲತೆಯನ್ನು ತಳ್ಳಿಹಾಕುವಂತಿಲ್ಲ. ವೈಜ್ಞಾನಿಕ ಮನೋಧರ್ಮಕ್ಕೆ ನನ್ನ ತಕರಾರಿಲ್ಲ. ಆದರೆ ಅನಾವಶ್ಯಕ ಯಾಂತ್ರಿಕ ದಾಸ್ಯದಲ್ಲಿರುವುದು ಮಾನವನ ಘನತೆಯ ಸ್ವಾತಂತ್ರ್ಯದ ಲಕ್ಷಣವಲ್ಲ.

'ಅತಿ ಸರ್ವತ್ರ ವರ್ಜಯೇತ್' ಎನ್ನುವ ಮಾತು ನೆನಪಿನಲ್ಲಿರುವುದು ಕ್ಷೇಮ.

ಹಿಂದಿನ ಕಾಲದಲ್ಲಿ ನಾವು ಧರಿಸುವ ಬಟ್ಟೆಯಿಂದಲೋ; ಮಾತನಾಡುವ ಧಾಟಿಯಿಂದಲೋ, ಅಸಾಧಾರಣ ಸಾಧನೆಯಿಂದಲೋ; ಬರವಣಿಗೆಯ ರೀತಿಯಿಂದಲೋ, ವಿಚಿತ್ರ ನಡವಳಿಕೆಯಿಂದಲೊ ಒಂದು ಐಡೆಂಟಿಟಿ (ಅಸ್ಮಿತೆ) ಪತ್ತೆಯಾಗುತ್ತಿತ್ತು. ಈಗ ಹಾಗಲ್ಲ. ನಗರದ ಬಹುಪಾಲು ಜನರ ಕೊರಳಲ್ಲಿ ಒಂದು ''ಐಡೆಂಟಿಟಿ ಕಾರ್ಡು'' ಮತ್ತು ಒಂದು 'ಮೊಬೈಲ್ ಫೋನ್' ತೂಗಾಡುತ್ತಿರುತ್ತದೆ. ಕೆಲವು ಹೆಣ್ಣು ಮಕ್ಕಳಂತೂ ತಾಳಿಗಿಂತ ಇದೇ ಹೆಚ್ಚು ಉಪಯುಕ್ತ ಎಂದು ಭಾವಿಸಿದ್ದಾರೆ. ಇದನ್ನು ನಾನು ತಳ್ಳಿಹಾಕುವುದಿಲ್ಲ, ನಾನು ಮೊದಲಿನಿಂದಲೂ ಫೋನಿನ ಸಂಸ್ಕೃತಿಗೆ ಒಗ್ಗಿಕೊಂಡಿಲ್ಲ, ಐದಾರು ನಿಮಿಷ ಮಾತನಾಡುವುದರಲ್ಲಿ ಖಾಲಿಯಾಗಿಬಿಡುತ್ತೇನೆ.

ಆದ್ದರಿಂದ ನನ್ನ ಚಿಕ್ಕ ಸೊಸೆಯ ಹುಟ್ಟು ಹಬ್ಬವನ್ನು ನೆಪ ಮಾಡಿಕೊಂಡು ಉಡುಗೊರೆಯಾಗಿ ನನ್ನ ಮೊಬೈಲ್ ಕೊಟ್ಟುಬಿಟ್ಟೆ. ಕಳೆದುಕೊಂಡ ಸ್ವಾತಂತ್ರ್ಯವನ್ನು ಕಂಡುಕೊಂಡೆ. ಇದನ್ನು ಕಂಡು ನನ್ನ ಕೊಂಚ ಮುಂಗೋಪಿ ಮಗ ಗುರಾಯಿಸಿದ. ನಾನು 'ನೋಡಯ್ಯ, ಇದನ್ನು ನೀನು ನನ್ನ ಹುಟ್ಟುಹಬ್ಬಕ್ಕೆ ಕೊಡಿಸಿದ್ದು ನಿಜ, ಅದಕ್ಕಾಗಿ ಧನ್ಯವಾದಗಳು. ಈಗ ಇದನ್ನು ನಿನಗೆ ಪ್ರಿಯವಾದವರಿಗೇ ಕೊಟ್ಟಿದ್ದೇನೆ. ಅದರ

ಅವಶ್ಯಕತೆ ನನಗಿಂತ ಅವರಿಗೇ ಹೆಚ್ಚು' ಎಂದು ವೃತ್ತಿ ರಂಗಭೂಮಿ ಶೈಲಿಯಲ್ಲಿ ಮಾತಾಡಿ ಸಮಾಧಾನಪಡಿಸಿದೆ. ಅದನ್ನು ನನ್ನ ಸೊಸೆಗೆ ಥಾಟಿಸಿ ಧನ್ಯನಾದೆ.

ಇದು ನನ್ನ ಹೆಂಡತಿಗೆ ಸುತರಾಂ ಇಷ್ಟವಿರಲಿಲ್ಲ. ಇಂದಿನ ಪ್ರತಿಷ್ಠೆಯ ಸಂಕೇತವಾಗಿ ನಾನೇ ಅದನ್ನು ಉಳಿಸಿಕೊಳ್ಳಲು ಎಂಬುದು ಆಕೆಯ ಪ್ರಬಲವಾದ ಇಚ್ಛೆಯಾಗಿತ್ತು.

ನಮ್ಮ ಧಾವಂತ ಬದುಕಿನ ಒದ್ದಾಟದಲ್ಲಿ, ಹೊಟ್ಟೆಪಾಕ ಸಂಸ್ಕೃತಿಯ ಚಡಪಡಿಕೆಯಲ್ಲಿ ಖಾಸಗಿ ಬದುಕಿನ ಖುಷಿಯನ್ನು ಸರಳತೆಯನ್ನು ಮರೆತುಬಿಡುತ್ತೇವೆ. ಬಂದವನೇ ಸ್ವಾತಂತ್ರ್ಯ ಎಂಬ ಭ್ರಮೆಯಲ್ಲಿರುತ್ತೇವೆ. ಮೊಬೈಲ್ ಫೋನ್‌ನ ಮಾಂತ್ರಿಕತೆಯಿಂದ ಪತ್ರ ಸಾಹಿತ್ಯದ ಪ್ರಕಾರವೇ ಎಕ್ಕುಟ್ಟೋಯಿತು, ಶಾಕುಂತಲಾ - ದುಷ್ಯಂತ ನಳ - ದಮಯಂತಿಯರ ಪತ್ರ ವ್ಯವಹಾರ ಸ್ವಾರಸ್ಯ ಇಂದಿನವರಿಗೆ ಹೇಗೆ ಅರ್ಥವಾಗಬೇಕು? ಪತ್ರಗಳಿಂದ ಬಿಚ್ಚಿಕೊಳ್ಳುತ್ತಿದ್ದ ವ್ಯಕ್ತಿತ್ವ ಇಂದು ಸಾಧ್ಯವಿಲ್ಲ. ಇತ್ತೀಚೆಗೆ ನನ್ನ ಚಿಕ್ಕ ಮಗ ಹೊಸದಾಗಿ ಪ್ರಾರಂಭಿಸಿದ್ದಾನೆ. 'ನೀವು ಎಲ್ಲಿ ಹೋಗುತ್ತೀರಿ? ಹೇಗಿದ್ದೀರಿ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮತ್ತೊಮ್ಮೆ ನಿಮಗೆ ಮೊಬೈಲ್ ಫೋನ್ ಕೊಡಿಸುತ್ತೇನೆ' ಎಂದು ಹೆದರಿಸುತ್ತಿದ್ದಾನೆ. ಭಯೋತ್ಪಾದಕನಂತೆ ಗುಟುರು ಹಾಕುತ್ತಿದ್ದಾನೆ. ಏನು ಮಾಡಬೇಕೋ ಗೊತ್ತಾಗುತ್ತಿಲ್ಲ.

ನಾವು ಮನೆ ಕಟ್ಟಿಸಿ ಹತ್ತು ವರ್ಷವಾಯಿತು. ಆಗ ನನಗಿದ್ದ ಹಣದ ಕೊರತೆಯಿಂದ ಶೌಚಗೃಹಗಳಿಗೆ 'ಟೈಲ್ಸ್' ಹಾಕಿಸಿರಲಿಲ್ಲ. ಮನೆಯ ಶೋಭೆಯನ್ನು ಹೆಚ್ಚಿಸಿರಲಿಲ್ಲ. ಆದರೂ ಯಾವ ತೊಂದರೆಯೂ ಇಲ್ಲದೆ ಹತ್ತು ವರ್ಷಗಳನ್ನು ಕಳೆದಿದ್ದೇನೆ. ನನ್ನ ಹೆಂಡತಿಗೆ 'ಟೈಲ್ಸ್' ಹಾಕಿಸಲೇಬೇಕೆಂಬ ಆಸೆ ಮೊದಲಿನಿಂದಲೂ ಇತ್ತು. ಇತ್ತೀಚೆಗೆ ನನ್ನ ಚಿಕ್ಕ ಮಗ ಇನ್ನೊಂದು ಕೊಠಡಿಯನ್ನು ಕಟ್ಟಿಸಿದನು. ನಮ್ಮ ಹಳೆಯ ಶೌಚಾಲಯಗಳಿಗೆ ಶುಕ್ರದೆಸೆ ಪ್ರಾರಂಭವಾಯಿತು. 'ಟೈಲ್ಸ್' ಹಾಕಿಸುವ ನಿರ್ಧಾರ ಕಾರ್ಯರೂಪಕ್ಕೆ ಬಂದೇಬಿಟ್ಟಿತು. ನನ್ನ ಹೆಂಡತಿಗೆ ಎಲ್ಲಿಲ್ಲದ ಹಿಗ್ಗು, ಅವರಿವರು ಬರುತ್ತಿರುತ್ತಾರೆ, ಒಳ್ಳೆಯ ಶೌಚಾಲಯ ಬೇಡವೆ? ಎನ್ನುವ ರಾಗಕ್ಕೆ ಕೊನೆಗಾಲ ಬಂದೇಬಿಟ್ಟಿತು. ಹತ್ತು ವರ್ಷದ ಹಳೆಯ ಶೌಚಾಲಯಗಳು 'ಫೇಸ್ ಲಿಫ್ಟ್' ಪಡೆದು ಲಕಲಕನೆ ಹೊಳೆಯಲಾರಂಭಿಸಿದವು. ಅದಕ್ಕೆ 'ಜೆಟ್ ಸ್ಪ್ರೇ ಗನ್' ಜೋಡಿಸಿದನು. ನನಗೆ ಮೊದಲು ಅದು ಏನೆಂಬುದೇ ಅರ್ಥವಾಗಲಿಲ್ಲ. ಅದು ನಮ್ಮ ಅಂಡನ್ನು ಶುದ್ಧೀಕರಿಸಲು ಇರುವ ಸಾಧನವೆಂದು ತಿಳಿಯಿತು. ಶೌಚಾಲಯಗಳಲ್ಲಿ 'ಟಿಷ್ಯೂ ಪೇಪರ್'ಗೂ ಅವಕಾಶ ಕಲ್ಪಿಸಿದನು. ಅದೂ ಕೂಡ ಅದೇ ಕೆಲಸಕ್ಕೆ ಎಂದು ಗೊತ್ತಾಯಿತು.

ನಾನು ಬಹಳ ಸಂಕೋಚದಿಂದ ನನ್ನ ಚಿಕ್ಕ ಸೊಸೆ ಇಲ್ಲದ ವೇಳೆಯಲ್ಲಿ 'ಮಗನೇ, ಈ ಸಲಕರಣೆಗಳನ್ನೆಲ್ಲಾ ನಿಮ್ಮ ರೂಮಿನಲ್ಲೇ ಹಾಕಿಸಿಕೊಳ್ಳುವಂತರಾಗಿ. ನನಗೆ ಇವುಗಳ ಅಭ್ಯಾಸವಿಲ್ಲ' ಎಂದು ವೃತ್ತಿ ರಂಗಭೂಮಿ ಶೈಲಿಯಲ್ಲಿ ಹೇಳಿದೆ. ಕೂಡಲೇ ಅಮ್ಮ ಮತ್ತು ಮಗ ಯದ್ವಾ-ತದ್ವಾ ತರಾಟೆಗೆ ತೆಗೆದುಕೊಂಡರು. ''ನಿಮಗೆ ಯಾವ ಕಾಲದಲ್ಲಿ ಹೇಗಿರಬೇಕು ಎಂಬುದು ಗೊತ್ತಿಲ್ಲ, ಹೈಟೆಕ್ ಯುಗದಲ್ಲಿ ಹೈಟೆಕ್ಕಾಗಿರಬೇಕು. ಈಗ ಬಾತ್‌ರೂಂಗಳಲ್ಲಿ ಇವೆಲ್ಲಾ ಸರ್ವೇ ಸಾಮಾನ್ಯ. ನಿಮಗೆ 'ಗ್ಲೋಬಲ್ ವಿಲೇಜ್'

ಕಲ್ಪನೆಯೇ ಇಲ್ಲ. ಓಬಿರಾಯನ ಕಾಲದಂತೆ ಮಾತನಾಡಬೇಡಿ' ಎಂದು ಬಾಯಿ ಮುಚ್ಚಿಸಿದರು. ನಾನು ಮನಸ್ಸಿನಲ್ಲೇ ಗ್ಲೋಬಲ್ ನೀವೇ ಇಟ್ಟುಕೊಳ್ಳಿ. ಪ್ಲೀಜ್ ನನಗೆ ಸಾಕು ಅಂದುಕೊಂಡೆ. ಇದನ್ನು ವಿದೇಶಗಳಲ್ಲಿ ಹೇಗೆ ಬಳಸುತ್ತಾರೆ? ಏಕೆ ಬಳಸುತ್ತಾರೆ? ದೊಡ್ಡ ದೊಡ್ಡ ಹೋಟೆಲುಗಳಲ್ಲಿ ಇವುಗಳ ವೈವಿಧ್ಯತೆ ಹೇಗಿರುತ್ತದೆ? ಕಾಲಕ್ಕೆ ತಕ್ಕಂತೆ ಹೇಗೆ ಬದಲಾಗಬೇಕು? ಎಂದು ಇಡೀ ದಿನ ಶೌಚೋಪದೇಶವಾಯಿತು.

ಇವರು ಇಷ್ಟೆಲ್ಲ ಹೇಳುತ್ತಾರಲ್ಲಾ ಎಂದು ಒಂದು ದಿನ 'ಜೆಟ್ ಸ್ಪ್ರೇ ಗನ್' ಬಳಸಲು ಗಟ್ಟಿ ಮನಸ್ಸು ಮಾಡಿದೆ. ಮೊದಲು ಅದನ್ನು ಬಲಗೈಯಲ್ಲಿ ಹಿಡಿದುಕೊಳ್ಳಬೇಕೊ ಎಡಗೈಯಲ್ಲಿ ಹಿಡಿದುಕೊಳ್ಳಬೇಕೊ ಗೊತ್ತಾಗದೆ ಗೊಂದಲದಲ್ಲಿ ಬಿದ್ದೆ. ಹಾಗೂ ಹೀಗೂ ಕಷ್ಟಪಟ್ಟು ಬಲಗೈಯಲ್ಲಿದ್ದ ಗನ್ ಅನ್ನು ಎಡಗೈಗೆ ತೆಗೆದುಕೊಂಡು ಒತ್ತಿದೆ. ನೀರು ಇನ್ನಷ್ಟು ಬಡಿಯಿತು. ಒಟ್ಟಿನಲ್ಲಿ ನನ್ನ ಪಂಚೆ, ನಿಕ್ಕರ್, ಬನೀನು ಸಂಪೂರ್ಣವಾಗಿ ಒದ್ದೆಯಾದುವು. ಹೆಚ್ಚು ಕಡಿಮೆ ತಣ್ಣೀರಿನ ಸ್ನಾನವೇ ಆಗಿಹೋಯಿತು. ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಬದಲಾಯಿಸಿ ಒತ್ತುತ್ತಿದೆ. ಸ್ವಲ್ಪ ಸಮಾಧಾನ ಸಿಕ್ಕಿತು. ಶೌಚಾಲಯದ ಉದ್ದೇಶ ನೆರವೇರಿತು. ನಾನು ಚಿಕ್ಕಂದಿನಲ್ಲಿ ಸೈಕಲ್ ಕಲಿತಿದ್ದರ ನೆನಪಾಯಿತು. ಅಂದು ಶೌಚಾಲಯದ ಕೆಲಸ ಹಾಗೂ ಮಜ್ಜನದ ಕೆಲಸ ಒಟ್ಟಿಗೆ ಮುಗಿಯಿತು.

ನನಗೆ ಇನ್ನೂ ಅರ್ಥವಾಗದ ಒಂದು ಸಂಗತಿಯಿದೆ. 'ಜೆಟ್ ಸ್ಪ್ರೇ ಗನ್' ಅನ್ನು ಕಮೋಡ್ ಮೇಲೆ ಪ್ರಯೋಗಿಸಿಕೊಳ್ಳಬೇಕೊ, ಕಮೋಡ್ ಎಂಬ ಸಿಂಹಾಸನ ಇಳಿದ ಮೇಲೆ ಪ್ರಯೋಗಿಸಬೇಕೋ ಇನ್ನೂ ಜ್ಞಾನೋದಯವಾಗಿಲ್ಲ. ಅವರಿವರನ್ನು ಕೇಳಲು ಮುಜುಗರ, ನಾಚಿಕೆ ಹೆಂಡತಿ ಮಕ್ಕಳನ್ನು ಕೇಳಿದರೆ ಲೇವಡಿ ಮಾಡಿಬಿಡುತ್ತಾರೆ. ನನ್ನ 'ಜೆಟ್ ಸ್ಪ್ರೇ ಗನ್' ಪ್ರಯೋಗದ ಸಂದರ್ಭದಲ್ಲಿ ಅದನ್ನು ಹಿಂದು-ಮುಂದಕ್ಕೆ; ಅಕ್ಕ-ಪಕ್ಕಕ್ಕೆ ಎಳೆದಾಡಿದ್ದಕ್ಕೆ ಗನ್ ಮುಂಭಾಗ ನನ್ನ ಕೈಗೂ ಬಂದುಬಿಟ್ಟಿತು. ಆಗ ಹೊರಬಂದ ನಾನು 'ಪ್ಲಂಬರ್ ಇದನ್ನು ಸರಿಯಾಗಿ ಫಿಕ್ಸ್ ಮಾಡಿಲ್ಲ'ವೆಂದು ಗೊಣಗಾಡುವ ನಾಟಕವಾಡಿದೆ. ನನ್ನ ಮೇಲೆ ಬರುವ ತಪ್ಪಿನಿಂದ ಬಚಾವಾದೆ. 'ನೀವೇ ಕಿತ್ತುಹಾಕಿದಿರೋ? ಆ ಪ್ಲಂಬರ್ ಸರಿಯಾಗಿ ಫಿಕ್ಸ್ ಮಾಡಲಿಲ್ಲವೋ ಯಾರಿಗೆ ಗೊತ್ತು' ಎಂದಳು ನನ್ನ ಧರ್ಮಪತ್ನಿ. ಮಗ ಅದನ್ನು ಕೂಡಲೇ ಸರಿಪಡಿಸಿದನು. ಈಗ ನಾನೊಂದು ಉಪಾಯ ಕಂಡುಕೊಂಡಿದ್ದೇನೆ. ಯಾರಿಗೂ ತಿಳಿಯದಂತೆ ನಾನೊಂದು ಮಗ್ಗನ್ನು ಅಲ್ಲಿ ಇಟ್ಟುಕೊಂಡಿದ್ದೇನೆ. ನನ್ನ ಹಳೆಯ ಅಭ್ಯಾಸದಂತೆ ಶುಚಿ ಮಾಡಿಕೊಳ್ಳುತ್ತೇನೆ. ನನ್ನ ಕೆಲಸವಾದ ಮೇಲೆ ಕಮೋಡನ್ನು ಶುಚಿಗೊಳಿಸಲು 'ಜೆಟ್ ಸ್ಪ್ರೇ ಗನ್' ಬಳಸುತ್ತೇನೆ. ಈ ವಿಷಯ ಮನೆಯಲ್ಲಿ ಯಾರಿಗೂ ಗೊತ್ತಿಲ್ಲ. ಈ ವಿಷಯದಲ್ಲಾದರೂ ನಾನು ನಾಗರೀಕನಾದೆ ಎಂದು ಅವರು ತಿಳಿಸಿದ್ದಾರೆ.

ಅರವತ್ತು ವರ್ಷಗಳ ಪದ್ಧತಿಯನ್ನು ಒಂದು ಮುಂಜಾನೆ ಬದಲಾಯಿಸುವುದು ನನಗಂತೂ ಕಷ್ಟದ ಕೆಲಸ. ಹಳೆಯ ಪದ್ಧತಿಯ ಪ್ರಕಾರ ನಡೆದುಕೊಂಡರೆ ಮನಸ್ಸಿಗೊಂದು ಸಮಾಧಾನ. ಇನ್ನು 'ಟಿಶ್ಯೂ ಪೇಪರ್' ಬಳಸುವ ಪದ್ಧತಿ ನನ್ನಿಂದ

ದೂರವೇ ಉಳಿಯಿತು. ಏಕೆಂದರೆ ಅದನ್ನು ಬಳಸಿದ ಮೇಲೂ ನಾವು ಸ್ವಚ್ಛವಾದೆವು ಎಂದು ನನಗನಿಸುವುದಿಲ್ಲ ಬಟ್ಟೆ ಹಾಕಿಕೊಂಡು ಓಡಾಡುತ್ತಿದ್ದರೆ ಸದಾ ಪಾಪಪ್ರಜ್ಞೆ ಕಾಡುತ್ತದೆ ಎನ್ನುವ ಗಾಬರಿ. ಮುಲಮುಲ ಒದ್ದಾಡಿದಂತಾಗುತ್ತದೆ ಎನ್ನುವ ಭಾವನೆ. ನಮ್ಮ ನಡಿಗೆಯ ರೀತಿಯೇ ಬದಲಾಗಬಹುದೆಂಬ ಹೆದರಿಕೆ. ನೀರಿನ ಮೂಲಕ ಸುಲಭವಾಗಿ ಆಗುವ ಕೆಲಸಕ್ಕೆ ಈ ಪ್ರಾಣಾಯಾಮ ಏಕೆ ಎಂದು ತಿಳಿಯುವುದಿಲ್ಲ. ವಿದೇಶಿಯರು ಬಳಸುವ ಸೌಕರ್ಯವೇ ನಮ್ಮ ಸೌಭಾಗ್ಯವೆಂದು ಬಯಸುವುದು ತರವಲ್ಲ. ಇದು ಗುಲಾಮಗಿರಿಯನ್ನು ಇನ್ನೊಂದು ರೀತಿಯಲ್ಲಿ ಒಪ್ಪಿಕೊಂಡಂತೆಯೇ ಸರಿ ಅಲ್ಲವೆ?

ಇಂದಿನ ನಾಗರೀಕತೆಯ ನಾಜೋಕೆಂದರೆ ಸುಲಭವಾಗಿ ಸರಳವಾದ ರೂಢಿಯಿಂದ ಬಂದ ಪದ್ಧತಿಯನ್ನು ಕೈಬಿಟ್ಟು ಕಾಂಪ್ಲಿಕೇಟ್ ಮಾಡಿಕೊಳ್ಳುವುದೇ ವಾಡಿಕೆ. ಇದನ್ನು ಹೇಳಿದರೆ 'ಆರೋಗ್ಯದ ಬಗ್ಗೆ ನಿಮಗೆ ಕಾಳಜಿಯಿಲ್ಲ' ಎಂದು ಉಗ್ಗಡಿಸುತ್ತಾರೆ. ಸಾವಿರಾರು ವರ್ಷಗಳಿಂದ ಚಕ್ರವರ್ತಿಗಳು, ರಾಜಮಹಾರಾಜರು, ಮಂತ್ರಿ ಮಹೋದಯರು, ಪಂಡಿತೋತ್ತಮರು, ಸಂತರು, ಪಾಮರರು ಬಳಸಿದ ನೀರು ಮತ್ತು ಎಡಗೈಯನ್ನು ಒಂದು ಅನಾರೋಗ್ಯವೆಂದು ಕಪ್ಪುಪಟ್ಟಿಗೆ ಸೇರಿಸುವುದು ಸರಿಯಲ್ಲವೆಂದು ನನ್ನ ನಂಬಿಕೆ. ನಮ್ಮ ದೇಶದಲ್ಲಿ ಬಹುಪಾಲು ಗ್ರಾಮಾಂತರ ವಾಸಿಗಳಿಗೆ ಬಯಲೇ ಶೌಚಾಲಯವಾಗಿರುವಾಗ ಈ ಕಾಂಪ್ಲಿಕೇಶನ್ ನನ್ನನ್ನು ಗೊಂದಲಕ್ಕೆ ಈಡುಮಾಡಿದೆ.

ನನ್ನ ಸುಪ್ರತಿಷ್ಠೆಯ ದೊಡ್ಡ ಮಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಶೌಚಾಲಯದಲ್ಲಿ ದಿನಪತ್ರಿಕೆ ಪುಸ್ತಕ ಓದಲು ಒಂದು ಚಿಕ್ಕ ಸ್ಟ್ಯಾಂಡ್ ಇಟ್ಟುಕೊಂಡಿದ್ದಾನೆ. ಒಂದು ವಾಲ್‌ಫೋನ್ ವ್ಯವಸ್ಥೆಯನ್ನೂ ಮಾಡಿಸುವನಂತೆ. ಇದೆಲ್ಲ ನೋಡಿದರೆ ನನಗೆ ಗಾಬರಿಯಾಗುತ್ತದೆ. ಅಲ್ಲಿ ಕೂತರೆ ಮುಗಿಯಿತು. ನಿದ್ದೆ ಬಂದಾಗ ಎದ್ದು ಬರುವುದು, ನಿದ್ದೆಗೂ ಒಂದು ವ್ಯವಸ್ಥೆ ಮಾಡಿದರೆ ಮುಗಿಯಿತು. ಇದೆಲ್ಲವನ್ನು ನೋಡಿದಾಗ ನನಗೆ ಮತ್ತೆ ಮತ್ತೆ ಚಾರ್ಲಿ ಚಾಪ್ಲಿನ್‌ನ 'ಮಾಡರ್ನ್ ಟೈಂಸ್' ನೆನಪಾಗುತ್ತದೆ. ಯಾವುದಕ್ಕೂ ಒಂದು ಮಿತಿ ಇರಬೇಕಲ್ಲವೆ?

ನಮ್ಮನ್ನು ನಾವು ನಾಗರಿಕತೆಯ ಸವಲತ್ತುಗಳಲ್ಲಿ ಯದ್ವಾ ತದ್ವಾ ತುರುಕಿಕೊಂಡಾಗ ನಾವು ಸಹಜ ಮಾನವರಾಗಿ ಬಾಳುತ್ತೇವೆಯೆ? ಮಾನವೀಯತೆಗೆ ಮಣೆ ಹಾಕುತ್ತೇವೆಯೆ? ನಾವು ಇಪ್ಪತ್ತೊಂದನೆಯ ಶತಮಾನದಲ್ಲಿ ಉಸಿರಾಡುತ್ತಿದ್ದರೂ ಕಳೆದುಹೋದ ಶತಮಾನದಲ್ಲಿ ಬದುಕಿರುತ್ತೇವೆ. ನಾಗರೀಕತೆಯ ಪ್ರಪಂಚಕ್ಕೆ ಹೊದಿಕೊಳ್ಳುವುದಿಲ್ಲ. ಅರವತ್ತು ದಾಟಿದ ಈ ಅರುಳು - ಮರುಳು ವ್ಯಕ್ತಿ ಇನ್ನೂ ಏನೇನು ಕಾಣಬೇಕೋ ಗೊತ್ತಿಲ್ಲ. ನನ್ನ ವಯಸ್ಸಿನಲ್ಲಿ ನನ್ನ ಮನಸ್ಸಿಗೆ ನೆಮ್ಮದಿ ನೀಡುವ ಪದ್ಧತಿ ನನಗೆ ಮುಖ್ಯ. ಅವರವರ ಪದ್ಧತಿ ಅವರವರಿಗೆ ಮುಖ್ಯ. ಇನ್ನೊಬ್ಬರನ್ನು ಬದಲಾಯಿಸಲು ಒತ್ತಾಯದ ಹಿಂಸೆ ಮಾಡುವುದು ತರವಲ್ಲ. ನನಗಂತೂ ಒಂದು ದೊಡ್ಡ ಸಮಾಧಾನ, ಏಕೆಂದರೆ ನಾನು ಅರವತ್ತು ದಾಟಿದ್ದೇನೆ. ''ಕಾಲೋ ಹಿ ದುರತಿಕ್ರಮ'' ಎನ್ನುವ ಮಾತೇ ಇದೆಯಲ್ಲ.

❖❖❖

ಒಂದು ನದಿಯ ಕಥೆ

- ಶಿವು

ಇಂದ್ರಲೋಕದಲ್ಲಿ ಹಾಹಾಕಾರ

'ವೈತರಣಿ ನಮ್ಮದು', 'ದೇವಜಲ ದೇವತೆಗಳಿಗೆ', 'ಮಹಾವಿಷ್ಣುವಿಗೆ ಧಿಕ್ಕಾರ' ಎಂಬೆಲ್ಲ ಕೂಗುಗಳು ಅಮರಾವತಿಯ ಮುಖ್ಯರಸ್ತೆಗಳಲ್ಲಿ ಮೊಳಗುತ್ತಿದ್ದವು. 'ತಪಸ್ವಿ ಪ್ರೋಮನಾಡ್' ನಲ್ಲಿದ್ದ 'ನಾರದ ಎನ್‌ಕ್ಲೇವ್'ನ ತೆರೆದ ಸಭಾಂಗಣದಲ್ಲಿ ಅಂದಿನ ಪ್ರತಿಭಟನಾ ಸಭೆ ಆಗತಾನೇ ಪ್ರಾರಂಭವಾಗಲಿತ್ತು. ಸ್ವಯಂ ಪ್ರೇರಣೆಯಿಂದ ದೇವತೆಗಳ ನಾಯಕತ್ವ ವಹಿಸಿದ್ದ ಬಾಬ್ಕಟ್ ಊರ್ವಶಿ, ಜಾರ್ಜೆಟ್ ಮೇಲೆ ಮಿರರ್‌ವರ್ಕ್ ಇದ್ದ ಸೀರೆ ಧರಿಸಿ ವೇದಿಕೆಯ ಮುಂದೆ ಸರಬರ ಓಡಾಡುತ್ತಿದ್ದುದು ಕಣ್ಣಿಗೆ ಹಬ್ಬವನ್ನುಂಟುಮಾಡುವ ದೃಶ್ಯವಾಗಿತ್ತು. ಗಂಧರ್ವ ನಾಯಕರು, ಕಿಂಪುರುಷ ಮುಂದಾಳುಗಳು ಆಗತಾನೇ ವೇದಿಕೆಯನ್ನು ಅಲಂಕರಿಸುತ್ತಿದ್ದರು. ಮೊಟ್ಟಮೊದಲ ಭಾಷಣ ಸಹಜವಾಗಿ ಊರ್ವಶಿಯದೇ.

'ದೇವಬಾಂಧವರೇ,

ಇಂದು ಬೆಳಗ್ಗೆ ನಮ್ಮ ವೈತರಣಿ ವಿವಾದದ ಬಗ್ಗೆ ಮಹಾವಿಷ್ಣು ನೀಡಿದ ತೀರ್ಪು ನಿಮಗೆಲ್ಲಾ ತಿಳಿದೇ ಇದೆ. ನಾನು ಮಹಾವಿಷ್ಣುವಿನ ಹೆಸರಿನಿಂದ ಶ್ರೀಮನ್ ಎಂಬ ಗುಣವಾಚಕವನ್ನು ತೆಗೆದುಹಾಕಿದ್ದಕ್ಕೆ ಕಾರಣವನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ. ವೈತರಣಿ ಬಗ್ಗೆ ನಿಷ್ಪಕ್ಷಪಾತದಿಂದ ತೀರ್ಪು ನೀಡುವ ಬದಲು, ಪ್ರೇತಲೋಕದ ಅಧಿಕಾರಿಗಳಿಂದ ಪ್ರೇರಿತನಾಗಿ ಅವರ ಪರವಾಗಿಯೇ ಈತ ತೀರ್ಪು ನೀಡಿದ್ದಾನೆ. ನಮ್ಮ ನೀರಿಗೆ ಅಣೆಕಟ್ಟು ಕಟ್ಟಲು ಪ್ರೇತರಾಜನ ಅಪ್ಪಣೆ ಪಡೆಯಬೇಕಂತೆ. ಇದು ಯಾವ ಲೋಕದ ನ್ಯಾಯ?' (ಭಯಂಕರ ಕರತಾಡನ)

ಈ ಅನ್ಯಾಯ ತುಂಬಿದ ತೀರ್ಪನ್ನು ಪ್ರತಿಭಟಿಸಲು ಇಂದು ಇಲ್ಲಿ ಇಷ್ಟು ಅಗಾಧ ಸಂಖ್ಯೆಗಳಲ್ಲಿ ಸೇರಿದ್ದೇವೆ. ನಮ್ಮ ನಾಯಕ ಇಂದ್ರದೇವ ಇಲ್ಲಿಗೆ ಬಂದು ತನ್ನ ಮುಂದಿನ ಕ್ರಮವನ್ನು ನಮಗೆಲ್ಲಾ ತಿಳಿಸಬೇಕಾಗಿತ್ತು. ಆದರೆ ಪಾಪ, ಶಚೀದೇವಿಗೆ ಮೈಯ್ಯಲ್ಲಿ ಸರಿ ಇಲ್ಲವಂತೆ . ಆಕೆಯ ಶುಶ್ರೂಷೆ ಮಾಡಲು ಮನೆಯಲ್ಲೇ ಉಳಿದಿದ್ದಾನಂತೆ. (ಸಭೆಯಲ್ಲಿ ನಗು) ಇಂತಹ ಘನಚಿದಾರಿ ನಾಯಕರನ್ನು ಕಟ್ಟಿಕೊಂಡು ನಾವು ನಮ್ಮ ಹೋರಾಟ ನಡೆಸಬೇಕಾಗಿದೆ. ಈಗ ನಮ್ಮ ಗಂಧರ್ವರ ನಾಯಕ ಚಿತ್ರಸೇನ ತನ್ನ ಅಭಿಪ್ರಾಯಗಳನ್ನು ತಿಳಿಸುತ್ತಾನೆ.'

ಚಿತ್ರಸೇನ ಎದ್ದುನಿಂತು ಬಹು ಗಾಂಭೀರ್ಯದಿಂದ ಮಾತನಾಡಲು ಪ್ರಾರಂಭಿಸಿದ.

'ಮಾನ್ಯ ಸಭಾಸದರೇ,

ನಾನ್ನೂರು ಟಿಎಂಸಿಎಫ್ಟಿ ನೀರನ್ನು ಪ್ರತಿ ತಿಂಗಳು ನಾವು ಪ್ರೇತಲೋಕಕ್ಕೆ ಸರಬರಾಜು ಮಾಡಬೇಕಂತೆ. ಇದು ಶ್ರೀಮನ್ಮಹಾವಿಷ್ಣುವಿನ ತೀರ್ಪು.

ಈ ತೀರ್ಪಿನ ಬಗ್ಗೆ ಶ್ರೀಮನ್ಮಹಾವಿಷ್ಣುವಿಗೆ ನನ್ನದೊಂದು ನಮ್ರ ಪ್ರಶ್ನೆ. 'ವೈತರಣಿ ನಿಮ್ಮಪ್ಪನ ಮನೆ ಗಂಟೇನೋ ವಿಷ್ಣು?' (ಪ್ರಚಂಡ ಕರತಾಡನ) ನಾನ್ಹೂರಿರಲಿ, ನಾಲ್ಕು ಟಿಎಂಸಿಎಫ್ಟಿ ನೀರನ್ನೂ ಸಹಾ ನಾವು ಬಿಡುವುದಿಲ್ಲ. ಪ್ರೇತಲೋಕದ ಗಡಿಯಲ್ಲಿ ಕಿಂಪುರುಷರ ತಾಂಡವಿದೆ. ಬೇಕೆಂದರೆ ಅಲ್ಲಿ ತ್ವರಿತಗತಿಯಲ್ಲಿ ಒಂದು ಒಡ್ಡನ್ನು ಕಟ್ಟಿ ಹರಿಯುವ ನೀರಿಗೆ ದಿಗ್ಬಂಧನ ಹಾಕುವ ತಾಖತ್ತು ನಮ್ಮ ಕಿಂಪುರುಷ ಬಾಂಧವರಿಗಿದೆ. ಪ್ರೇತಲೋಕದ ಖೂಳರಿಗೆ ಇದೇ ನಮ್ಮ ಎಚ್ಚರಿಕೆ. ನಮ್ಮ ಕಿಂಪುರುಷ ಮುಂದಾಳು ನನ್ನನ್ನು ಬೆಂಬಲಿಸುವನೆಂಬ ನಂಬಿಕೆ ವಿಶ್ವಾಸ ನನಗಿದೆ' ಚಿತ್ರಸೇನನ ಭಾಷಣದ ನಂತರ ಸಭೆಯಲ್ಲಿ ಗುಜುಗುಜು ಶುರುವಾಯಿತು. ಆಗ ಕಿಂಪುರುಷರ ಮುಖಂಡ ಅಶ್ವದೇಹಿ ತನ್ನ ನಾಲ್ಕೂ ಕಾಲುಗಳ ಮೇಲೆ ಎದ್ದು ನಿಂತು ತನ್ನ ಭಾಷಣ ಪ್ರಾರಂಭಿಸಿದ.

'ಮಾನ್ಯ ಚಿತ್ರಸೇನ ಅವರು ಬಹು ಉದ್ವೇಗದಿಂದ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಶ್ರೀಮನ್ಮಹಾವಿಷ್ಣುವಿನ ತೀರ್ಪು ಎಂದರೆ ಕಡಲೆ ಪುರಿ ಎಂದು ತಿಳಿದಿದ್ದಂತಿದೆ ನಮ್ಮ ಮಿತ್ರರು. ನಮ್ಮ ಕಿಂಪುರುಷ ಸಮಾಜದವರು ಒಡ್ಡು ಕಟ್ಟಬೇಕಂತೆ. ನೀರನ್ನು ತಡೆಯಬೇಕಂತೆ. ಇದರಿಂದ ಕೋಪಗೊಂಡ ವಿಷ್ಣು ತನ್ನ ಸುದರ್ಶನ ಚಕ್ರವನ್ನು ನಮ್ಮ ಬಡಪಾಯಿಗಳ ಮೇಲೆ ಪ್ರಯೋಗಿಸಿದರೆ ಮಾನ್ಯ ಚಿತ್ರ ಸೇನರು ಬಂದು ರಕ್ಷಿಸುತ್ತಾರಂತೋ? ಕಂಡವರ ಮಕ್ಕಳನ್ನು ಬಿಟ್ಟು ಭಾವಿಯ ಆಳ ನೋಡಿದಂತಾಯಿತು ಇವರ ಮಾತು. ಮಹಾದೇವತೆಗಳೇ, ಇವೆಲ್ಲಾ ಲೋಕ ಲೋಕಗಳ ನಡುವಣ ಜಟಿಲ ಪ್ರಶ್ನೆಗಳು. ವಿಷ್ಣುವಿನ ತೀರ್ಪು ನಮಗೆ ಒಪ್ಪಿಗೆಯಾಗದಿದ್ದರೆ, ಪ್ರೇತರಾಜನೊಂದಿಗೇ ನಾವು ಚರ್ಚಿಸಿ ಒಂದು ಒಪ್ಪಂದಕ್ಕೆ ಬರಬಹುದು. ಇದಕ್ಕೆಲ್ಲಾ ಒಣ ಪ್ರತಿಷ್ಠೆ ಬಡಾಯಿ ಮಾತು ಎಂದಿಗೂ ಸಲ್ಲ'

ಅಶ್ವದೇಹಿಯ 'ಒಣಪ್ರತಿಷ್ಟೆ' ಎಂಬ ಹೀಯಾಳಿಕೆಯ ಮಾತು ಕೇಳಿ ಗಂಧರ್ವರು ಉದ್ವಿಗ್ನರಾದರು. ಅವರ 'ಅಶ್ವದೇಹಿಗೆ ಧಿಕ್ಕಾರ' ಕೂಗಿಗೆ ಪ್ರತಿಯಾಗಿ ಕಿಂಪುರುಷರು ದೊಣ್ಣೆಗಳನ್ನೇ ತಂದು ಗಂಧರ್ವರನ್ನು ಸದೆಬದಿಯಲು ಪ್ರಾರಂಭಿಸಿದರು. ಸಭೆಯಲ್ಲಿ ದೊಡ್ಡ ಗಲಾಟೆ ಪ್ರಾರಂಭವಾದದ್ದು ನೋಡಿ ಇಂದ್ರಲೋಕದ ಆರಕ್ಷಕರು ಸಮ್ಮೋಹಿನಿ ಸ್ಪ್ರೇ ಪ್ರಯೋಗಿಸಿ ಇದ್ದವರಿಗೆಲ್ಲಾ ಮತ್ತು ಬರಿಸಿದರು. ಆರಕ್ಷಕರನ್ನು ನೋಡಿ ಮೊದಲು ಪರಾರಿಯಾದವರಲ್ಲಿ ವೇದಿಕೆಯ ಮೇಲಿನ ಮುಖಂಡರು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯ ಕಾಣದು.

ಇಂದ್ರಸಭೆಯಲ್ಲಿ ಮಂತ್ರಾಲೋಚನೆ

ವಾಸ್ತವದಲ್ಲಿ ಶಚೀದೇವಿ ಹುಷಾರಾಗಿಯೇ ಇದ್ದಳು. ಇಂದ್ರದೇವ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳದಿರಲು ಕಾರಣ ಬೇರೆಯೇ ಆಗಿತ್ತು.. ದೇವಗುರು ಬೃಹಸ್ಪತಿ ಮತ್ತು ಇತರ ಹಿರಿಯ ದೇವತೆಗಳೊಂದಿಗೆ ಇಂದ್ರದೇವ ಸಮಾಲೋಚನೆಯಲ್ಲಿ ಮುಳುಗಿದ್ದರಿಂದ ಅಂದು ಆತ ಊರ್ವಶಿಯ ಆಹ್ವಾನವನ್ನು ಮನ್ನಿಸಲು ಆಗಿರಲಿಲ್ಲ. ಮಹಾವಿಷ್ಣು ನೀಡಿದ ತೀರ್ಪಿನಿಂದಾಗಿ ಇಂದ್ರದೇವ ಇಬ್ಬಂದಿಯಲ್ಲಿ ಸಿಲುಕಿದ್ದ. ವೈತರಣಿ

ವಿವಾದದ ಪ್ರಾರಂಭದಲ್ಲಿ ಪ್ರೇತರಾಜ ಮಹಾವಿಷ್ಣುವಿನ ಬಳಿ ದೂರು ತೆಗೆದುಕೊಂಡು ಹೋದಾಗ ಇಂದ್ರದೇವನಿಗೆ ಯಾವ ಆತಂಕವೂ ಇರಲಿಲ್ಲ. ಹೇಗಿದ್ದರೂ ಮಹಾವಿಷ್ಣು ನಮ್ಮ ಕಡೆಗೇ ಎಂದು ದೃಢವಾಗಿ ನಂಬಿದ್ದ ಆತ. ದೇವ ದಾನವರ ಮಧ್ಯೆ ಅಮೃತವನ್ನು ಹಂಚಬೇಕಾದಾಗ ವಿಷ್ಣು ನಮ್ಮ ಕಡೆಗಿರಲಿಲ್ಲವೇ.ಎಂದು ಯೋಚಿಸಿ ನಿಶ್ಚಿಂತೆಯಿಂದ ವಿವಾದದ ತೀರ್ಪನ್ನು ವಿಷ್ಣುವಿಗೇ ಬಿಟ್ಟಿದ್ದ. ಅದು ಹೀಗೆ ಎಡವಟ್ಟಾಗುವುದೆಂದು ಇಂದ್ರ ಕನಸಿನಲ್ಲಿಯೂ ನೆನೆಸಿರಲಿಲ್ಲ.

'ಏನು ಮಾಡೋಣ ದೇವಗುರುಗಳೇ?' ಇಂದ್ರನ ದನಿಯಲ್ಲಿ ಆತಂಕ ತುಂಬಿತ್ತು.

'ಯಾವುದೋ ಓಬೀರಾಯನ ಕಾಲದಲ್ಲಿ ಇದ್ದ ನದೀನೀರಿನ ಒಡಂಬಡಿಕೇನ ಹಿಡಿದುಕೊಂಡು ಪ್ರೇತರಾಜ ತನ್ನ ಕೇಸನ್ನ ಗೆಲ್ಲಿಸಿಕೊಂಡು ಬಿಟ್ಟಿದಾನೆ. ಮಹಾವಿಷ್ಣು ಒಂದು ಬಾರಿ ತೀರ್ಮಾನ ಕೊಟ್ಟಮೇಲೆ ಅದನ್ನು ಜಪ್ಪಯ್ಯ ಅಂದರೂ ಬದಲಿಸಲಾರ. ಈಗ ಪುನಃ ವಿಷ್ಣುವಿನ ಬಳಿ ದೂರು ತೆಗೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಏನೂ ತೋಚ್ತಾನೇ ಇಲ್ವಲ್ಲಾ' ಮೊಟ್ಟಮೊದಲ ಬಾರಿಗೆ ಬೃಹಸ್ಪತಿ ಸ್ಟಂಪ್ ಆಗಿದ್ದ. ಆಗ ತನ್ನ ಉನ್ನತ ಸಿಂಹಾಸನದಮೇಲೆ ವಿರಾಜಮಾನನಾಗಿದ್ದ ಶನಿ ಮಹಾರಾಜ ತನ್ನ ಗಂಭೀರವಾದ ದನಿಯಲ್ಲಿ,

'ಇಂದ್ರದೇವ, ಸಾಮಾನ್ಯ ಪರಿಹಾರಗಳ ಹಂತವನ್ನು ಮೀರಿಹೋಗಿದೆ ನಮ್ಮ ಈ ಜಲ ವಿವಾದ. ಈಗ ಏನಿದ್ದರೂ ಸೃಜನಾತ್ಮಕ ಉತ್ತರಗಳನ್ನು ಹುಡುಕುವುದು ಅತ್ಯಗತ್ಯ ಎನ್ನಿಸುತ್ತದೆ ನನಗೆ. ಭೂ ಲೋಕದಲ್ಲಿ ಹಿರಣ್ಯಕಶಿಪುವಿನ ಪುತ್ರನ ನಾಮಾಂಕಿತವನ್ನೇ ಹೊಂದಿರುವ ಪ್ರಹ್ಲಾದ್ ಎಂಬಾತನೊಬ್ಬನು 'ಕ್ರಿಯೇಟಿವ್ ಸೊಲ್ಯೂಷನ್ಸ್' ಎಂಬ ಸಂಸ್ಥೆಯೊಂದನ್ನು ನಡೆಸುತ್ತಾ ಬಹುವಾಗಿ ಖ್ಯಾತಿ, ಧನ ಕನಕಗಳನ್ನು ಗಳಿಸಿರುವನಂತೆ. ಬೇಕೆಂದರೆ ನನ್ನ ಸಹಚರ ದಶಮಗ್ರಹನನ್ನು ಅವನಲ್ಲಿಗೆ ಕಳುಹಿಸಿ ನಮ್ಮ ಸಮಸ್ಯೆಗೆ ಉತ್ತಮ ಪರಿಹಾರವನ್ನು ಪಡೆಯಬಹುದಲ್ಲವೇ.' ಎಂದ ಹೇಳಿ, ದಶಮಗ್ರಹನ ಕಡೆ ತಿರುಗಿದ.

ಹತ್ತಿರದಲ್ಲೇ ಸ್ವಲ್ಪ ಚಿಕ್ಕ ಸಿಂಹಾಸನದ ಮೇಲೆ ಕುಳಿತಿದ್ದ ಯುರೇನಸ್‌ಗೆ ಮನಸ್ಸು ಹೇಗೆ ಹೇಗೋ ಆಯಿತು. ತನ್ನ ಯವನ ನಾಮಾಂಕಿತವನ್ನು ಉಚ್ಚರಿಸಲೂ ಬಾರದೆಂಬ ಈ ಲೋಕದ ಅಲಿಖಿತ ನಿಯಮವನ್ನು ತನ್ನ ಅತ್ಯಂತ ನಿಕಟವರ್ತಿ ಶನಿ ಮಹಾರಾಜನೂ ಪಾಲಿಸಿದ್ದನ್ನು ನೋಡಿ 'ಯಾರಿಗೆ ಯಾರುಂಟು' ಎಂಬ ಸಾಲುಗಳು ಅವನ ಮನದಲ್ಲಿ ಹಾದುಹೋದವು. ಆದರೂ ಇಂತಹ ಒಂದು ಹಿರಿಯ ಕಾರ್ಯಕ್ಕೆ ಇಂದ್ರದೂತನನ್ನಾಗಿ ತನ್ನನ್ನು ಭೂಲೋಕಕ್ಕೆ ಕಳುಹಿಸುವ ಪ್ರಸ್ತಾಪದಿಂದ ಅವನಿಗೆ ಈಗೋಮಸಾಜ್ ಆದಂತಾಯಿತು.

'ಇಂದ್ರದೇವ, ತಾವು ಆಜ್ಞಾಪಿಸಿದರೆ, ಇಂದೇ ನಾನು ಭೂಲೋಕಕ್ಕೆ ತೆರಳಿ ಈ ಮಹತ್ತರವಾದ ಕಾರ್ಯದಲ್ಲಿ ಉದ್ಯುಕ್ತನಾಗುವೆನು.' ಎಂದು ತನ್ನ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಯುರೇನಸ್ ಇಂದ್ರನ ಸಭೆಯಲ್ಲಿ ಮಾತನಾಡಿದ.

ಅಷ್ಟರಲ್ಲಿ ದೇವಗುರು ಬೃಹಸ್ಪತಿ ಅಡ್ಡಬಾಯಿಹಾಕಿ,

'ಮಾನ್ಯ ಇಂದ್ರದೇವಾ, ಇಂತಹ ಜಟಿಲ ಸಮಸ್ಯೆಗೆ ಪರಿಹಾರ ಹುಡುಕಲು ಹೋಗುವಾಗ ದೂತರನ್ನು ಯಾರಾದರೂ ಕಳುಹಿಸುತ್ತಾರೆಯೇ. ಇಷ್ಟು ದಿನ ಈ ರೀತಿಯ ನಿರ್ಲಕ್ಷ ತೋರಿದ್ದರಿಂದಲೇ ಅಲ್ಲವೇ ನಾವು ಈ ಶೋಚನೀಯ ಪರಿಸ್ಥಿತಿಯಲ್ಲಿರುವುದು . ನೀವೇ ಪ್ರಹ್ಲಾದರಲ್ಲಿಗೆ ಹೋಗುವುದು ಸೂಕ್ತ' ಎಂದು ಸಲಹೆ ಮಾಡಿದ.

ಕನ್ಸಲ್ಟೆಂಟ್ ಪ್ರಹ್ಲಾದ್

'ಹಾಗಾದರೆ ಈ ಸಮಸ್ಯೆ ತೀರ ಜಟಿಲ, ಇದಕ್ಕೆ ಪರಿಹಾರವೇ ಇಲ್ಲ ಅಂತೀರಾ ಪ್ರಹ್ಲಾದ್?' ಇಂದ್ರದೇವನ ದನಿಯಲ್ಲಿ ಡೆಸ್ಪರೇಷನ್, ಡೆಸ್ಪಾಂಡೆನ್ಸಿ, ಮತ್ತಿತರ ಡಿ ಇಂದ ಶುರುವಾಗುವ ಎಲ್ಲ ಹತಾಶ ಭಾವನೆಗಳೂ ತುಂಬಿದ್ದವು.

ಪ್ರಹ್ಲಾದನಿಗೆ ತನ್ನ ಚರ್ಚೆ ಒಂದು ನಿರೀಕ್ಷಿತ ಹಂತ ಸೇರಿದ್ದಕ್ಕೆ ಸಂತಸವಾಯಿತು. ವ್ಯಾಪಾರ ಕುದುರಿಸುವಾಗ ಸಮಸ್ಯೆಯ ಅಗಾಧತೆಯನ್ನು ಮೊದಲ ಹಂತದಲ್ಲಿ ಗಿರಾಕಿಗೆ ಮನವರಿಕೆ ಮಾಡಿಕೊಡುವುದು ಮುಂದೆ ಸಂಭಾವನೆಯನ್ನು ನಿರ್ಧರಿಸುವ ಹಂತದಲ್ಲಿ ಅತ್ಯಂತ ಉಪಯುಕ್ತ ಎಂದು ಪ್ರಹ್ಲಾದ್ ತನ್ನ ಬಿಸಿನೆಸ್ ಸ್ಕೂಲ್ ನಲ್ಲಿ ಪಾಠಹೇಳುವಾಗ ದಿನನಿತ್ಯ ಬೋಧಿಸುತ್ತಿದ್ದ. ತನ್ನ ವಹಿವಾಟುಗಳಲ್ಲೂ ಆ ಸೂತ್ರವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ. 'ಇಂದ್ರದೇವ, ನನ್ನೊಡನೆ ಮಾತನಾಡುವಾಗ ದಯವಿಟ್ಟು ಬಹುವಚನ ಬೇಡ. ನನ್ನ ಗಿರಾಕಿಗಳೆಲ್ಲಾ ನನಗೆ ಅಣ್ಣತಮ್ಮಂದಿರಂತೆ. ನನ್ನ ಬಳಿ ಸಹಾಯ ಕೋರಿ ಬರುವ ಯಾರೂ ಹತಾಶರಾಗಿ ಹಿಂತಿರುಗಿಲ್ಲ. ನಿನ್ನ ಸಮಸ್ಯೆಗೆ ಪರಿಹಾರ ಖಂಡಿತ ಇದೆ. ಅದನ್ನು ಸಾಧಿಸಲು ಸ್ವಲ್ಪ ಮಟ್ಟಿಗೆ ದೃಢ ನಿರ್ಧಾರ, ಗುರಿ ಸಾಧಿಸುವ ಛಲ ಬೇಕು ಅಷ್ಟೆ.'

'ಈಗ ನಾನೇನ್ಮಾಡ್ಬೇಕು ಹೇಳು ಪ್ರಹ್ಲಾದ್, ಅದನ್ನ ಸಾಧಿಸೋದು ನನ್ನ ಜವಾಬ್ದಾರಿ.'

'ಸ್ವರ್ಗದಲ್ಲಿರುವ ನಿಮ್ಮೆಲ್ಲ ದೇವತೆಗಳ ಜೀವನ ಶೈಲಿ ಬದಲಾಗಬೇಕು. ಅದೇ ನೋಡು ನಿನ್ನ ಸಮಸ್ಯೆಗೆ ಪರಿಹಾರ'

ಇಂದ್ರದೇವನಿಗೆ 'ಇದೆಲ್ಲಿ ಬಂದೆನಪ್ಪಾ' ಎನ್ನಿಸಿತು. ನದಿ ನೀರಿನ ರಕ್ಷಣೆ ಬಗ್ಗೆ ಕೇಳಿದರೆ ಈ ಪ್ರಾಣಿ ಜೀವನ ಶೈಲಿ ಬಗ್ಗೆ ಮಾತನಾಡುತ್ತಿದೆ. ಸರಿ, ಇವನ ಹತ್ತಿರ ಏನು ಮುಲಾಜು. ನೇರವಾಗಿಯೇ ಮಾತನಾಡಿಬಿಡೋಣ ಎಂದು ಕೊಂಡು,

'ಪ್ರಹ್ಲಾದ್, ಏನು ನೀನು ಹೇಳ್ತಾ ಇರೋದು, ಜೀವನಶೈಲಿಗೂ, ವೈತರಣಿ ನೀರಿಗೂ ಎಲ್ಲಿಂದೆಲ್ಲಿಯ ಸಂಬಂಧ?' ಎಂದು ಕೇಳಿದ.

'ವಿವರಿಸ್ತೇನೆ... ಸಾವಧಾನದಿಂದ ಕೇಳು ಇಂದ್ರದೇವ. ಈಗ ವೈತರಣಿ ಹರೀತಾ ಇರೋದು ದೇವಲೋಕದಿಂದ ಪ್ರೇತಲೋಕಕ್ಕೆ ಹೌದೋ ಅಲ್ವೋ.'

'ಹೌದು, ಅದರಿಂದಾನೇ ಈ ಸಮಸ್ಯೆ ಬಂದಿರೋದು.'

'ಯಾಕೆ?'

'ಯಾಕೆ ಅಂದ್ರೆ?'

'ವೈತರಣಿ ಯಾಕೆ ದೇವಲೋಕದಿಂದ ಪ್ರೇತಲೋದ ಕಡೆ ಹರೀತಾ ಇದೆ?'

'ಯಾಕ ಅಂದರೆ, ದೇವಲೋಕ ಎತ್ತರದಲ್ಲಿದೆ. ಎತ್ತರದಿಂದ ತಗ್ಗಿಗೆ ಹರಿಯೋದು ಪ್ರಕೃತಿ ನಿಯಮ'

'ಒಂದು ವೇಳೆ ದೇವಲೋಕ ತಗ್ಗಿನಲ್ಲಿದ್ದರೆ?'

'ಆಗ ಪ್ರೇತಲೋಕದ ನೀರೆಲ್ಲಾ ನಮಗೆ ಸಿಗುತ್ತಿತ್ತು.. ಆದರೆ ಅದೆಲ್ಲಾ ಹೇಗೆ ಸಾಧ್ಯ?'

'ಯೋಚಿಸು ಇಂದ್ರದೇವ. ನವಗ್ರಹರಾಜರನ್ನು ಮಂತ್ರಿಮಂಡಳದಲ್ಲಿ ಹೊಂದಿರುವ ನಿನಗೆ ಇದೊಂದು ಮಹಾ ಸಮಸ್ಯೆಯೇ?'

ಮತ್ತೆ ಇಂದ್ರಸಭೆ

ಸಭಾಸದರೆಲ್ಲ ಇಂದ್ರದೇವನ ಭೂಲೋಕ ಯಾತ್ರೆಯ ವರದಿಯನ್ನು ತದೇಕಚಿತ್ತದಿಂದ ಕೇಳಿದರು. ಪ್ರಹ್ಲಾದ್ ಸೃಷ್ಟಿಸಿದ್ದ ಒಗಟಿಗೆ ಉತ್ತರ ತಕ್ಷಣಕ್ಕೆ ಯಾರಿಗೂ ಹೊಳೆಯಲಿಲ್ಲ. ಸ್ವಲ್ಪ ಸಮಯದ ನಂತರ ಚಂದ್ರದೇವ ಎದ್ದುನಿಂತ.

'ಇಂದ್ರದೇವ, ದೇವತೆಗಳು ತಮ್ಮ ಸಾತ್ವಿಕ ಜೀವನದಿಂದ, ಸಂಚಿತ ಪುಣ್ಯದ ದೆಸೆಯಿಂದ, ಈ ಉತ್ತಮ ಲೋಕವನ್ನು ಪಡೆದಿದ್ದಾರೆ. ದೇವಲೋಕದ ಈ ಎತ್ತರದ ಸ್ಥಿತಿಗೆ ನಮ್ಮ ಸಾತ್ವಿಕತೆಯೇ ಕಾರಣ. ನಾವೂ ಭೂಲೋಕದವರಂತೆ, ಪ್ರೇತಲೋಕದವರಂತೆ ಸ್ವಚ್ಛಂದ ಜೀವನವನ್ನು ಅಭ್ಯಾಸಮಾಡಿದರೆ ಎತ್ತರದಲ್ಲಿರುವ ಈ ದೇವಲೋಕ ಕ್ರಮೇಣ ತನ್ನ ಔನ್ನತ್ಯವನ್ನು ಕಳೆದುಕೊಂಡು ತಗ್ಗಿನ ಪ್ರದೇಶವಾಗುವುದು ತೀರ ಸಾಧ್ಯ. ಆಗ ವೈತರಣಿ ಹರಿಯುವ ದಿಕ್ಕೇ ಬದಲಾಗಬಹುದಲ್ಲವೇ. ಬಹುಶಃ ಪ್ರಹ್ಲಾದ್ ಹೇಳಿದ ಪರಿಹಾರ ಇದೇ ಇರಬೇಕು.'

ಪ್ರತಿದಿನ ಅದೇ ಅಮೃತ ಕುಡಿದು, ಅಪ್ಸರೆಯರ ಅದೇ ನರ್ತನಗಳನ್ನು ನೋಡಿ ಬೇಸತ್ತಿದ್ದ ಅನೇಕ ದೇವತೆಗಳಿಗೆ ಚಂದ್ರನ ಈ ಪರಿಹಾರ ಮರಳ್ಗಾಡಿನಲ್ಲಿ ಒಯಸಿಸ್ ಕಂಡಂತಾಯಿತು. ಆದರೆ ಕೆಲವು ಲೆಫ್ಟಿಸ್ಟ್ ದೇವತೆಗಳು ಇಂತಹ ರ್‍ಯಾಡಿಕಲ್ ಪರಿಹಾರಕ್ಕೆ ತೀವ್ರ ಪ್ರತಿಭಟನೆಯನ್ನು ಸೂಚಿಸಿದರು.

ಕೊನೆಗೆ ಇಂದ್ರ ತನ್ನ ನಿರ್ಧಾರ ಸೂಚಿಸಿದ.

'ಮಹಾ ವಿಷ್ಣುವಿನ ತೀರ್ಪನ್ನು ಒಪ್ಪದಿರುವ ಸಾಧ್ಯತೆಯೇ ಉದ್ಭವಿಸದು. ಹಾಗಾಗಿ, ಯಾರನ್ನೂ ವಿರೋಧಿಸದೇ, ಪ್ರಕೃತಿನಿಯಮವನ್ನು ನಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳುವ ಮಾರ್ಗ ಈ ಪ್ರಹ್ಲಾದ ಸೂತ್ರ. ನಮ್ಮ ಜೀವನ ಶೈಲಿ ತೀರ ಸ್ವಚ್ಛಂದವಾಗಿರಬೇಕೆಂದೇನೂ ಇಲ್ಲ, ಕೇವಲ ಕೆಲವು ಅಡಿಗಳಷ್ಟು ಸ್ವಚ್ಛಂದವಾಗಿರುವಂತೆ ಇಳಿಸಿ ಅಲ್ಲಿಗೇ ನಿಲ್ಲಿಸಿಕೊಳ್ಳಬಹುದು. ಈ ಬಗ್ಗೆ ನಮ್ಮ ಆಜ್ಞೆಯನ್ನು ದೇವಗುರುಗಳು ನಾಳೆಯೇ ಹೊರಡಿಸುವರು.'

ಫಾಸ್ಟ್ ಫಾರ್ವರ್ಡ್

ಕಿಂಪುರುಷರ ಬೇಹುಗಾರರಿಬ್ಬರು ವೈತರಣಿಯ ದಡದಲ್ಲಿ ಪಹರೆ ಕಾಯುತ್ತಿದ್ದರು.


ಒಮ್ಮೆ ನದಿಯತ್ತ ನೋಡಿದಾಗ ಅವರಿಗೆ ತಮ್ಮ ಕಣ್ಣುಗಳನ್ನೇ ನಂಬಲಾಗಲಿಲ್ಲ. ನದಿ ಪ್ರೇತಲೋಕದಿಂದ ದೇವಲೋಕದೆಡೆಗೆ ಭರದಿಂದ ಹರಿಯುತ್ತಿತ್ತು.

ಅತ್ತ ವೈಕುಂಠದಲ್ಲಿ

'ಧರ್ಮ, ಋತ ಎಲ್ಲಾ ಸರ್ವನಾಶವಾಯಿತು. ಈಗ ಸಾತ್ವಿಕತೆಗೆ ಕವಡೆಕಾಸಿನ ಬೆಲೆಯೂ ಇಲ್ಲವಾಗಿದೆ. ಭೂಲೋಕದಂತೆ, ದೇವಲೋಕದಲ್ಲೂ ದೇವತೆಗಳು ಬೇಕಾದ್ದು ಮಾಡಿಕೊಂಡು ವಿಜೃಂಭಿಸುತ್ತಿದ್ದಾರೆ. ಪ್ರೇತಲೋಕದವರೊಂದಿಗೆ ದೇವತೆಗಳಿಗೆ ಪೈಪೋಟಿ ಬೇರೆ ಶುರುವಾಗಿದೆಯಂತೆ. ಮೂರು ವಾರ ಆಯಿತು. ಒಬ್ಬ ಭಕ್ತನೂ ನನ್ನ ಬಳಿ ಸುಳಿದಿಲ್ಲ. 'ಶ್ರೀಮನ್ಮಹಾವಿಷ್ಣು, ಮಹಾಲಕ್ಷ್ಮಿಯೊಂದಿಗೆ ಪೇಚಾಡಿಕೊಳ್ಳುತ್ತಿದ್ದ. ಬೆಳಗ್ಗಿನಿಂದ ತನ್ನ ಪತಿಯ ಬವಣೆಯನ್ನು ಕೇಳಿ ಬೇಸತ್ತಿದ್ದ ಲಕ್ಷ್ಮಿ ,

'ಅಯ್ಯೋ ಇದಕ್ಕೆಲ್ಲಾ ಯಾಕ್ರೀ ತಲೆಬಿಸಿ, ಸುಮ್ನೆ ಬ್ರಹ್ಮಾಂಡ ಸಮುದ್ರದ ಮೇಸ್ ವಾಲ್ವ್ ತಿರುಗಿಸಿ. ಮಹಾಪ್ರಳಯ ಆಗಿ ಎಲ್ಲಾ ಕೊಚ್ಕೊಂಡು ಹೋಗತ್ತೆ. ಆಲದ ಎಲೆ ಹೇಗಿದ್ರೂ ರೆಡಿಯಾಗಿದೆ ಪಿಕ್ನಿಕ್ ಬಾಸ್ಕೆಟ್ಟೂ ಸಹಾ. ನಡೀರಿ' ಎಂದು ಹೇಳಿ ಪುಲ್ಲಾಕೀ ಜಾಣ ಹೈ ಕೋಣ್ ಅಂತ ಗುನುಗುತ್ತಾ ಮೊಬೈಲ್ ರೀಛಾರ್ಜ್ ಮಾಡಲು ಹೋದಳು.

❖❖❖



ನಾನು ಶಾಲೆಗೆ ಬಂದು ಈ ರೀತಿಯ ಪ್ರಯೋಗಗಳನ್ನು ಯಾಕೆ ಮಾಡ್ತೀನಿ ಗೊತ್ತಾ... ಮುಂದೆ ಮಂತ್ರಿಗಳು ಯಾವ ಯಾವ ದೇಶದಲ್ಲಿ ಯಾವ ಯಾವ ಬ್ಯಾಂಕಿನಲ್ಲಿ ಯಾವ ಯಾವ ಬ್ಯಾಂಕಿನಲ್ಲಿ ಕಪ್ಪು ಹಣ ಇಟ್ಟಿದ್ದಾರೋ ಅದನ್ನು ಸುಲಭವಾಗಿ ಕಂಡು ಹಿಡಿಯೋಕೆ

221 ಬಿ ಬನಶಂಕರಿ

- ವತ್ಸನ

ಪಾಠಕ ಮಹಾಶಯಾ, ನೀನು ಬೆಂಗಳೂರಿನವನೇ ಆಗಿದ್ದ ಪಕ್ಷದಲ್ಲಿ ನಿನಗೆ ಬನಶಂಕರಿ ಗೊತ್ತಿರಲಿಕ್ಕೆ ಸಾಕು. ಅಲ್ಲೇ ಮಾರ್ನೋ ಟ್ರೈಪ್‌ನಿಂದ ನೇರವಾಗಿ ಹೋಗಿ ಬಲಕ್ಕೆ ತಿರುಗಿದರೆ, ಬಲಮುರಿ ಗಣಪನ ದೇವಸ್ಥಾನ ಕಣ್ಣಿಗೆ ಬೀಳುತ್ತದೆ. ಅಲ್ಲಿ ಮಂಗಳಾರತಿ ಮುಗಿಸಿಕೊಂಡು ಎಡಕ್ಕೆ ತಿರುಗಿ ಹತ್ತುಹೆಜ್ಜೆ ಹೋದರೆ ಸಾಕು ಮುಂದೆಯೇ ಕಾಣುತ್ತದೆ ಭವ್ಯವಾದ ಎಂಟಸ್ತಿನ ಭವನ. ಮುಂದೆ ಅಚ್ಚುಕಟ್ಟಾದ ಹುಲ್ಲುಹಾಸಿರುವ ಈ ಭವನವನ್ನು ಪ್ರವೇಶಿಸಿ (ಸೆಕ್ಯೂರಿಟಿಯವನು ದೇವಸ್ಥಾನದಲ್ಲಿ ಪ್ರಸಾದಕ್ಕೆ ಕಾಯುತ್ತಿರುತ್ತಾನೆ) ಲಿಫ್ಟ್ ಮೂಲಕ ಎರಡನೇ ಅಂತಸ್ತಿಗೆ ಹೋಗಿ. ಅಲ್ಲೇ ಮೂರನೆಯ ಬಾಗಿಲಮೇಲೆ ಹೊಳೆಯುವ ಹಿತ್ತಾಳೆಯಲ್ಲಿ ಮಾಡಿರುವ 221 ಇ ಎಂಬ ಫಲಕ ರಾರಾಜಿಸುತ್ತಿರುತ್ತದೆ. ಅದರ ಕೆಳಗೆ 'ಶರಲೇಖ ಪತ್ತೇದಾರ' ಎಂಬ ಪುಟ್ಟ ಫಲಕವೂ ಸಹಾ. ಅದನ್ನು ನೋಡಿ ಇದು ಶರಲೇಖ ವಾಸಿಸುವ ಫ್ಲಾಟ್ ಎಂದು ನೀನು ಊಹಿಸಿದರೆ, ಅದು ಅರ್ಧಸತ್ಯವಾಗುತ್ತದೆ ಅಷ್ಟೇ.. ಏಕೆಂದರೆ ನಾನೂ ಸಹಾ ಇದೇ ಫ್ಲಾಟಿನಲ್ಲಿ ವಾಸಿಸುತ್ತಿದ್ದು ಆಗಿಂದಾಗ್ಗ ಶರಲೇಖನ ಪತ್ತೇದಾರಿ ಪ್ರಾಜೆಕ್ಟುಗಳಿಗೆ ನನ್ನ ಅಳಿಲು ಸೇವೆ ಸಲ್ಲಿಸುತ್ತಲೇ ಬಂದಿದ್ದೇನೆ.

ಅಂದು ಬೆಳಗ್ಗೆ ನಾವಿಬ್ಬರೂ ನಮ್ಮ ಫ್ಲಾಟಿನಲ್ಲಿ ಕುಳಿತಿದ್ದೆವು. ಮಾರ್ಚ್ ತಿಂಗಳ ಸೆಖೆ 'ಸಖತ್ತಾಗಿದೆ' ಎನ್ನುವಂತಿತ್ತು. ಲೋಡ್ ಷಟ್‌ಡೌನ್ ದೆಸೆಯಿಂದ ಸೀಲಿಂಗ್ ಫ್ಯಾನ್ ಮೌನವಾಗಿತ್ತು. ನಾನು ದಿನಪತ್ರಿಕೆಯ ಸಾಪ್ತಾಹಿಕ ಸಂಚಿಕೆಯಮೇಲೆ ಕಣ್ಣಾಡಿಸುತ್ತಿದ್ದೆ. ಶರಲೇಖ ಬಹು ಏಕಾಗ್ರತೆಯಿಂದ ಯಾವುದೋ ಒಂದು ಚಪ್ಪಲಿಯ ಮೇಲೆ ಅಂಟಿದ್ದ ಮಣ್ಣನ್ನು ಭೂತಗನ್ನಡಿಯ ಮೂಲಕ ಪರೀಕ್ಷಿಸುತ್ತಿದ್ದ. ಒಮ್ಮೆಲೇ ಹೊರಬಾಗಿಲ ಕರೆಗಂಟೆ ಟ್ರಿಣ್‌ಗುಟ್ಟಿತು. ನಾನೇ ಹೋಗಿ ಬಾಗಿಲು ತೆರೆದೆ. ಆ ಬಿರುಬೇಸಿಗೆಯಲ್ಲೂ ತಂಪಾದ ಗಾಳಿ ಮೆಲ್ಲನೆ ನೇವರಿಸಿದಂತಾಯಿತು ನನಗೆ ಆಕೆಯನ್ನು ನೋಡಿದಾಗ. ಉಗುಳು ನುಂಗಿಕೊಂಡು 'ಬನ್ನೀಮ್ಮಾ ಒಳಗೆ, ಬನ್ನೀ, ಇಲ್ಲೇ ಈ ಸೋಫಾದ ಮೇಲೆ ಕೂಡಿ. ಇವರೇ ನನ್ನ ಮಿತ್ರ ಶರಲೇಖ.ಬಹುಶಃ ಅವರನ್ನು ನೋಡಲು ಬಂದಿದ್ದೀರ ಅಂತ ಕಾಣುತ್ತೆ' ಅಂತ ನಾನು ಬಡಬಡಿಸಿದೆ.

ಶರಲೇಖ ಗಾಂಭೀರ್ಯವೇ ಮೂರ್ತಿವೆತ್ತಂತ್ತಿದ್ದ.

'ನಮಸ್ಕಾರ, ನಾನು ಶರಲೇಖ. ನೀವು ರಾಮೇಗೌಡರ ಮಗಳು ಪಾರ್ವತಿ ಅಲ್ಲವೇ. ಮಲ್ಲೇಶ್ವರದಿಂದ ಆಟೋದಲ್ಲಿ ಬಂದಿದ್ದೀರ ಹೇಳಿ ನನ್ನಿಂದ ಏನು ಸಹಾಯ ಬೇಕಾಗಿತ್ತು?'

ಬಂದ ಮಹಿಳೆಗೆ ಆಶ್ಚರ್ಯವೋ ಆಶ್ಚರ್ಯ. 'ನೀವು ಖ್ಯಾತ ಪತ್ತೇದಾರರು ಅಂತ

ಬೆಂಗಳೂರಿಗೆಲ್ಲಾ ಗೊತ್ತಿದೆ. ಆದರೂ ನನ್ನ ಮುಖ ನೋಡಿದ ತಕ್ಷಣ ಇಷ್ಟೆಲ್ಲಾ ವಿವರಗಳನ್ನು ಹೇಗೆ ಊಹಿಸಿದಿರಿ ಸಾರ್?' ಅಂತ ಚಕಿತಳಾಗಿ ಕೇಳಿದಳು. ಕೇಳಿದ ನಂತರ ಹಣೆಯ ಮೇಲೆ ಹಾರಾಡುತ್ತಿದ್ದ ಮುಂಗುರುಳುಗಳನ್ನು (ಅಷ್ಟೊತ್ತಿಗೆ ಪವರ್ ಬಂದಿತ್ತೂರೀ) ಬಹು ಮೋಹಕವಾಗಿ ಮೇಲಕ್ಕೆ ಸವರಿಕೊಂಡಳು.

ಶರಲೇಖ ಒಂದು ತಿರಸ್ಕಾರದ ನಗೆ ನಕ್ಕ. 'ಊಹೆ! ನನ್ನ ನಿಘಂಟಿನಲ್ಲೇ ಆ ಪದ ಇಲ್ಲವಲ್ಲಮ್ಮಾ. ನನ್ನದು ಏನಿದ್ದರೂ ನಿಖರವಾದ ಪತ್ತೇದಾರಿ ಕೆಲಸ ಅಷ್ಟೇ.'

'ಮತ್ತೆ ಅದು ಹೇಗೆ ನನ್ನ ವಿಷಯ ಎಲ್ಲಾ ನಿಮಗೆ ತಿಳಿಯಿತು?'

'ನಿಮ್ಮಪ್ಪ ರಾಮೇಗೌಡ ನನ್ನ ಹೈಸ್ಕೂಲ್ ಸಹಪಾಠಿ. ಇವತ್ತೆ ಬೆಳಗ್ಗೆ ಫೋನ್ ಮಾಡಿದ್ದ. ಮಗಳು ಗಾಬರಿ ಆಗಿದ್ದಾಳೆ. ಹೇಗಾದ್ರೂ ಅವಳಿಗೆ ಸಹಾಯ ಮಾಡು' ಅಂತ. ಅನಂತರ ಒಂದು ಘಂಟೆಯಲ್ಲೇ ನೀನು ಇಲ್ಲಿ ಹಾಜರ್. ಬಸ್ಸಿನಲ್ಲಿ ಬಂದಿದ್ದರೆ ಇನ್ನೂ ಮುಕ್ಕಾಲು ಘಂಟೆ ಆಗಿರೋದು. ಈಗ ಹೇಳು ಏನು ನಿನ್ನ ಪ್ರಾಬ್ಲಂ?'

'ನಾನು ಎಲ್ಲಿಂದ ಪ್ರಾರಂಭಿಸಲಿ ಅನ್ನೋದೇ ತಿಳೀತಾ ಇಲ್ಲ. ಕಳೆದ ಒಂದು ವರ್ಷದಿಂದ ನನ್ನನ್ನು ನಗೆ ಭಾಷಣ ಮಾಡೋಕ್ಕೆ ಹಾಸ್ಯೋತ್ಸವಗಳಿಗೆ ಕರೀತಾ ಇದಾರೆ. ಮೊದಮೊದಲು ನಾನೂ ಟೈಂಪಾಸ್ ಅಂತ ಹೋಗುಕ್ಕೆ ಶುರುಮಾಡ್ದೆ. ಆಮೇಲೆ ಜನಗಳು ನಗೋದನ್ನು ನೋಡಿ, ಕಂಡಕಂಡೋರು ಕರೆದ ಕಡೆಗಳಿಗೆಲ್ಲಾ ಓಡಿಹೋಗೋ ಹಾಗೆ ಗೀಳು ಹಿಡೀತು. ನಮ್ಮಪ್ಪ ಪಾಪ, ಎಲ್ಲೆಲ್ಲೋ ಕರೆದುಕೊಂಡು ಹೋಗಿ ಏನೇನೋ ಚಿಕಿತ್ಸೆ ಮಾಡಿಸಿದರು. ಏನೂ ಪ್ರಯೋಜನ ಆಗಲಿಲ್ಲ. ಒಂದು ವರ್ಷದಲ್ಲಿ ಈಗಾಗಲೇ ಐವತ್ತೊಂಭತ್ತು ಭಾಷಣ ಕೊಟ್ಟಿದ್ದೇನೆ. ಹೋದವಾರ................' ಎಂದು ಹೇಳಿ ಪಾರ್ವತಿ ಗಂಟಲು ತುಂಬಿಬಂದು ಬಿಕ್ಕುಕ್ಕೆ ಶುರುಮಾಡಿದಳು.

ನಾನು ತಕ್ಷಣ ಓಡಿಹೋಗಿ ಫ್ರಿಜ್ಜಿಂದ ತಣ್ಣೀರು ತೆಗೆದು ಒಂದು ಗಾಜಿನ ಲೋಟದಲ್ಲಿ ಹಾಕಿ ಪಾರ್ವತಿಗೆ ಕುಡಿಯಲು ಕೊಟ್ಟೆ. ಸ್ವಲ್ಪ ಸುಧಾರಿಸಿಕೊಂಡು ಪಾರ್ವತಿ ಮುಂದುವರಿಸಿದಳು.

'ಹೋದವಾರ ಯುಗಾದಿ ಹಾಸ್ಯೋತ್ಸವಕ್ಕೆ ಭಾಷಣಮಾಡಲು ಕರೆ ಬಂತು. ನನಗೋ ಹಿಗ್ಗು. ಅಂದು ರಾತ್ರಿಯೆಲ್ಲಾ ಹಾಸ್ಯೋತ್ಸವದ್ದೆ ಕನಸು. ಬೆಳಗ್ಗೆ ಎದ್ದಾಗ ಆಘಾತ ಕಾದಿತ್ತು.'

'ಏನದು ಆಘಾತ?' ಶರಲೇಖನ ಪ್ರಶ್ನೆ.

'ನಾನು ಬರೆದಿಟ್ಟುಕೊಂಡಿದ್ದ ಭಾಷಣದ ಸ್ಕ್ರಿಪ್ಟ್ ನಾಪತ್ತೆಯಾಗಿತ್ತು. ಯಾರೋ ದುರುಳಾತ್ಮರು ಅದನ್ನು ಕದ್ದುಬಿಟ್ಟಿದ್ದರು. ಅದರಲ್ಲಿ ಮೂವತ್ತು ಜೋಕುಗಳು ಐದು ಅಣಕವಾಡು, ಅನರ್ಥಕೋಶದ ಇಪ್ಪತ್ತು ಸ್ಯಾಂಪಲ್‌ಗಳು ಎಲ್ಲವೂ ಇದ್ದವು ಸಾರ್. ಮನೆಯೆಲ್ಲಾ ಹುಡುಕಿದೆ. ಏನೂ ಪ್ರಯೋಜನವಾಗಲಿಲ್ಲ. ಯುಗಾದಿಗೆ ಇನ್ನು ಮೂರೇ ದಿನ. ನಾನು ಹೇಗೆ ಭಾಷಣ ನಿಭಾಯಿಸೋದು ಅಂತ ಹಲುಬುತ್ತಾ ಇದ್ದೆ. ಆಗ ನಮ್ಮಪ್ಪ ಒಂದು ಸಲಹೆ ಮಾಡಿದ್ರು.'

'ಏನಂದ್ರು, ನಿಮ್ಮಪ್ಪ?'

'ನಿನ್ನ ಕಡತ ಹುಡುಕಿಸೋದಕ್ಕೆ ಏನೇ ಖರ್ಚಾದರೂ ನಾನು ಕೊಡ್ತೇನೆ. ಆದರೆ ಇದೇ ನಿನ್ನ ಕೊನೆಯ ಹಾಸ್ಯಭಾಷಣ ಆಗಬೇಕು. ಹಾಗಂತ ಭಾಷೆಕೊಡು ಅಂತ ಹೇಳಿ ನನ್ನಿಂದ ಭಾಷೆ ತಗೊಂಡ್ರು. ನಾನು ನಿಮ್ಮ ಹತ್ರ ಹೋಗ್ತೀನಿ ಅಂತ ಹೇಳಿ ನೇರವಾಗಿ ಇಲ್ಲಿಗೆ ಬಂದೆ'.

'ಮೂವತ್ತು ಜೋಕುಗಳು ಇತ್ತು ಅಂದೆ. ಯಾವ್ಯಾವುದಿತ್ತು ಅಂತ ಒಂದೆರಡು ಉದಾಹರಣೆ ಕೊಡ್ತೀಯಾ?'

'ಅದೇ ಸಾರ್, ರಾಶಿ ಉಪ್ಪಿಟ್ಟಿನಲ್ಲಿ ಕೂದಲು ಹಾಕೋದನ್ನ ಕೇಳಿದ್ದು, ವಿಧಾನಸೌಧದ ಮುಂದೆ ನಿಂತು ನರಹರಿಯೇ ಅಂತ ಹಾಡಿದ್ದು, ತಿಂಮ ಫಾರಿನ್ನಿಗೆ ಹೋಗಬೇಕಾದಾಗ...............'

'ಸರಿ ಬಿಡು , ವತ್ಸನ ಬರ್‍ಕೋ, 25, 67 ಮತ್ತು 85. ನೀನೇನೂ ಆತಂಕಪಟ್ಕೋ ಬೇಡಾಮ್ಮ. ಫಂಕ್ಷನ್ನಿಗೆ ಮುಂಚೆ ಖಂಡಿತವಾಗಿ ಸ್ಕ್ರಿಪ್ಟ್ ನಿನ್ನ ಕೈ ಸೇರೋಹಾಗೆ ಮಾಡ್ತೇನೆ. ನಿನ್ನ ಮೊಬೈಲ್ ನಂಬರನ್ನ ವತ್ಸನನ ಕೈಗೆ ಕೊಟ್ಬಿಡು. ಬೈ' ಎನ್ನುತ್ತಾ ಶರಲೇಖ ಪಾರ್ವತಿನ ಬೀಳ್ಕೊಟ್ಟ.

ಆಕೆ ಅತ್ತ ಹೋದನಂತರ ನಾನು ಶರಲೇಖನನ್ನು ಕುರಿತು,

'ಏನದು ಆ ನಂಬರುಗಳು, ಬರ್‍ಕೋ ಅಂತ ಹೇಳಿದೆಯಲ್ಲಾ?' ಅಂತ ಕುತೂಹಲದಿಂದ ಕೇಳಿದೆ.

'ಎನ್ಸೈಕ್ಲೋಪೀಡಿಯಾ ಆಫ್ ಕನ್ನಡ ಹ್ಯೂಮರ್‌ನಲ್ಲಿ ಕನ್ನಡನಾಡಿನ ಸಮಸ್ತ ಜೋಕುಗಳಿಗೂ ಸೀರಿಯಲ್ ನಂಬರ್ ಕೊಟ್ಬಿಟ್ಟಿದ್ದಾರೆ. ನಗೆ ಭಾಷಣಕಾರರಿಗೆ ಅನುಕೂಲ ಆಗಲಿ ಅಂತ. ಆಕೆ ಹೇಳಿದ ಜೋಕುಗಳ ನಂಬರ್‌ಗಳು ಅವು.. ಅದ್ಸರಿ ಈಗ ಒಂದು ನಿಮಿಷಾನೂ ವ್ಯರ್ಥಮಾಡೋಹಾಗಿಲ್ಲ. ಆ ಸ್ಕ್ರಿಪ್ಟ್‌ನ ಹೇಗಾದ್ರೂ ಹುಡುಕಲೇ ಬೇಕು. ಒಂದೆರಡು ದಿನ ನಾನು ಮನೆಗೆ ಬರದೇ ಇರಬಹುದು. ಏನಾದ್ರೂ ಸುಳಿವು ಸಿಕ್ಕ ತಕ್ಷಣ ನಿನಗೆ ಫೋನ್ ಮಾಡ್ತೇನೆ.' ಅಂತ ಹೇಳಿ ತನ್ನ ಭೂತಗನ್ನಡಿ ತೆಗೆದುಕೊಂಡು ಶರಲೇಖ ನಿರ್ಗಮಿಸಿದ.

ಎರಡು ದಿನಗಳು ಶರಲೇಖನ ಸುಳಿವೇ ಇರಲಿಲ್ಲ. ನನಗೆ ಸ್ವಲ್ಪಮಟ್ಟಿಗೆ ಆತಂಕ. ಆ ಸಂಜೆ ಕೌನ್ ಬನೇಗಾ ನೋಡ್ತಾ ಇದ್ದಾಗ ಫೋನ್ ರಿಂಗಾಯಿತು. 'ಚನ್ನರಾಯಪಟ್ಟಣದಿಂದ ಮಾತಾಡ್ತಾ ಇದೀನಿ. ನಾಳೆ ಮಧ್ಯಾಹ್ನ ಮನೆಗೆ ಹಿಂತಿರುಗುವೆ. ಪಾರ್ವತಿಗೆ ನಾಳೆ ಸಂಜೆ ಮನೆಗೆ ಬರುಕ್ಕೆ ಹೇಳು' ಅಂದ ಶರಲೇಖ. 'ಹೋದಕೆಲಸ ಏನಾಯಿತು?' ಅಂತ ಕೇಳಿದೆ. ಅಷ್ಟು ಹೊತ್ತಿಗೆ ಫೋನ್ ಕಟ್ಟಾಯಿತು.

ಮಾರನೆಯ ಸಂಜೆ ಐದು ಘಂಟೆಗೆ ಪಾರ್ವತಿ ಮನೆಗೆ ಬಂದಳು. ಶರಲೇಖ ಡೈನಿಂಗ್ ಟೇಬಲ್ಲಿನ ಮೇಲೆ ಪಾರ್ವತಿಗಾಗಿ ಉಪ್ಪಿಟ್ಟು ಕಾಫಿ ಸಿದ್ಧಪಡಿಸಿ ಇಟ್ಟಿದ್ದ.

'ಏನಾಯ್ತು ಸಾರ್ ನನ್ನ ಸ್ಕ್ರಿಪ್ಟ್ ಸಿಕ್ತಾ?' ಅಂತ ಪಾರ್ವತಿ ಆತಂಕ ಮಿಶ್ರಿತ ಕಾತರದಿಂದ ಕೇಳಿದಳು.

'ಅದರ ಬಗ್ಗೆ ಆಮೇಲೆ ಮಾತಾಡೋಣ. ಈಗ ಸ್ವಲ್ಪ ಉಪ್ಪಿಟ್ಟು ತಿನ್ನು' ಅಂತ ಶರಲೇಖ ಪಾರ್ವತಿಗೆ ಬಲವಂತ ಮಾಡಿದ. ಆಕೆಗೋ ಮಾರನೆಯ ದಿನವೇ ಭಾಷಣ ಮಾಡುವ ಅಗತ್ಯ ಯಾವ ತಯಾರೀನೂ ಇನ್ನೂ ಆಗಿಲ್ಲ. ಉಪ್ಪಿಟ್ಟು ಯಾರಿಗೆ ಸೇರುತ್ತೆ?

'ಏನೂ ಬೇಡಾ ಸಾರ್. ನನ್ನ ಕೆಲಸದ ಬಗ್ಗೆ ಹೇಳಿ' ಅಂತ ಅಲವತ್ತುಕೊಂಡಳು ಪಾರ್ವತಿ.

ಶರಲೇಖ 'ಮೊದಲು ಉಪ್ಪಿಟ್ಟು' ಅಂತ ಹಠಹಿಡಿದ. ಪಾರ್ವತಿ ಮನಸ್ಸಿಲ್ಲದ ಮನಸ್ಸಿನಿಂದ ಉಪ್ಪಿಟ್ಟು ಇಟ್ಟಿದ್ದ ಕಾಸರೋಲಿನ ಮುಚ್ಚಳ ತೆಗೆದಳು. ತಕ್ಷಣ ಆಕೆ ಸಂಭ್ರಮದಿಂದ ಕಾಸರೋಲಿನೊಳಗೆ ಕೈಹಾಕಿ ಅದರಲ್ಲಿದ್ದ ಕಡತವನ್ನು ತೆಗೆದು 'ಓ ಐ ಕಾನ್ಟ್ ಬಿಲೀವ್ ಮೈ ಐಸ್. ಥ್ಯಾಂಕ್ ಯು ಅಂಕಲ್' ಎನ್ನುತ್ತಾ ಟೇಬಲ್ಲನ್ನು ಬಳಸಿ ಓಡಿಬಂದು ಶರಲೇಖನನ್ನು ಅಪ್ಪಿ ಮುತ್ತಿಟ್ಟಳು. ಇಂತಹ ಹಲವು ರಸನಿಮಿಷಗಳಲ್ಲಿ ನನಗೆ ನನ್ನ ಮಿತ್ರನ ಬಗ್ಗೆ ಅಸೂಯೆ ಸಹಜವಾಗಿಯೇ ಉದ್ಭವವಾಗುತ್ತೆ.

ಉಪ್ಪಿಟ್ಟು ಕಾಫಿ ಮುಗಿದ ಬಳಿಕ, ಶರಲೇಖ ತನ್ನ ಪತ್ತೇದಾರಿ ಕೆಲಸದ ಬಗ್ಗೆ ರೆಗ್ಯುಲೇಷನ್ ವಿವರಣೆ ಕೊಡಲು ಶುರುಮಾಡಿದ.

'ಮೊನ್ನೆ ಇಲ್ಲಿಂದ ಹೊರಟಾಗ ಒಂದು ಹಂಚಿಕೆ ನನಗೆ ಹೊಳೆದಿತ್ತು. ಆಕೆಯ ಸ್ಕ್ರಿಪ್ಟ್ ಯಾರಿಗೆ ಅಗತ್ಯ? ಇನ್ನೊಬ್ಬ ನಗೆಭಾಷಣಕಾರನಿಗೆ ತಾನೇ.

ಇನ್ನು ಒಂದೆರಡು ದಿನಗಳಲ್ಲಿ ಇನ್ನು ಯಾವ ಯಾವಕಡೆ ಹಾಸ್ಯೋತ್ಸವಗಳಿವೆ ಅಂತ ದಿನ ಪತ್ರಿಕೆಯೊಂದಕ್ಕೆ ಫೋನ್ ಮಾಡಿ ತಿಳಿದುಕೊಂಡೆ.

ಚೆನ್ನರಾಯಪಟ್ಟಣ, ಹಾರಂಗಿ, ಕುಂದಾಪುರ ಮೂರು ಕಡೆ ನಗೆ ಉತ್ಸವ, ಸ್ವಲ್ಪ ನಗಿ ಮತ್ತು ಹಾಸ್ಯಕಾರಂಜಿ ಕಾರ್ಯಕ್ರಮಗಳಿದ್ದವು. ಹಾರಂಗಿ ಕುಂದಾಪುರಗಳಲ್ಲಿ ಹಳೆಯ ಮೈಸೂರಿನ ಜೋಕುಗಳು ಅಷ್ಟೇನೂ ಪ್ರಚಲಿತವಲ್ಲ. ಹಾಗಾಗಿ ಚೆನ್ನರಾಯಪಟ್ಟಣ ನನ್ನ ಬೆಸ್ಟ್ ಬೆಟ್ ಅಂದುಕೊಂಡು ಅಲ್ಲಿಗೆ ಹೋದೆ. ಅಲ್ಲಿನ ಯುವಕಸಂಘದ ಕಾರ್ಯದರ್ಶಿ ತಿಮ್ಮರೆಡ್ಡಿಯನ್ನು ಹಿಡಿದು ನಗೆ ಉತ್ಸವದ ಭಾಷಣಕಾರರ ಪಟ್ಟಿ ಪಡೆದುಕೊಂಡೆ.

ಇಬ್ಬರು ಭಾಷಣಕಾಕರರು ಬೆಂಗಳೂರಿನವರಾಗಿದ್ದರು. ಅದರಲ್ಲಿ ಒಬ್ಬ , ಆತನ ಹೆಸರು ಈಗ ಬೇಡ, ಶೇಷಾದ್ರಿಪುರವಾಸಿ ಎಂದು ತಿಳಿಯಿತು. ಆತನೇ ಮಲ್ಲೇಶ್ವರಕ್ಕೆ ತೀರ ಹತ್ತಿರ ಇದ್ದವನು. ಆ ಸಂಜೆ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಸ್ವಲ್ಪ ಸಮಯ ಇದ್ದಾಗ ಆ ಭಾಷಣರಕಾರನನ್ನು ಕನ್‌ಫ್ರಂಟ್ ಮಾಡಿ ಸ್ಕ್ರಿಪ್ಟ್ ಕೇಳಿದೆ. ಆತ ತಾನು ಯಾವ ಸ್ಕ್ರಿಪ್ಟನ್ನೂ ಕದ್ದಿಲ್ಲವೆಂದು ಸಾಧಿಸಿದ. ನಾನೇನು ನಿನ್ನೆ ಹುಟ್ಟಿದವನೇ.. ಸ್ಕ್ರಿಪ್ಟ್ ಕೊಡದಿದ್ದರೆ ಅಂದು ಸಂಜೆ ಆತ ಜೋಕುಗಳನ್ನು ಹೇಳಲು ಶುರುಮಾಡಿದಾಗ ಪ್ರತಿ ಜೋಕಿನ ಪ್ರಾರಂಭದಲ್ಲೂ ನಾನು ಪಂಚ್ ಲೈನ್‌ಗಳನ್ನು ಮೈಕ್ ಮೂಲಕ ಕೂಗಿಬಿಡುತ್ತೇನೆ ಅಂತ ಹೆದರಿಸಿದೆ. ಪ್ರಾಣಿ ಮೆತ್ತಗಾಯಿತು. ಭಾಷಣ ಮುಗಿಯೋವರೆಗೂ ನನ್ನ ಹತ್ತಿರ ಸ್ಕ್ರಿಪ್ಟ್ ಇರಲಿ, ಆಮೇಲೆ ಖಂಡಿತಾ ನಿಮಗೆ ಸ್ಕ್ರಿಪ್ಟ್ ಅನ್ನು ಹಿಂತಿರುಗಿಸುತ್ತೇನೆ ಅಂತ ಪ್ರಾಮಿಸ್ ಮಾಡಿದ. ಆಗಲೇ ನಾನು ನಿನಗೆ ಫೋನ್ ಮಾಡಿದ್ದು. ಆ ಪ್ರಾಣಿ ತನ್ನ ನಗೆ ಭಾಷಣ ಮುಗಿಸಿದ ನಂತರ ಮಾತಿಗೆತಪ್ಪದೇ ಸ್ಕ್ರಿಪ್ಟ್ ಹಿಂತಿರುಗಿಸಿದ. ಪಾರ್ವತಿಯವರಿಗೆ ನನ್ನ ವಂದನೆಗಳನ್ನು ತಿಳಿಸಿಬಿಡಿ ಅಂತಲೂ ಹೇಳಿದ. ಆಮೇಲೆ ನಡೆದದ್ದೆಲ್ಲಾ ನಿಮಗೆ ತಿಳಿದೇ ಇದೆ.

❖❖❖

ವಿದ್ಯಮಾನಗಳು

- ಕು.ಶ.

ಕನ್ನಡ ನಾಡಿನ ಮೂರು ಜಿಲ್ಲೆಗಳಲ್ಲಿ ಮಾತ್ರ ಹರಿಯುವ ಕಾವೇರಿ ಈಗ ರಾಜ್ಯದ ಉದ್ದಗಲ ಹರಡಿಕೊಂಡಿದ್ದಾಳೆ. ಹದಿನೈದು ವರ್ಷಗಳ ಹಿಂದೆ ತಾತ್ಕಾಲಿಕ ಎಂದು ಬಂದ ತೀರ್ಪೇ ಈಗ ಹೆಚ್ಚುಕಡಿಮೆ ಕೊನೆಯ ಐತೀರ್ಪಾಗಿದೆ. ಆಗ ಗಲಾಟೆಯಾಗಿ ಹಲವರು ಸತ್ತರು. ಈಗ ಇನ್ನೂ ಹೆಚ್ಚಿನ ಗದ್ದಲವಿದೆ, ಆದರೆ ಹಿಂಸೆಯಿಲ್ಲ.

ಈ ಜಗಳದಲ್ಲಿ ತಮಿಳುನಾಡಿನವರ ಮೊಂಡು ವಾದ ಇದು: - ಸಾವಿರಾರು ವರ್ಷಗಳಿಂದ ನಾವು ಕಾವೇರಿ ನೀರಿನಿಂದ ನಮ್ಮ ಸೀಮೆಯಲ್ಲಿ ಮಳೆ ಬರುವ ಮುಂಚೆಯೇ ಕುರುವೈ ಬೆಳೆಯಲ್ಲಿ, ಮಳೆ ಬಂದಮೇಲೆ ಸಂಬಾ ಬೆಳೆಯಲ್ಲಿ ನಮಗೆ ಬೇಕಾದ್ದಕ್ಕಿಂತ ಹೆಚ್ಚು ಭತ್ತ ಕಬ್ಬು ಬೆಳೆದುಕೊಳ್ಳುತ್ತಿದ್ದೇವೆ. ನಾವು ದಿನಾ ಮೂರು ನಾಲ್ಕು ಬಾರಿ ಅಕ್ಕಿ ತಿಂದು ಚೆಲ್ಲಿ ಉಡಾಯಿಸಲೇ ಬೇಕು. ನಮ್ಮ ಊರಿನಲ್ಲಿ ಹನಿ ಮಳೆಯಿಲ್ಲದಾಗಲೂ ಭತ್ತ ಕಬ್ಬು ಬೆಳೆಯೋದು ನಮ್ಮ ಅಜನ್ಮ ಹಕ್ಕು. ಕರ್ನಾಟಕದವರ ನಮ್ರ ಪ್ರಾರ್ಥನೆ:- ನಮ್ಮ ಹಿಂದಿನವರು ಬಡವರು ಜೊತೆಗೆ ದಡ್ಡರು. ಪಕ್ಕದಲ್ಲೇ ಹೊಳೆ ಹರಿಯುತ್ತಿದ್ದರೂ ನೀರು ಬಳಸಿಕೊಳ್ಳಲು ತಿಳಿಯದೇ ಒಂದು ಹೊತ್ತು ರಾಗಿ ಮುದ್ದೆ ತಿಂದು ಇನ್ನೊಂದು ಹೊತ್ತು ಉಪವಾಸ ಇರುತ್ತಿದ್ದರು. ಅವರು ಹಿಂದೆ ಕಾರ್ಪಣ್ಯದಲ್ಲಿದ್ದರು ಅನ್ನೋ ಕಾರಣಕ್ಕೆ ಈಗ ನಾವೂ ಹಾಗೇ ಉಳಿಯಬೇಕು ಅನ್ನೊದು ಸರಿಯಲ್ಲ. ನಾವು ನಮ್ಮೂರಿನ ಕಾವೇರಿ ನೀರಿನಲ್ಲಿ ನಮಗೆ ಬೇಕಾದಷ್ಟು ಮಾತ್ರ ಜೋಪಾನವಾಗಿ ಬಳಸಿಕೊಂಡು ಉಳಿದದ್ದನ್ನು ಧಾರಾಳವಾಗಿ ಬಿಡುತ್ತೇವೆ, ಇದಕ್ಕೆ ಯಾರೂ ಅಡ್ಡಿ ಮಾಡಬಾರದು.

ನ್ಯಾಯಾಧೀಕರಣ ಹದಿನೇಳು ವರ್ಷ ಅಳೆದು ಸುರಿದು -ಉಳ್ಳವರು ಉಳ್ಳವರಾಗಿಯೇ ಇರಬೇಕು, ಇಲ್ಲದವರು ಇಲ್ಲದವರಾಗಿಯೇ ಇರಬೇಕು; ಪಾಪ, ತಮಿಳುನಾಡಿನವರಿಗೆ ಮಸ್ತಾಗಿ ಅನ್ನ ತಿಂದು ಅಭ್ಯಾಸ, ತಿಂದುಕೊಂಡು ಹೋಗಲಿ ಬಿಡಿ. ನಿಮಗೆ ಕರ್ನಾಟಕದವರಿಗೆ ಉಪವಾಸ ಇದ್ದು ಹೇಗೂ ರೂಢಿಯಾಗಿದೆಯಲ್ಲ, ಉಪವಾಸವೇ ಬಿದ್ದಿರಿ ಎನ್ನುವ ಅದ್ಭುತ ನ್ಯಾಯ ಕೊಟ್ಟಿದೆ.

★★★

ಗಾಂಧೀಜಿ ಪ್ರಾರಂಭಿಸಿದ ಅಹಿಂಸಾತ್ಮಕ ಶಾಂತಿಯುತ ಸತ್ಯಾಗ್ರಹಕ್ಕೆ ಈಗ ನೂರು ವರ್ಷವಂತೆ. ಈ ಶತಮಾನೋತ್ಸವದ ವರ್ಷದಲ್ಲಿ ಇಂತಹ ಶಾಂತಿಯುತ ವಿರೋಧ ಪ್ರದರ್ಶನದಲ್ಲಿ ಎಷ್ಟು ವೈವಿಧ್ಯ ಸಾಧ್ಯ ಎನ್ನುವುದನ್ನು ನಾವು ಕನ್ನಡಿಗರು ತೋರಿಸುತ್ತಿದ್ದೇವೆ. ಸಗಟಾಗಿ ರಾಜ್ಯದ ಬಂದ್, ಚಿಲ್ಲರೆ ಚಿಲ್ಲರೆಯಾಗಿ ಜಿಲ್ಲೆ, ಗ್ರಾಮ, ಊರುಕೇರಿಗಳ ಬಂದುಗಳು. ರಸ್ತೆ ತಡೆ- ರೈಲು ರೋಕೋ. ಸೈಕಲ್ ಬೈಕ್ ಎತ್ತಿನ ಗಾಡಿ ಮೆರವಣಿಗೆಗಳು. ಸ್ಕೂಲ್ ಕಾಲೇಜ್ ನ್ಯಾಯಾಲಯ ವಗೈರೆ ಬಹಿಷ್ಕಾರ. ಬಾಯಿಗೆ ಬಟ್ಟೆ

ಕಟ್ಟಿಕೊಂಡು-ಬಾಯಿ ಬಡಿದುಕೊಳ್ಳುತ್ತಾ, ಅರೆಬೆತ್ತಲೆಯಾಗಿ- ಮಾಮೂಲೀ ಉಡುಪಿನಲ್ಲಿ- ನಾಟಕದ ಕಂಪೆನಿಗಳಿಂದ ಉದ್ರಿ ತಂದ ದಿರಿಸುಗಳೊಂದಿಗೆ, ನಡೆಯುತ್ತಾ -ಉರುಳುತ್ತಾ ಮೆರವಣಿಗೆಗಳು. ಮಾನವ ಸರಪಳಿಗಳು, ಧಾಳಿ, ಮುತ್ತಿಗೆಗಳು. ಕತ್ತೆ- ಕೋಣ- ಹಂದಿಗಳ ಯಾವುದೇ ಲೇಬಲ್ಲುಗಳಿಲ್ಲದ, ಯಾರು ಯಾರದೋ ಹೆಸರಿನ ಕೊರಳುಪಟ್ಟಿ ಕಟ್ಟಿ ಮೆರವಣಿಗೆಗಳು. ಅವರ ಇವರ ಅಣಕು ಶವಯಾತ್ರೆ, ಪ್ರತಿಕೃತಿ ದಹನ ತದನಂತರ ದಹನವಾದವರ ತಿಥಿಗಳು ಅಲ್ಲಿ ಭರ್ಜರಿ ಊಟಗಳು. ಬೀದಿ ನಾಟಕ, ಬೀದಿಯಲ್ಲಿ ರಂಗ ನಾಟಕ, ಕವಿತಾ ವಾಚನ, ಭಾಷಣಗಳು. ಸಾಮೂಹಿಕ ತಲೆ ಬೋಳಿಸುವಿಕೆ, ಬೋಳಿಸಿಕೊಳ್ಳುವಿಕೆ (ಗಂಡಸರಿಗೆ ಮಾತ್ರ). ಕಾಮಿನಿಯರಿಂದ ಕಲರ್ ಕಲರ್ ಖಾಲಿ ಕೊಡಗಳ ಪ್ರದರ್ಶನ.

ಇಲ್ಲೊಂದು ಕುತೂಹಲದ ಸಂಗತಿ: ವಿರೋಧ ಪ್ರದರ್ಶನದಲ್ಲಿ ಗಾಂಧೀಜಿ ಬಳಿ ಇದ್ದ ಪ್ರಬಲ ಆಯುಧ - ಆಮರಣಾಂತ ಉಪವಾಸ. ಆದರೆ ಇಲ್ಲಿ ಇದನ್ನು ಬಳಸಲು ಯಾರೂ ಮುಂದೆ ಬಂದಿಲ್ಲ. ಆದರೆ ಅವರು ಉಪವಾಸ ಮಾಡಲಿ, ಇವರು ಉಪವಾಸ ಮಾಡಲೇಬೇಕು ಎನ್ನುವ ಸಲಹೆಗಳು ದಂಡಿಯಾಗಿ!

★★★

ಎಸ್. ಎಲ್. ಭೈರಪ್ಪನವರ ಹೊಸ ಚಾರಿತ್ರಿಕ ಕಾದಂಬರಿ ಆವರಣ ಚರಿತ್ರೆ ನಿರ್ಮಿಸುತ್ತಿದೆ. ಕೇವಲ ನಲ್ವತ್ತು ದಿನಗಳಲ್ಲಿ ಐದು ಆವೃತ್ತಿಗಳು, ಅಂದಾಜು ಹನ್ನೆರಡು ಸಾವಿರ ಪ್ರತಿಗಳು ಖಲಾಸ್. ಇನ್ನೊಂದು ಕಡೆ ಈ ಕಾದಂಬರಿಯ ಬಗೆಗೆ ಎಲ್ಲಾ ಪತ್ರಿಕೆಗಳಲ್ಲೂ ಉದ್ದುದ್ದ ವಿಮರ್ಶೆಗಳು, ಆಗಲೇ ನಾಲ್ಕೈದು ಚಿಂತನ ಗೋಷ್ಠಿ, ಸಂವಾದಗಳು, ಪತ್ರಿಕೆಗಳಲ್ಲಿ ಇವುಗಳ ವರದಿಗಳು. ಕಾದಂಬರಿ ಅಗ್ದಿ ಗಂಭೀರ, ಇದರಲ್ಲಿ ರೋಚಕ ಕತೆ, ಅನಿರೀಕ್ಷಿತ ತಿರುವುಗಳು ಇತ್ಯಾದಿ ಜನಪ್ರಿಯತೆಯ ಯಾವುದು ಮಸಾಲೆ ಇಲ್ಲದಿದ್ದರೂ ಸಾಧಾರಣವಾಗಿ ಪುಸ್ತಕದ ಅಂಗಡಿ ಹತ್ತಿರವೂ ಹೋಗದ ಕನ್ನಡದ ಮಂದಿಗೆ ಈ ಕಾದಂಬರಿಯನ್ನು ತಮ್ಮ ಸ್ವಂತ ರೊಕ್ಕ ಕೊಟ್ಟು ಕೊಳ್ಳಲು ಇಷ್ಟು ಏಕೆ ಉತ್ಸಾಹ? ಬಲ್ಲವರು ಕೊಡುವ ವಿವರಣೆ:- ನಾವು, ನೀವು, ಎಲ್ಲರೂ ಯಾವಾಗಲೂ ಕೇಳಲು ಬಯಸುತ್ತಿದ್ದ ಆದರೆ ಕೇಳಲು ಹೆದರುತ್ತಿದ್ದ ಪ್ರಶ್ನೆಗಳನ್ನು ಭೈರಪ್ಪ ಇಲ್ಲಿ ಎತ್ತಿದ್ದಾರೆ; ಈ ಪ್ರಶ್ನೆಗಳಿಗೆ ಕಠಿಣ ಪರಿಶ್ರಮದಿಂದ ಹುಡುಕಿದ ಅನುಮಾನಕ್ಕೆ ಆಸ್ಪದವೇ ಇಲ್ಲದಂತಹ ಆಧಾರಗಳೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಅಷ್ಟೇ ಧೈರ್ಯವಾಗಿ ಉತ್ತರಗಳನ್ನೂ ಕೊಟ್ಟಿದ್ದಾರೆ.

ಹಿಂದೆ ಭೈರಪ್ಪನವರ ಗೃಹಭಂಗ ಪ್ರಕಟವಾದಾಗ, ಪ್ರಸಾರವಾದಾಗ ಜನ ತಮ್ಮ ಸುತ್ತಮುತ್ತ ಅನೇಕ ನಂಜಮ್ಮ-ಚೆನ್ನಿಗರಾಯರುಗಳನ್ನು ಗುರುತಿಸಿಕೊಂಡಿದ್ದರು; ಆವರಣದಲ್ಲೂ ಇದೇ ಪ್ರಮಾಣದಲ್ಲಿ ಇನ್ನೊಂದು ತರಹದ ಗುರುತಿಸುಕೊಳ್ಳುವಿಕೆ ಎನ್ನುವುದು ತಿಳಿದವರ ಅಂಬೋಣ.

❖❖❖

ಛೇಂಜ್ ಚೇಂಜ್ ಬೇಕೂ ರೀ...

– ಎಚ್. ಗೋಪಾಲಕೃಷ್ಣ

ನಮ್ಮ ಶಿವಣ್ಣ ಯಾವಾಗಲೂ ಜೀವನದಲ್ಲಿ ಬದಲಾವಣೆ ಬೇಕು ಅನ್ನೋ ಸ್ಕೂಲಿಗೆ ಸೇರಿರುವವನು. ಇವನ ಹತ್ತಿರ ಯಾರೇ ಬರಲಿ, ಇವನು ಯಾರ ಹತ್ತಿರವೇ ಹೋಗಲೀ 'ಮನುಷ್ಯನಿಗೆ ಬದಲಾವಣೆ ಅನ್ನೋದು ಆಗುತ್ತಲೆ ಇರಬೇಕ್ರೀ. ಬದಲಾವಣೆ ಇಲ್ಲದೇ ಇದ್ದರೆ ಅದು ಬದುಕೇನ್ರೀ? ಬದಲಾವಣೇರೀ ಅದೇ ನಮ್ಮನ್ನ ಬೆಳೆವಣಿಗೆ ಮಾಡೋದೂ...' ಅಂತ ಕರಾರುವಾಕ್ಕಾಗಿ ಒಂದೂವರೆ ಘಂಟೆಯಷ್ಟು ಕೊರೆದು ಹಾಕಿ ಮೈ ಬೆವರು ಇಳಿಸಿ ರವಾನಿಸಿಬಿಡ್ತಾನೆ. ಅವನ ಮಾತನ್ನ ಕೇಳಿದವರು ಬದಲಾವಣೆಯೇ ಇಲ್ಲದೇ ಜೀವನ ಅದು ಹೇಗಪ್ಪಾ ನಡೆಸುತ್ತಾ ಇದೀವಿ ಅಂದುಕೊಂಡುಬಿಡಬೇಕು ಹಾಗಿರುತ್ತೆ ಅವನ ಬ್ರೈನ್ ವಾಷಿಂಗು. ಸರಿ ಅದಕ್ಕೆ ಇವನ ಸಹವಾಸದ ಅನುಭವವನ್ನು ತಿಳಿದವರೆಲ್ಲರೂ ಒಂದು ಉಪಾಯ ಕಂಡುಹಿಡಿದು ಕೊಂಡಿದ್ದಾರೆ - ಅದೇನಪ್ಪಾ ಅಂದರೆ ಅವನ ಜತೆ ಮಾತುಕತೆ ಆಡದಿರುವುದು, ಆಕಸ್ಮಾತ್ ಮಾತು ಆಡಲೇ ಬೇಕಾದ ಸಂದರ್ಭ ಒದಗಿದರೆ ಅವನಿಗೆ ಮಾತಿಗೆ ಅವಕಾಶವನ್ನೇ ಕೊಡದೆ ಜೀವನದಲ್ಲಿ ಅವತ್ತು ಅವರು ಮಾಡಿಕೊಂಡಿರುವ ಛೇಂಜನ್ನು ವಿವರಿಸಿ ಹೇಳಿಬಿಡೋದು.

'ಇವತ್ತು ಸ್ಕೂಟರಿನಲ್ಲಿ ಆಫೀಸಿಗೆ ಬರಲಿಲ್ಲ ಸಾರ್. ಚೇಂಜ್ ಬೇಕು ನೋಡೀ ಅದಕ್ಕೆ ಇವತ್ತು ನಡಕೊಂಡು ಬಂದುಬಿಟ್ಟೆ....' 'ಇವತ್ತು ಬೆಳಿಗ್ಗೆ ಎದ್ದಕೂಡಲೇ ಕಾಫಿ ಕುಡೀಲಿಲ್ಲ ಸಾರ್. ಬರೇ ಒಂದು ಲೋಟ ಹಾಲು ಕುಡಿದೆ - ಜೀವನದಲ್ಲಿ ಚೇಂಜ್ ಬೇಕು ನೋಡೀ ಅದಕ್ಕೇ...' 'ಇವತ್ತು ಮಾಮೂಲಿನ ಹಾಗೆ ಉಪ್ಪಿಟ್ಟು ತಿನ್ನಲಿಲ್ಲ ಸಾರ್. ಜೀವನದಲ್ಲಿ ಚೇಂಜ್ ಬೇಕಲ್ಲಾ ಅದಕ್ಕೇ ಒಂದು ಮಸಾಲೆ ತಿಂದು ಬಂದೆ...''

'ಇವತ್ತು ಹೆಂಡತಿ ಕೈಲಿ ಜಗಳ ಆಡಲಿಲ್ಲ ಸಾರ್, ಅದರ ಬದಲು ನಮ್ಮ ಅತ್ತೇನ ನೋಡಿ ಮುಖ ಸಿಂಡರಿಸಿದೆ'' - ಈ ರೀತಿ. ಇದು ಗಂಡು ಪ್ರಾಣಿಗಳು ಮಾಡುವ ಚೇಂಜ್ ಆದರೆ ಹೆಣ್ಣು ಪ್ರಾಣಿಗಳು ಮತ್ತೊಂದು ರೀತಿ.

'ಇವತ್ತು ಬಿ.ಎಂ.ಟಿ.ಸಿ. ಬಸ್ಸಿನಲ್ಲಿ ಬರಲಿಲ್ಲ ಸಾರ್. ಆಟೋರಿಕ್ಷಾದಲ್ಲಿ ಬಂದೆ ಆಫೀಸಿಗೆ...'

'ಇವತ್ತು ಒಂದು ಜಡೆ ಹಾಕಲಿಲ್ಲ ಸಾರ್. ಜೀವನದಲ್ಲಿ ಚೇಂಜ್ ಬೇಕಲ್ಲಾ ಅದಕ್ಕೆ ಇವತ್ತು ಕೂದಲನ್ನ ಹಾಗೇ ಕ್ಲಿಪ್ ಹಾಕಿ ಸಿಕ್ಕಿಸಿಕೊಂಡು ಬಂದಿದೀನಿ...'

'ಇವತ್ತು ನಮ್ಮ ಯಜಮಾನನಿಗೆ ಬುರುಡೆ ಮೇಲೆ ಲಟ್ಟಣಿಗೆಯಿಂದ ಬಾರಿಸಲಿಲ್ಲ ಸಾರ್. ಜೀವನದಲ್ಲಿ ಚೇಂಜ್ ಬೇಕಲ್ಲಾ ಅದರಿಂದ ಇವತ್ತು ಮಡಿಕೋಲು ತಗೊಂಡು ಬಲಗಾಲಿಗೆ ಇಕ್ಕಿದೀನಿ. ನಾಳೇನೂ ಚೇಂಜ್ ಬೇಕಲ್ಲಾ ಅದರಿಂದ ನಾಳೆ ಮಡಿಕೋಲಿನಲ್ಲಿ ಎಡಕಾಲಿಗೆ ಚಚ್ಚಬೇಕೂಂತ ಡಿಸೈಡ್ ಮಾಡಿದ್ದೀನಿ...'

'ಇವತ್ತು ನಮ್ಮ ಅತ್ತೇನ ಬೈಯಲಿಲ್ಲ ಫಾರ್ ಎ ಚೇಂಜ್ ನಾದಿನೀನ ಬೈದಿದೀನಿ... ನಾಳೆ ಮಾವನಿಗೆ ಬೈಯೋದೂ ಅಂತ ಪ್ಲಾನ್ ಹಾಕಿದೀನಿ....'

ಶಿವಣ್ಣನಿಗೆ ಇದನ್ನೆಲ್ಲಾ ಕೇಳಿ ಹೃದಯ ತುಂಬಿ ಹೋಗುತ್ತದೆ 'ಗೂಡ್, ವೆರಿಗೂಡ್

ಕಾಣ್ರೀ. ಜೀವನ ಅಂದರೆ ಏನ್ರೀ ಬದಲಾವಣೆ ಕಾಣ್ರೀ. ಚೇಂಜಿನ ಸೊಗಸು ವಿಶ್ವದಲ್ಲಿರಲು ವಿಶ್ವವೇ ಚೇಂಜು...' ಅಂತ ಒಂದು ಸ್ವರಚಿತ ಪದ್ಯ ಹೇಳಿಬಿಟ್ಟು ಖುಷಿ ಪಡುತ್ತಾನೆ.

ಮೊನ್ನೆ ಹೊಸದಾಗಿ ನಮ್ಮ ಆಫೀಸಿಗೆ ಕ್ಲರ್ಕ್ ಒಬ್ಬಳು ಸೇರಿಕೊಂಡಳು. ಹೊಸದಾಗಿ ಕಾಲೇಜು ಮುಗಿಸಿ ಬಂದವಳು, ಎರಡೋ ಮೂರೋ ಡಿಗ್ರಿಗಳನ್ನ ಹೆಸರಿನ ಅಂಚಿಗೆ ಸೇರಿಸಿಕೊಂಡಿದ್ದವಳು ಮತ್ತು ಈಗಿನ ಹೆಣ್ಣು ಮಕ್ಕಳ ಹಾಗೆ ತುಂಬಾ ಛೂಟಿ ಹುಡುಗಿ. ಶಿವಣ್ಣನಿಗೆ ಈಕೆಯನ್ನ ಇಂಟ್ರೊಡ್ಯೂಸು ಮಾಡಿದೆವು. 'ಹೀಗೆ ಸಾರ್, ಕಾಲೇಜಿನಿಂದ ಇದೇ ತಾನೇ ಆಚೆ ಬಂದಿದೆ ಮಗು. ತಲೆಯ ತುಂಬ ಹೊಸಾ ಹೊಸಾ ಯೋಚನೆಗಳನ್ನು, ಯೋಜನೆಗಳನ್ನು ಇಟ್ಟುಕೊಂಡಿದೆ...' ಅಂತ ವಿವರಿಸಿದೆವು. ಒಂದೆರಡು ದಿವಸ ಆಗಲಿ ಆಮೇಲೆ ಈಕೆಗೆ ಶಿವಣ್ಣನ ಐಲುತನ ತಿಳಿಸೋಣ ಅಂತ ಸುಮ್ಮನಿದ್ದೆವು.

ಮಾರನೇ ದಿವಸ ಈಕೆ ಶಿವಣ್ಣನ ರೂಮಿಗೆ ಹೋದಳು. ಶಿವಣ್ಣ ಫೈಲಿನಲ್ಲಿ ತಲೆ ಹುದುಗಿಸಿಕೊಂಡು ಅದೇನೋ ಬರೀತಾ ಇದ್ದ. ಅವನು ಆವಾಗ ಒಂದು ಕಾರ್ಟೂನು ಬರೀತಿದ್ದ, ಕಣ್ಣೆರೆಡು ಬರೆದಿದ್ದ, ಮುಖ ಮೂಡಿತ್ತು, ಆದರ ಮೈ ಬರೆಯೋದಕ್ಕೆ ಇನ್ನೂ ಆಗಿರಲಿಲ್ಲ. ಮೈಯಿನ ಬದಲು ಒಂದೇ ಒಂದು ಗೆರೆ ಬರೆದು ಈ ಗೆರೆಯನ್ನೇ ಮೈಯಿ ಅಂತ ಭಾವಿಸಿದರೆ ಹೇಗೇ? ಕಾರ್ಟೂನುಗಳನ್ನು ಹೊಸದಾಗಿ ಬರೆಯೋರಿಗೆ ಈ ಥರಹದ ಒಂದು ಹೊಸಾ ಹಾದಿ ಇದ್ದರೆ ಅದೆಷ್ಟು ಚೆನ್ನ... ಒಂದು ಗೆರೆ ಹೀಗೆ ಎಳೆದರೆ ಅದು ಮೈಯಿ, ಉದ್ದುದ್ದಕ್ಕೆ ಎಳೆದರೆ ಅದು ನದಿ, ಅಡ್ಡಡ್ಡ ಎಳೆದರೆ ಅದು ಬೆಕ್ಕು... ಈ ರೀತಿ ಯಾಕೆ ನಾವು ಬದಲಾವಣೆ ಮಾಡಿಕೊಳ್ಳಬಾರದೂ... ಅಂತ ಶಿವಣ್ಣ ಲೌಡ್ ಥಿಂಕಿಂಗು ಮಾಡುತ್ತಿದ್ದ ಅಂತ ಅವನ ಅಸಿಸ್ಟೆಂಟು ಚಿಕ್ಕುನಿಯ ಹೇಳಿದನಂತೆ. ಇದೇ ಸಮಯದಲ್ಲಿಯೇ ನಮ್ಮ ಹೊಸಾ ಕ್ಲರ್ಕು ಶಿವಣ್ಣನ ಆಫೀಸಿಗೆ ನುಗ್ಗಿದ್ದು. 'ಸಾರ್...' ಅಂದಳು. ಶಿವಣ್ಣ ಕಾರ್ಟೂನಿಂದ ಹೊರ ಪ್ರಪಂಚಕ್ಕೆ ಬಂದ, ತಲೆಯೆತ್ತಿ ಈಕೆಯನ್ನ ನೋಡಿದ. ಅವನ ತಲೆಯಲ್ಲಿ ನಡೆಯುತ್ತಿದ್ದ ಸರ್ಕಸ್ಸು ಈಗ ಸ್ಫೋಟವಾಯಿತು! ಶಿವಣ್ಣ ''ಚೇಂಜ್ ಬೇಕ್ರೀ ಜೀವನದಾಗೆ...'' ಅಂತ ಶುರು ಮಾಡಿದ. ಪಾಪ ಈಕೆಗೆ ಹಿಂದೆ ಮುಂದೆ ತಿಳೀದು. ''ಜೀವನದಾಗೆ ಛೇಂಜ್ ಇದ್ದರೇನೇ ಏನಾರ ಮಾಡುಕ್ಕೆ ಆಗಾದು... ತಿಳೀತಾ...'' ಅಂತ ನಲವತ್ತೆರಡೂವರೆ ನಿಮಿಷ ಭೋರ್ಗರೆದುಬಿಟ್ಟನಂತೆ. ಇದೂನೂ ನಮ್ಮ ಚಿಕ್ಕುನಿಯನೇ ನಮಗೆ ಹೇಳಿದ್ದು!

ಈಕೆಗೆ ತಲೆಬುಡ ಅರ್ಥವಾಗಲಿಲ್ಲ. ಯಾಕೆ ಹೀಗೆ ಹೇಳ್ತಾ ಇದಾರೆ ಬಾಸು ಅಂತ ತೀವ್ರವಾದ ಗೊಂದಲದಲ್ಲಿ ಸಿಕ್ಕಿಕೊಂಡಳು. ಎರಡು ನಿಮಿಷ ಗರ ಬಡಿದವಳ ಹಾಗೆ ನಿಂತಿದ್ದಳಂತೆ... ನಂತರ ಪರ್ಸನ್ನ ತೆರೆದಳು. ಅದರಲ್ಲಿದ್ದ ಚಿಲ್ಲರೆ ಕಾಸನ್ನ ಹೊರಗೆ ತೆಗೆದಳು.

''ಸಾರ್, ಇವತ್ತು ಇಷ್ಟೇ ಚೇಂಜು ನನ್ನ ಹತ್ತಿರ ಇರೋದೂ. ಆರು ರೂಪಾಯಿ ಎಪ್ಪತ್ತೈದು ಪೈಸೆ ಇದೆ. ಇಷ್ಟನ್ನೇ ಮನೆಯಿಂದ ತಂದಿರೋದೂ... ನಾಳೆ ನಮ್ಮ ಅಜ್ಜೀನ ಕೇಳಿ ಇನ್ನೂ ಜಾಸ್ತಿ ಚೇಂಜು ಇಸ್ಕೊಂಡು ಬರ್ತೀನಿ...'' ಅಂತ ಹೇಳಿ ಆತನ ಟೇಬಲ್ಲಿನ ಮೇಲೆ ಚಿಲ್ಲರೆ ಸುರಿದಳಂತೆ. ಚಿಲ್ರೆ ಸುರಿದು ಆಚೆ ಬಂದಳಂತೆ...! ಶಿವಣ್ಣನ ಇಮ್ಮೀಡಿಯೇಟ್ ರಿಯಾಕ್ಷನ್ ಏನು ಅಂತ ಇನ್ನೂ ತಿಳಿದಿಲ್ಲ - ನಮಗೆ!

❖❖❖

ಸುಲಭೋಪಾಯ

– ಗೌತಮ

ಕೊನೆಯ ಪುಟವಿಲ್ಲದ ಪುಸ್ತಕ ಯಾವುದೆಂದರೆ 'ಗಿನ್ನಿಸ್ ಪುಸ್ತಕ'ವೇ. ಅದಕ್ಕೆ ಸೇರದ ವ್ಯಕ್ತಿಗಳಿಲ್ಲ, ವಿಷಯಗಳಿಲ್ಲ. ಇತ್ತೀಚೆಗೆ ಸಸ್ಯಶಾಸ್ತ್ರದ ಉಪನ್ಯಾಸಕರೊಬ್ಬರು ಅದರಲ್ಲಿ ಸೇರಿಕೊಳ್ಳಲು ಎಂಬತ್ತೆಂಟು ಗಂಟೆಗಳ ಕಾಲ ಸತತವಾಗಿ ಉಪನ್ಯಾಸ ನೀಡಿದರು. ಅದಕ್ಕೊಂದು ವಿಷಯ ಅಂತ ಆಯ್ಕೆ ಮಾಡಿಕೊಂಡು ಆ ವಿಷಯದ ಬಗ್ಗೆಯೇ ಮಾತನಾಡಿ, ಹಿಂದಿ ವ್ಯಾಕರಣದ ಬಗ್ಗೆ ಈ ಹಿಂದೆ ಒಬ್ಬರು ಮಾಡಿದ್ದ ದಾಖಲೆಯನ್ನು ಇವರು ಮುರಿದಿದ್ದಾರಂತೆ. ಇದನ್ನ ಸಾಧಿಸೋಕೇಂತಲೇ ಅವರು ಹಲವಾರು ಪುಸ್ತಕಗಳನ್ನು ಪರಿಶೀಲಿಸಿದ್ದರಂತೆ. ಅಯ್ಯೋ ಪಾಪ ಅನ್ನಿಸಿತು. ಯಾಕೆ ಅಂದಿರಾ? ಅಲ್ರೀ, ಮಾತಾಡೋಕೆ ವಿಷಯ ಯಾಕ್ರೀ ಬೇಕೂ? ಯಾವುದೇ ವಿಷಯ ಇಲ್ಲದೇ ಗಂಟೆಗಟ್ಟಲೆ, ಗಂಟೆಗಟ್ಟಲೆ ಏನು, ದಿನಗಟ್ಟಲೆ ಮಾತಾಡೋರಿಗೆ ನಮ್ಮಲ್ಲಿ ಬರವೇನ್ರೀ? ಅಂಥೋರ ಜೊತೆ ಒಂದರ್ಧ ಗಂಟೆ ಕೂತಿದ್ದರೆ ಸಾಕು. ಅದರ ನ್ಯಾಕ್ ಗೊತ್ತಾಗಿಬಿಡತ್ತೆ. ಆಗಿಬಿಡತ್ತೋ ಏನೋ. ಅದರೆ, ವಿಷಯಾಂತರ ಮಾಡುವಾಗ ಬೇರೆ ವಿಷಯ ಬುರುಡೇಗೆ ಹೊಳೆಯದೇ ಇದ್ದರೆ? ಒಂದು ಮಾತಿಗೂ ಇನ್ನೊಂದು ಮಾತಿಗೂ ಮಧ್ಯೆ ಮೂವತ್ತು ಸೆಕೆಂಡಿಗಿಂತ ಹೆಚ್ಚು ಕಾಲ ಮೌನದ ಗ್ಯಾಪ್ ಬಿಡೋ ಹಾಗಿಲ್ಲವಂತೆ. ಆ ತರಹ ನಿಯಮ ಒಂದಿಲ್ಲದಿದ್ದರೆ ವಾಜಪೇಯಿಯವರ ತರಹ ಹತ್ತು ಹತ್ತು ನಿಮಿಷಕ್ಕೊಂದು ಪದ ಉಚ್ಚರಿಸಿ ಎಂಟನೂರ ಎಂಬತ್ತು ಗಂಟೇನೂ ಭಾಷಣ ಮಾಡಿಬಿಡಬಹುದು. ಚಿಂತೆಯಿಲ್ಲ. ಅದಕ್ಕೂ ಒಂದು ಉಪಾಯ ಇದೇರೀ. ಮುಂದೆ ಏನು ಹೇಳಬೇಕು ಅನ್ನೋದು ಗೊತ್ತಾಗದಿರುವಾಗ 'ಇತ್ಯಾದಿ'ಯನ್ನು ಬಳಸಿ ಬಚಾವಾಗುವಂತೆ, 'ನಾನೀಗ ಏನು ಹೇಳಬೇಕೂಂತ ಇದ್ದೀನಿ ಅಂದರೇ...' ಅಂತಲೋ, 'ನಾನು ಏನು ಹೇಳ್ತಿದ್ದೆ?' ಅಂತ ಅವರನ್ನೇ ಕೇಳುತ್ತಲೋ ನಿಮ್ಮ ಭಾಷಣವನ್ನು ಮುಂದುವರೆಸಿ ಅಷ್ಟೇ.

ಇಲ್ಲವೇ, ಅಂತ್ಯಾಕ್ಷರಿ ತರಹ ನಿಮ್ಮ ಕೊನೆಯ ಪದವನ್ನೇ ಮುಂದಿನ ವಿಷಯವನ್ನಾಗಿ ಮಾಡಿಕೊಳ್ಳಿ ಹೀಗೆ. 'ನಾನು ತೆಗೆದುಕೊಂಡಿರುವ ವಿಷಯ ಸಸ್ಯಶಾಸ್ತ್ರ. ಶಾಸ್ತ್ರ ಅಂದ ಕೂಡಲೇ ನೆನಪಿಗೆ ಬರೋದು ಶಾಸ್ತ್ರಿ. 'ಶಾಸ್ತ್ರೀಯ ಭಾಷೆಯಾಗಿ ಕನ್ನಡ' ಇಂದಿನ ಕನ್ನಡಿಗರೆಲ್ಲರ ಮಹತ್ವಾಕಾಂಕ್ಷೆ. ಆ ಮಹತ್ವಾಕಾಂಕ್ಷೆಯ ವಿರುದ್ಧ ದನಿಯೆತ್ತಿದ್ದ ಬುದ್ಧಿಜೀವಿಯೊಬ್ಬರು ಈಗ ಕನ್ನಡದ ಪರ ಚುನಾವಣೆಗೆ ನಿಂತಿದ್ದಾರೆ. ಅವರು ಸೋಲುತ್ತಾರೋ ಗೆಲ್ಲುತ್ತಾರೋ ಅದು ಬೇರೆ ವಿಷಯ. ಆದರೆ ಸೋಲು ಗೆಲುವಿನ ಮೆಟ್ಟಿಲು ಎಂಬ ಗಾದೆಯನ್ನು ಮರೆಯಬಾರದು. ಮರೆವು ಮನುಷ್ಯನಿಗೆ ದೇವರು ಕೊಟ್ಟಿರುವ ದೊಡ್ಡ ವರ. ವರ ಅಂದ ಕೂಡಲೇ ಜ್ಞಾಪಕಕ್ಕೆ ಬಂತು ನೋಡೀ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಇನ್ನು ಮುಂದೆ ವರಗಳು ಸಿಗುವುದು ತುಂಬಾ ಕಷ್ಟ. ಕಷ್ಟ ಅಂತ ಕೈ ಕಟ್ಟಿ ಕುಳಿತರೆ ಯಾವ ಕೆಲಸವೂ...' ಗೊತ್ತಾಯ್ತಲ್ಲ?

ಇನ್ನೊಂದು ಮಾರ್ಗ ಇದೆ. ಅದೊಂತಂದರೆ ಸತತವಾಗಿ ನೂರೆಂಟು ಗಂಟೆ ಕಾಲ ಹಾಡು ಹೇಳುವುದು. ಮಾತಾಡೋದೇ ಕಷ್ಟವಾಗಿರುವಾಗ ಹಾಡು ಹೇಳೋದು ಇನ್ನೂ ಕಷ್ಟ ಅಂದಿರಾ? ನಿಮ್ಮ ನಂಬಿಕೆ ಶುದ್ಧ ತಪ್ಪು ಇವರೇ. ಆಕ್ಚ್ಯುಯಲ್ಲಾಗಿ ಅದು ಇನ್ನೂ ಸುಲಭಾರೀ. ಉದಾಹರಣೆಗೆ ಈ ಹಾಡನ್ನೇ ತೊಗೊಳ್ಳೀಪ್ಪ. 'ಒಂದು ದಳದ ಲಿಂಗದಲ್ಲಿ ಐಕ್ಯವಾದ ಲಿಂಗವೇ' (ಮೊದಲ ಸಾಲನ್ನು ಬಲ್ಲವರಿಂದ ಸರಿಯಾಗಿ ತಿಳಿದುಕೊಳ್ಳಿ). ಇಲ್ಲಿ ಮುಖ್ಯವಾದ ಪದ 'ಒಂದು' ಆಗಿರುವುದರಿಂದ ಬೇರೆ ಪದಗಳ ಬಗ್ಗೆ ನಾನು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ, ರಾಗವಾಗಿ ಇದನ್ನ ಹಾಡಿ. ಒಂದೊಂದು ಸಾಲನ್ನ ಎರಡೆರಡು ಸಲ ಹಾಡಿ. ಎರಡನೇ ಸಾಲಿನಲ್ಲಿ 'ಒಂದು' ಅಂತಿರೋದನ್ನ 'ಎರಡು' ಅಂತ ಮಾಡಿ. ಮಿಕ್ಕಿದ್ದೆಲ್ಲಾ ಡಿಟೋ. ಆಮೇಲೆ ಎರಡನ್ನ ಮೂರು ಮಾಡಿ. ಒಕೇ?

ಇನ್ನೂ ಒಂದು ಮೆಥಡ್ಡಿದೆ ಗಿನ್ನೆಸ್‌ನ ಹಾಳೆಗಳನ್ನು ಸೇರಲು. ಅದು ಅಂದರೆ ನಿರಂತರವಾಗಿ ಕಥೆ ಹೇಳುವುದು. ಅದಕ್ಕೆ ನಮ್ಮ ತಾತನ ಕಾಲದ ಕಥೆಯನ್ನು ಬೇಕಾದರೂ ಆಯ್ದುಕೊಳ್ಳಬಹುದು, ಇಲ್ಲವೇ ಅತ್ಯಾಧುನಿಕ ಕಥೆಯನ್ನು ಬೇಕಾದರೂ ಆಯ್ದುಕೊಳ್ಳಬಹುದು. ಹೀಗೆ ಒಂದೂರು. ಅಲ್ಲೊಬ್ಬ ರೈತ. ಸುಗ್ಗಿ ಕಾಲ. ಹೊಲದಲ್ಲಿ ಭತ್ತದ ರಾಶಿ. ಆ ರಾಶೀನ್ನ ನೋಡ್ತಾ ಖುಷಿಯಿಂದ ರೈತ ಕೂತಿದ್ದಾನೆ. ಒಂದು ಗುಬ್ಬಚ್ಚಿ ಬಂತು. ಆ ಕಡೆ ಈ ಕಡೆ ನೋಡ್ತು. ಮೆಲ್ಲಗೆ ರಾಶಿಯ ಹತ್ತಿರ ನಡಕೊಂಡು ಹೋಯಿತು. ತನ್ನ ಕೊಕ್ಕಿನಲ್ಲಿ ಮೆಲ್ಲನೆ ಒಂದು ಕಾಳನ್ನ ಕಚ್ಚಿಕೊಂಡು ಹಾರಿ ಹೋಯಿತು...' ಈ ಕಥೇನ ಮುಂದುವರೆಸೋದು ಹೇಗೆ ಅಂತ ನಾನೇನು ಹೇಳಿಕೊಡಬೇಕಾಗಿಲ್ಲ ಅಲ್ಲವೇ?

ಅಥವಾ ಹೀಗೆ ಲೆಕ್ಕಾನೂ ಮಾಡಬಹುದು. ಐದಕ್ಕೆ ಐದು ಸೇರಿದರೆ ಹತ್ತಾಗುತ್ತೆ. ಆ ಹತ್ತಕ್ಕೆ ಐದನ್ನು ಸೇರಿಸಿದರೆ ಹದಿನೈದಾಗತ್ತೆ... ಹಾಗೇ ಐದೈದಕ್ಕೆ ಸೇರಿಸ್ತಾ... ಹೋಗಿ. ಗಾಟ್ ಇಟ್?

ಇದು ಬಿಳಿಯಾಗುತ್ತಿರುವ ನಮ್ಮಂಥವರ ತಲೆಗೆ ಹೊಳೆಯುವ ಮೆಥಡ್ಡುಗಳು. ಆದರೆ ಇಂದಿನ ಮೊಬೈಲ್ ಹುಡುಗ (ಹುಡುಗಿಯ)ರಿಗೆ ಇದರ ತಾತನಂಥ ಸಾವಿರಾರು ಮೆಥಡ್ಡುಗಳು ಈಸಿಯಾಗಿ ಸಿಗುತ್ತವೆ ಅನ್ನೋದು ನನಗೆ ಗೊತ್ತು.

ಇದನ್ನ ಬರೀತಾ ಇರಬೇಕಾದರೆ ನಮ್ಮ ಪಕ್ಕದ ಮನೆ ಚಿಲ್ಟಾರಿ ಬಂದು ಕೂತ. ಎಲ್ಲವನ್ನೂ ಓದಿ 'ಇದೇನಂಕಲ್ ಇಷ್ಟೊಂದು ಕಾಂಪ್ಲಿಕೇಟೆಡ್ ಮೆಥಡ್ಡುಗಳನ್ನ ಹೇಳ್ತಾ ಇದೀರ. ತುಂಬಾ ಸಿಂಪಲ್ಲಾಗಿ ಗಿನ್ನಿಸ್ ಬುಕ್ ಸೇರಿಕೋಬಹುದು. ಅದಕ್ಕೆ ಓದೂ ಬೇಡ ಬರಹಾನೂ ಬೇಡ. ಎಂಥ ಫೂಲೂ ಮಾಡಬೋದು. ನೀವು ಬೇಕಾದರೂ ಸೇರಬಹುದು ಅಂಕಲ್' ಅಂದ. 'ಎಲಾ ಇವನಾ' ಅಂತ ಬರೆಯೋದನ್ನ ನಿಲ್ಲಿಸಿ ಅವನ ಕಡೆ ನೋಡಿದೆ. 'ನಿಮಗಿಷ್ಟವಾಗಿರೋ ಒಂದು ಪದಾನ ಸೆಲೆಕ್ಟ್ ಮಾಡ್ಕೊಳ್ಳಿ ಅಂಕಲ್. ಫರ್ ಎಗ್ಸಾಂಪಲ್, ಕಬಡಿ. ಆ ಕಬಡೀನ್ನೇ ಬಿಲಿಯನ್ ಟೈಮ್ಸೋ ಟ್ರಿಲಿಯನ್ ಟೈಮ್ಸೋ ಹೇಳಿ. ಅಷ್ಟೇ' ಅಂದ ಕೂಲಾಗಿ.

ನನ್ನಲ್ಲೇನೋ ಗಿನ್ನಿಸ್ ಸೇರೋ ಆಸೆ ಚಿಗುರಿತು. ನಿಮ್ಮಲ್ಲಿ?

❖❖❖

ಎಲ್ಲಾ ರೂಪವು ತಾನಂತೆ ಶಿವ!

(ಕಳೆದ ಶಿವರಾತ್ರಿಯಲ್ಲಿ ನಡೆದ ಪ್ರಸಂಗ!)

- ನೀರಗುಂದ ಕೇಶವಮೂರ್ತಿರಾವ್

ಬಾಗೂರಿನ ಬುರುಡೆ ಬಾಜೀರಾಯರು ಶ್ರೀ ಶ್ರೀ ಸಂಪಾದನ ಶೂನ್ಯ ಸಿಂಹಾಸನಾಧೀಶ್ವರರಾದ ಮೇಲೆ ನಾನು ಭೇಟಿಯಾಗಿರಲಿಲ್ಲ. ಈಚೆಗೆ ಊರಿಗೆ ಹೋದಾಗ ಮುಖಾಮುಖಿಯಾಗಿ ಸಂಧಿಸಿದ್ದೆ. ಮೊದಲಿನಂತೆ ಏಕವಚನದಲ್ಲಿ ಮಾತನಾಡುವಂತಿರಲಿಲ್ಲ.

ಬುರುಡೆ ಬಾಜೀರಾಯರು ಸಂಪಾದನ ಶೂನ್ಯ ಮಠಕ್ಕೆ ಶ್ರೀಗಳಾಗಿ ಬಂದದ್ದೇ ದೊಡ್ಡ ಕಥೆ. ಬಾಜೀರಾಯರ ಭೂತಕಾಲದ 'ಬುರುಡೆ' ಸಾಹಸಗಳೆಲ್ಲಾ ಬಾಗೂರಿನವರಿಗೆ ತಿಳಿದದ್ದೆ. ಮನೆ ಮಠಗಳನ್ನೆಲ್ಲ ಮಾರಿ ಸಾಲ-ಸೋಲಗಳನ್ನು ತೀರಿಸದೆ, ತಾರತಿಗಡಿ ತಾಪತ್ರಯಗಳಿಂದ ಪಾರಾಗದೇ ಪರಿತಪಿಸುತ್ತಿದ್ದವರು. ಬಹಳ ಹಿಂದೆಯೇ ಮಡದಿ ಸತ್ತು, ಇದ್ದೊಬ್ಬ ಮಗಳಿಗೆ ಮದುವೆ ಮಾಡಿ ಕಳಿಸಿದ್ದೊಂದು ಬೇರೆ ಎಪಿಸೋಡು. ಹೀಗೆ ದಿನನಿತ್ಯದ ಕೂಳಿಗೆ ಪಾಡು ಬೀಳುತ್ತಿದ್ದ ರಾಯರಿಗೆ ಸಂಪಾದನೆಯೇ ಇಲ್ಲದ ಮಠದ ಪಟ್ಟ ಆನೆಯ ಸೊಂಡಲಿನಲ್ಲಿ ಹೂವಿನ ಹಾರ ಹಾಕಿಸಿಕೊಂಡು ಆಯ್ಕೆ ಆದದ್ದಲ್ಲ. ಊರವರ ವಿರೋಧ ಕಟ್ಟಿಕೊಂಡೇ ಪಟ್ಟಕ್ಕೇರಿದವರು. ''ಬಾಲ್ಯದಲ್ಲಿ ಏಟು ತಿನ್ನಬೇಕಾದ ಪಾಠಶಾಲೆಗೆ ಹೋಗದೆ ಚಕ್ಕರು ಹಾಕಿ, ಮುಗ್ಧರ ಅರಿವಿಗೆ ಬಾರದಂತಹ ಯಕ್ಷಿಣಿಯನ್ನು ಮಾಡಿ ಪಾದಪೂಜೆ ಮಾಡಿಸಿಕೊಳ್ಳುವ ಕಾವಿಧಾರಿ ಸ್ವಾಮಿಯಾಗಿದ್ದಾನೆ'' ಎಂಬ ಊರಿನ ಕಿಡಿಗೇಡಿಯೊಬ್ಬನ ಅಂಬೋಣ!

ಸಂದರ್ಶನ ಕಾಲದಲ್ಲಿ ಶರೀರಗಳು ಪಟ್ಟವೇರಿದ ನಂತರ ಲಾಲೂ ಪ್ರಸಾದರ ಭಾರತೀಯ ರೈಲಿನಲ್ಲಿ ಟಿಕೇಟು ರಹಿತ ಪ್ರಯಾಣಿಕರಾಗಿ ಸಂಚರಿಸುತ್ತಿದ್ದಾಗಿನ ಅನುಭವಗಳನ್ನು ಸ್ವಾರಸ್ಯಕರವಾಗಿ (ಬುರುಡೆ ಹೊಡೆಯುತ್ತಾ ಎಂದರೂ ಸರಿಯೆ) ಬಣ್ಣಿಸಿದರು. ''ಊರೊಳಗೆ ಮುದ್ದೆ ಗುಡಿಯೊಳಗೆ ನಿದ್ದೆ'' ಎಂಬ ಉಕ್ತಿಯನ್ನನುಸರಿಸಿ ಕ್ಷೇತ್ರದರ್ಶನ ಮಾಡಿ ಬಂದರಂತೆ. ದ್ವಾದಶಲಾಗವಲ್ಲದೇ ಇತ್ತೀಚಿನ ತಲಕಾಡು ಪಂಚಲಿಂಗ ದರ್ಶನವೂ ಆಗಿದೆ ಎಂದರು. ಆಗ ನಾನು (ಸುಮ್ಮನಿರಲಾರದೆ ಇರುವೆ ಬಿಟ್ಕೊಂಡ್ಹಂಗೆ) ನಮ್ಮ 'ಕೋಟಿಲಿಂಗ' (ಕೋಲಾರದ ಸಮೀಪ) ದರ್ಶನ? ಎಂದೆ. ಆಗ ಹಾಗಾದರೆ ಈ ಸಲದ ಶಿವರಾತ್ರಿಗೆ ಕೋಟಿಲಿಂಗ ದರ್ಶನದ ಸಕಲ ಸಿದ್ಧತೆ ನಡೆಯಲಿ. ನಾವುಗಳು ಸಿದ್ಧ ಎಂದರು ಶ್ರೀಗಳವರು. (ಏನೂ ಇವರೂ ಸಹ 'ನಾವು' ಎಂದು ಸಂಬೋಧಿಸಿಕೊಳ್ಳುತ್ತಾರಲ್ಲ. ಬೀchi ಯವರು ಅಂದಂತೆ 'ನಾವು' ಎಂದು ಸಂಬೋಧಿಸಿಕೊಳ್ಳುವ ಹಕ್ಕು ಗರ್ಭಿಣಿಯವರಿಗೆ ಮಾತ್ರ. ಎಂಬ ಮಾತು ನೆನಪಿಗೆ ಬಂತು) ನಮ್ಮ ಅಂದಿನ ಮಾತುಕತೆ ಬರಖಾಸ್ತಾಯ್ತು.

ಶ್ರೀಗಳಿಗೆ ಕೊಟ್ಟ ಆಹ್ವಾನ ನನಗೆ ಮರತೇ ಹೋಗಿತ್ತು. ಒಂದು ಮುಂಜಾನೆ ಎಂದಿನಂತೆ ಪಕ್ಕದ ಮನೆ ಪ್ರಭಾಕರನೊಂದಿಗೆ ಕಾಫಿ ಹೀರುತ್ತಿರುವಾಗ ಶ್ರೀ ಸಂಪಾದನ ಶೂನ್ಯ ಸಿಂಹಾಸನಾಧೀಶ್ವರರ (ಬುರುಡೆ ಬಾಜೀರಾಯನ) ನಿರೂಪವೊಂದು

ಕೊರಿಯರ್ ಮುಖಾಂತರ ಬಾಗೂರಿನಿಂದ ಬಂತು. ಸುದ್ದಿ - ''ಮಹಾ ಶಿವರಾತ್ರಿಯ ದಿನ ಶತಕವೋ - ಕೋಟಿಯೋ ಲಿಂಗದರ್ಶನವಾಗಬೇಕು. ಸಕಲ ಏರ್ಪಾಡು ಮಾಡುವುದು - ಶ್ರೀ ಪ್ರಭಾಕರನಿಗೆ ಶ್ರೀಗಳ ಪೂರ್ವೇತಿಹಾಸಗಳೊಂದಿಗೆ ಇಂದಿನ ಚಹರೆ ಪಟ್ಟಿಯನ್ನೂ ಕೊಟ್ಟೆ, ಅಲ್ಲದೆ ಕೋಟಿಲಿಂಗ (ಕೋಲಾರದ ಸಮೀಪದ) ದರ್ಶನಕ್ಕೆ ಹೋಗಿ ಬರುವ ಖರ್ಚಿನ ಲೆಕ್ಕಾಚಾರವನ್ನು ಹಾಕಿದ್ದಾಯ್ತು. ಆಗ ಪ್ರಭಾಕರ ''ಒಂದ್ಪ್ಲಾನ್ ಹೇಳ್ತೀನಿ ಹಂಗ್ಮಾಡೋಣ. ಇದ್ದಲ್ಲೇ ನಿಮ್ಸ್ವಾಮಿಗೆ ನೂರು ಲಿಂಗ ತೋರಿಸ್ತೀನಿ ಸುಮ್ನಿರು'' ಎಂದು ಕಿವಿಯಲ್ಲಿ ಏನೇನೋ ಉಸುರಿದ. ನನಗೆ ಎಲ್ಲಿಲ್ಲದ ಗಾಭರಿ. ''ಸ್ವಾಮಿ ಶಾಪ ಏನೂ ತಟ್ಟಲ್ಲ ಹೇಳಿದಷ್ಟು ಕೇಳು'' ಎಂದು ಮನೆಗೆ ಹೊರಟ.

ಶಿವರಾತ್ರಿಯ ಶುಭದಿನದ ಮುನ್ನಾದಿನ ಶ್ರೀಗಳು ನನ್ನ ಮನೆಗೆ ಆಗಮಿಸುವುದಾಗಿ ಸುದ್ದಿ ಕಳಿಸಿದರು. ನಾನೂ ಸಹ ಬಾಗೂರಿಗೆ ನನ್ನ ಮಿತ್ರನಿಗೆ ಫೋನ್‌ಮಾಡಿ ಕೇಳಿದಾಗ ಶ್ರೀಗಳು ಕಾಲುನಡಿಗೆಯಲ್ಲಿ ನಮ್ಮಲ್ಲಿಗೇ ಹೊರಟಿರುವುದಾಗಿ ತಿಳಿಸಿದ. (ಆ ನಂತರದ ವದಂತಿಯ ಪ್ರಕಾರ ಮಾಮೂಲಾಗಿ ಟಿಕೇಟು ರಹಿತ ಪ್ರಯಾಣಿಕರಾಗಿ ರೈಲಿನಲ್ಲಿ ಮಹಾನಗರಿ ತಲುಪಿ ತಮ್ಮ ಕಾವಿ-ಶಾಟಿ ಮುಂತಾದ ವೇಶಗಳನ್ನು ಬದಲಿಸಿ, ಪೂರ್ವಾಶ್ರಮದ ಪ್ರೇಯಸಿಯ ಮನೆಯಲ್ಲಿ ತಂಗಿದ್ದರೆಂಬ - ಅಂಬೋಣ ಅವರಿವರಿಂದ ತಿಳಿಯಿತು. ಇರಲಿ.)

ಮಹಾಶಿವರಾತ್ರಿ ನಾಡಿದ್ದು. ಯಾವ ವೇಳೆಯಲ್ಲಿ ಸ್ವಾಮಿಗಳ ಪಾದಧೂಳಿ ನಮ್ಮ ಮನೆಯಲ್ಲಿ ಬಿದ್ದು ಗಲೀಜಾಗುತ್ತದೋ ತಿಳಿಯದೆಂದು ಮನೆ ಮಂದಿ ಆಡಿಕೊಳ್ಳುತ್ತಿರುವಾಗಲೇ ದೂರವಾಣಿಯ ಕರೆ. ರಿಸೀವರ್ ಎತ್ತಿದಾಗ ಶ್ರೀಗಳ ಗೊಗ್ಗರು ಧ್ವನಿ. ನಾಳೆ ಮಧ್ಯಾಹ್ನ ಬರುತ್ತಿರುವುದಾಗಿ ಸುದ್ದಿ. ಸ್ವಾಗತ ಸಿದ್ಧತೆ ಹೇಗೆ ನಡೆಸಬೇಕೆಂದು ತಿಳಿಯದೆ ''ಶಿವಪ್ಪ ಕಾಯೋತಂದೆ...'' ಎಂದು ತಲೆ ತೂರಿಸುತ್ತಿತ್ತು. ಆಗಲೇ ಇಕ್ಕತಿ ಈರಭದ್ರನಂತೆ ಪ್ರಭಾಕರನ ಆಗಮನ. ಆವನ ಸಲಹೆ ಸೂಚನೆ ಮೇರೆಗೆ ಏರ್ಪಾಡು!

ಇಂದು ಮಟ ಮಟ ಮಧ್ಯಾಹ್ನ ಶ್ರೀ ಶ್ರೀಗಳ ಪಾದ ನಮ್ಮ ಮನೆಯಂಗಳದಲ್ಲಿ ಊರಿದಾಗ ಅರ್ಘ್ಯ, ಪಾದ್ಯ ಆಚಮನಾದಿ ಪೂರ್ಣ ಕುಂಭ ಸ್ವಾಗತವಿಲ್ಲದ್ದಿರೂ ಹಸಿದ ಹೊಟ್ಟೆಗೆ ಸಾಕಷ್ಟು ಮೃಷ್ಟಾನ್ನ ಭೋಜನವಿಲ್ಲದಿದ್ದರೂ ಊಟದ ಶಾಸ್ತ್ರವೇನೋ ಆಯ್ತು. ನಂತರ ದಣಿದ ಬಂದಿದ್ದರಿಂದ ಗಡದ್ದಾಗಿ ನಿದ್ರೆಯನ್ನೂ ಪೂರೈಸಿದರು. ಸಂಜೆ ಲೋಕಾಭಿರಾಮವಾಗಿ (ಹರಟೆ) ಮಾತನಾಡುತ್ತಿದ್ದಾಗ ಪ್ರಭಾಕರ ಬಂದ. ವಂದನೆ ಪ್ರತಿವಂದನೆಗಳಾದ ಮೇಲೆ ಉಭಯ ಕುಶಲೋಪರಿ ಪ್ರಭಾಕರ ನಾಳೆ ಮುಂಜಾನೆ 'ಕೋಟಿಲಿಂಗ ದರ್ಶನ'ದ ಕಾರ್ಯಕ್ರಮದಲ್ಲಿ ಬದಲಾವಣೆಯಾಗಿರುವುದಾಗಿ ಹೇಳಿದಾಗಿ ಶ್ರೀಗಳ ಕೆಂಗಣ್ಣ ದೃಷ್ಟಿ ನನ್ನತ್ತ. ಆಗ ಪ್ರಭಾಕರ ''ಕ್ಷಮಿಸಬೇಕು. ಸನ್ನಿಧಾನಕ್ಕೆ ಕೋಟಿಲಿಂಗ ದರ್ಶನವಾಗದಿದ್ದರೂ, ಇದ್ದಲ್ಲೇ ನೂರಾರು ಲಿಂಗಗಳ ದರ್ಶನದ ಏರ್ಪಾಡಾಗಿದೆ. ತಾವು ಇದುವರೆಗೂ ಸಂದರ್ಶಿಸಿದ ಲಿಂಗಗಳಿಗಿಂತಲೂ ಇದು ವಿಶೇಷ. ಆದರೆ ನೋಡುವ ಕಣ್ಣು ಇರಬೇಕು. ಅಣುರೇಣ ತೃಣಕಾಷ್ಟಗಳಲ್ಲಿಯೂ ಆ ಭಗವಂತನನ್ನು ಕಾಣಬಹುದೆಂದು ತಮ್ಮಂತಹ ಜ್ಞಾನಿಗಳು ಅಪ್ಪಣೆ ಕೊಡಿಸಿರುತ್ತೀರಿ. ಇಂತಹ ಅನುಭವ ನಾಳೆ ನಿಮಗಾಗಬಹುದು'' ಎಂದಾಗ ಶ್ರೀಗಳ ಹುಬ್ಬು ಮೇಲೇರಿದ್ದು ಆ ಕತ್ತಲಿನಲ್ಲಿಯೂ ನನಗೆ ಕಾಣಿಸಿತು.

ಇಂದು ಮಹಾ ಶಿವರಾತ್ರಿ! ಮುಂಜಾನೆ ಎದ್ದ ಶ್ರೀಗಳು ತಮ್ಮ ನಿತ್ಯ ಕೈಂಕರ್ಯಗಳನ್ನು ಪೂರೈಸಿದವರಾಗಿ ಶಿವ ದರುಶನಕ್ಕೆ ಸನ್ನದ್ಧರಾಗಿದ್ದಾರೆ. ನಾನು ಮತ್ತು ಪ್ರಭಾಕರನಲ್ಲದೇ ನಮ್ಮ ಕುಟುಂಬ ಸದಸ್ಯರೆಲ್ಲರೂ ಶ್ರೀಶ್ರೀಗಳನ್ನು ನಮ್ಮ ಮನೆಯ ಮೇಲೆ ಬಿಜಯಂಗೈಸಿದ್ದೇವೆ. ನಾನಿರುವ ಬಡಾವಣೆ ಏರು ತಗ್ಗಾದ ಪ್ರದೇಶ. ಗುಡ್ಡದ ಮೇಲೆಯೇ ನನ್ನ ಮನೆ ಎನ್ನಬಹುದು. ಇನ್ನೂ ನಾಗರಿಕ ಸೌಲಭ್ಯ ದೊರೆತಿಲ್ಲವಾದರೂ. ಬಡಾವಣೆಗಳ ನಿವಾಸಿಗಳ ಬದುಕಿಗೆ ತೊಂದರೆ ಇಲ್ಲ. ಹೇಗಾದರೂ ಬದುಕೋಣವೆಂಬ ದೃಢ ನಿಶ್ಚಯ! ನಮ್ಮ ಮನೆಯ ಮಹಡಿಯ ಮೇಲಿನಾದ ಮುಂಜಾನೆಯ ನಿಸರ್ಗದ ನೋಟ ನಾನೆಂದೂ ಈ ಮೊದಲು ನೋಡಿರಲಿಲ್ಲ. (ಬೆಂಗಳೂರಿನಂಥ ಜನಸಂದಣಿಯ ನಗರದಲ್ಲಿ ರಾತ್ರಿಯ ವೇಳೆ ಆಕಾಶವೆಂಬುದಿದೆ. ಅಲ್ಲಿ ಹುಣ್ಣಿಮೆಯ ಚಂದ್ರ, ತಾರೆಗಳಿದ್ದಾವೆಂಬ ಸಂಗತಿಯೇ (ತಿಳಿದಯವರು ಇದ್ದಾರೆಂದರೆ ಅಂಥವರಲ್ಲಿ ನಾನೂ ಸೇರುತ್ತೇನೆ!) ವಿವಿಧ ವಿನ್ಯಾಸಗಳ ಕಟ್ಟಡಗಳ ರಮಣೀಯ ನೋಟ. ಇನ್ನೇನು ಪೂರ್ವ ದಿಗಂತದಲ್ಲಿ ಸೂರ್ಯ ಮೂಡುವ ಸಮಯ. ಈ ಸಂದರ್ಭದಲ್ಲಿ ಜೈಮಿನಿ ಭಾರತದ ಲಕ್ಷ್ಮೀಶ ಕವಿಯ ಈ ವರ್ಣನೆ ನೆನಪಿಗೆ ಬರುತ್ತದೆ -

''ಪ್ರಸ್ತುತ ದೊಳೊಗೆದ ಮುಂಬೆಳಗಮಲದಂತದಗ ಭಸ್ತಿನವ ಪೂರ್ವ ಸಂಧ್ಯಾರುಣಂ ಭಾಳವಿ ವ್ಯಸ್ತ ಸಿಂಧೂರ ಮಂಕುರಿಪ ಪೊಂಬಿಸಿ ಮಾಡನೆ ಮೂಡು ವೇಳನೇಸರೆಸೆವ ಮಸ್ತಕದ ಮಣಿ ಮಕುಟ ಉದಯಾಚಲನ ವಿಸ್ತಾರದಂತೆ...'' ಮುಂದಿನ ಪಂಕ್ತಿ ಗುನುಗುವ ಮೊದಲೆ ಪ್ರಭಾಕರ ''ಕೃಷ್ಣಾಕೃತಿಯಾಳುಪ್ಪ'' ನೂರೊಂದು ಲಿಂಗಗಳನ್ನು ನೋಡಿರೆಂದು ಶ್ರೀ ಶ್ರೀಗಳನ್ನುದ್ದೇಶಿಸಿ ಹೇಳುತ್ತಿದ್ದಾನೆ! ನನ್ನ ಬಡಾವಣೆಯ ಕಟ್ಟಡಗಳ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವ ಕಪ್ಪನೆಯ ನೀರಿನ ಟ್ಯಾಂಕುಗಳು ಶಿವಲಿಂಗದೋಪಾದಿಯಲ್ಲಿ ಕಣ್ಮನಗಳಿಗೆ ಕಂಗೊಳಿಸುತ್ತಿವೆ! ಈ ಅಮೋಘ ಅದ್ಭುತ ಪವಾಡವನ್ನು ಕಂಡ ಶ್ರೀ ಶ್ರೀ ಸಂಪಾದನಾ ಶೂನ್ಯ ಸಿಂಹಾಸನಾಧೀಶ್ವರ ಬಾಗೂರು ಬುರುಡೆ ಬಾಜೀರಾಯರು ತಮ್ಮನ್ನು ತಾವೇ ಮರೆತು ''ಎಲ್ಲಾ ರೂಪವೂ ತಾನಂತೆ ಶಿವ ಕಳ್ಳರ ಕಣ್ಣಿಗೆ ಕಲ್ಲಂತೆ'' ಎಂಬ ಪದವನ್ನು ಹಾಡುತ್ತ ಪ್ರಭಾಕರನ ಕೈಹಿಡಿದು ನಮಿಸುತ್ತಿದ್ದಾರೆ.

''ಶಿವರಾತ್ರಿಯ ಶುಭದಿನ ನನ್ನ ಕಣ್ಣಿಗೆ ನೀರು ತುಂಬಿದ ಕಪ್ಪು ಟ್ಯಾಂಕುಗಳೇ ಶಿವಲಿಂಗವಾಗಿ ದರ್ಶನ ನೀಡುತ್ತಿವೆ! ನೋಡುವ ಕಣ್ಣಿರಲು ಅರಿಯುವ ಮನವಿರಲು ಇದ್ದಲ್ಲೇ ಶಿವದರ್ಶನ ಮಾಡಬಹುದು'' ಎನ್ನುತ್ತ ಶ್ರೀಗಳು ಬಡಾವಣೆಯ ನೂರಾರು ನೀರಿನ ಕಪ್ಪು ಟ್ಯಾಂಕುಗಳಲ್ಲೇ ಶಿವನನ್ನು ಕಂಡವರಾಗಿ

ಶಿವನು ಟ್ಯಾಂಕಾಗಿಹನೋ
ಟ್ಯಾಂಕು ಶಿವನಾಗಿಹುದೋ
ತಿಳಿಯ ಬಯಸುವುಡೆ
ನೀ ಶಿವನಾಗಬೇಕು

ಎನ್ನುತ್ತಾ ದೀರ್ಘದಂಡ ನಮಸ್ಕಾರ ಮಾಡುತ್ತ ತಮ್ಮನ್ನು ತಾವೇ ಮರೆತರೆಂಬಲ್ಲಿಗೆ ಮುಕ್ತಾಯವಾಯ್ತು!

❖❖❖

ಪುಸ್ತಕ ಪರಿಚಯ

ನಕ್ಕು ಪ್ರಸನ್ನರಾಗಿ

ಲೇಖಕ: ಕಾರ್ಟೂನ್ ಪ್ರಸನ್ನ

ಪ್ರಕಾಶಕರು: ಪೂರ್ಣಿಮಾ ಸಾಹಿತ್ಯ ಮಂದಿರ

28ನೇ ಕ್ರಾಸ್, ಎಸ್.ಐ.ಟಿ. ಬಡಾವಣೆ, ತುಮಕೂರು - 572 103




ವ್ಯಂಗ್ಯ ಚಿತ್ರಗಳನ್ನು ಗಮನಿಸಿಕೊಂಡು ಬಂದ. ಓದುಗರಿಗೆ ಕಾರ್ಟೂನ್ ಪ್ರಸನ್ನರ ಹೆಸರು ಚಿರಪರಿಚಿತ. 1970 ರಿಂದಲೇ ನಾಡಿನ ಎಲ್ಲಾ ಪತ್ರಿಕೆಗಳೂ ಹಾಗೂ ನಿಯತಕಾಲಿಕೆಗಳಿಗೆ ವ್ಯಂಗ್ಯಚಿತ್ರ ರಚಿಸಿಕೊಂಡು ಬಂದ ಪ್ರಸನ್ನ ಆ ರಂಗದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ.

ಇದೇ ಅವರ ವ್ಯಂಗ್ಯ ಚಿತ್ರಗಳ ಸಂಕಲನವೊಂದು ಪೂರ್ಣಿಮಾ ಸಾಹಿತ್ಯ ಮಂದಿರದಿಂದ ಹೊರಬಂದಿದೆ. ಹೆಸರೇ ಸೂಚಿಸುವಂತೆ ಈ ಪುಸ್ತಕವನ್ನು ನೋಡಿ ನಕ್ಕು ಪ್ರಸನ್ನರಾಗಬಹುದು.

ಅದ್ಭುತ ಕಲೆಗಾರಿಕೆ, ಹಾಸ್ಯಪ್ರಜ್ಞೆ, ರಾಜಕೀಯದರಿವು, ಸಾಂಸಾರಿಕ ಚಿಂತನೆ ಇವುಗಳೆಲ್ಲದರ ಸಂಗಮವಾಗಿರುವ ಪ್ರಸನ್ನರಿಂದ ಇನ್ನು ಅತ್ಯದ್ಭುತ ವ್ಯಂಗ್ಯ ಚಿತ್ರಗಳು ಹೊರಬಂದು ಅವರ ಕೀರ್ತಿ ಅಜರಾಮರವಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಅವರ ವ್ಯಂಗ್ಯಚಿತ್ರಗಳ ಒಂದೆರಡು ಸ್ಯಾಂಪಲ್ ಅಪರಂಜಿ ಓದುಗರಿಗಾಗಿ.



ಉಕ್ತಿ-ಚಟೋಕ್ತಿ

- ಎನ್. ರಾಮನಾಥ್

ಕಳ್ಳತನದ ಆರೋಪದ ಮೇಲೆ ವಕೀಲನ ಬಂಧನ - ಸುದ್ದಿ

ಸರಿಯಲ್ಲವು ಅವ ಹಿಡಿದಾ ಮಾರ್ಗವು ನ್ಯಾಯದ ಮಾರ್ಗವೆ ಇತ್ತಲ್ಲ
ಕಾನೂನಿನ ಒಳ ದಾರಿಯ ಸುಳಿಗಳು ಬಹುಶ: ಅವನಿಗೆ ಗೊತ್ತಿಲ್ಲ

★★★

ಪತ್ನಿಯನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ - ಸುದ್ದಿ

ಪಾಣಿಗ್ರಹಣಕು ನ್ಯಾಯದ ಬೇಡಿಗು ವ್ಯತ್ಯಯವಿಲ್ಲವು ಎಂದನವ
ಜೀವಾವಧಿಯೇ ಎರಡೂ ಆದರೂ ಸತಿಗುಂ ಪೋಲೀಸ್ ಒಳ್ಳೆಯವ

★★★

ಸೊನ್ನೆ ಸಂಪಾದನೆ ವಿದ್ಯಾರ್ಥಿ ಪ್ರತಿಭಟನೆ - ಸುದ್ದಿ

ನಮಗೂ ಸೊನ್ನೆಯ ನೀಡಲು ಮನಸೇ ಬಾರದು ಎಂದಿತು ಗುರುವರ್ಗ
ಸೊನ್ನೆಗು ಕಡಿಮೆಯ ಅಂಕವ ನೀಡಲು ಹುಡುಕಾಡುತಲಿದೆ ಹೊಸಮಾರ್ಗ

★★★

ಬರಲಿದೆ ಸಾರಾಯಿಯ ಬದಲು ಅಗ್ಗದ ದರದ ಮಧ್ಯ - ಸುದ್ದಿ

ಎಲ್ಲಾದರು ಎಂತಾದರು ಇದು ಎಂದೆಂದಿಗು ನೀ ಕುಡುಕನೆ ಆಗಿರು
ಸರಕಾರದ ಮಧ್ಯವ ನೀ ಹೀರುತ ಎಂದೆಂದಿಗು ನೀ ಸಂತಸದಿಂದಿರು

★★★

ಯುಗಾದಿಯಂದೇ ಸೂರ್ಯಗ್ರಹಣ - ಸುದ್ದಿ

ಸರ್ವಜಿತುವಿನೊಳು ಉದಿಸಲು ಸೂರ್ಯಗು ಆಯಿತು ಸಿಜೇರ್‍ಯನಾಪ್ರೇಷನ್
ಮುಂದಿನ ದಿನಗಳು ಹೇಗೋ ಎಂತೋ ಜನತೆಯ ಮನದೊಳು ಬಲು ಟೆನ್ಷನ್

★★★

ವಿಧಾನಸೌಧದಲ್ಲಿ ಅಧಿಕಾರಿಯ ಮೇಲೆರೇ ಎರಗಿದ ನೌಕರರು - ಸುದ್ದಿ

ಮನುಜನ ಉತ್ತಮ ಮಿತ್ರ ಶುನಕವೂ ಹಲವರು ಮನುಜನ ಕೊಂದಿಹುದು
ಶುನಕದ ಮಿತ್ರರೆ ಈ ನೌಕರರು ? ಅಧಿಕಾರಿಯ ಮೇಲೆರಗಿಹರು

★★★

ಹೊರ ರಾಜ್ಯಗಳಿಗೆ ಆನೆಗಳ ರಫ್ತು - ಸುದ್ದಿ

ಕಾಡಾನೆಗಳನು ನಾಡಿನ ಆಚೆಗೆ ಅಟ್ಟುವ ರೀತಿಯು ತರವಲ್ಲ
ಬಿಳಿಯಾನೆಗಳೇ ತುಂಬಿಹ ನಾಡಲಿ ಕಾಡಾನೆಗೆ ಸ್ಥಳ ಏಕಿಲ್ಲ

★★★

ಬರಿದಾಗುತಿದೆ ತಿಪ್ಪಗೊಂಡನಹಳ್ಳಿ ಜಲಾಶಯ - ಸುದ್ದಿ

ನಗರ ಬೆಳೆಯಿತು ಹಸಿರು ಅಳಿಯಿತು ಜನ ಜಲಬರದಿ ತತ್ತರ
ಕಾಡು ಬೆಳೆಯಿಸು ಕಣ ಕಣ ಉಳಿಸು ಆಗು ಮನುಜನೆ ಎಚ್ಚರ

★★★

ಹೆಂಡ್ತಿಗೆ ಹುಷಾರಿಲ್ದಿದ್ರೆ!

– ಬೇಲೂರು ರಾಮಮೂರ್ತಿ

ಮೂರು ದಿವಸದಿಂದ ಕಪಿನೀಪತಿ ಅಡ್ಡೆಗೆ ಬರದೇ ಇರೋದಿಕ್ಕೆ ಅವನನ್ನು ಅಡ್ಡಡ್ಡ ಸಿಗಿದು ಹಾಕಿಬಿಡಬೇಕು ಅಂತ ಎಲ್ರಿಗೂ ಕೋಪ ಬಂತು. ಅಲ್ಲ ನನ್ಮಗ ನಮ್ಮನ್ನು ಏನಂದ್ಕೊಂಡಿದಾನೆ. ಅವನಿಗೆ ಬರೋಕಾಗ್ದಿದ್ರೆ ಯಾರ ಕೈಲಾದ್ರೂ ಹೇಳಿ ಕಳಿಸೋದಲ್ವ ಸ್ವಲ್ಪಾನೂ ಜವಾಬ್ದಾರಿ ಬೇಡ್ವಾ ಅಂತ ಜೋಯಿಸ ಕೂಗಾಡೋ ದಿನವೇ ಕಪಿನೀಪತಿ ಸವಾರಿ ದಯಮಾಡಿಸಿತು. ಜೋಯಿಸ, ಅಯ್ಯಂಗಾರಿ, ಶೀನ ಎಲ್ಲ ಮುಗುಮ್ಮಾಗಿದ್ದರು ಕಪಿನೀಪತಿ ಎಲ್ಲರ ಮುಂದೆಯೂ ನಶ್ಯದ ಡಬ್ಬಿ ಹಿಡಿದ. ಯಾರೂ ತಗೊಳ್ಳಿಲ್ಲ. ಅವನೇ ಒಂದು ಚಿಟಿಕೆ ಮೂಗಿಗೇರಿಸಿದ. ಏನ್ರಯ್ಯ ಸಮಾಚಾರ ಯಾಕೆ ಎಲ್ರೂ ಕರೆಂಟು ಹೊಡೆಸಿಕೊಂಡ ಕಾಗೆಗಳ ಹಾಗಾಗಿದೀರ. ಏನು ಎಲ್ರಿಗೂ ಮನೇಲಿ ಉಗಿತವ್ರೋ ನಿಮ್ಮ ಯೋಗ್ಯತೆಗೆ ಇನ್ನೇನು ಸಿಕ್ಕೀತು ಅಂತ ಕಪನೀಪತಿ ಅನ್ನುತ್ತಿದ್ದ ಹಾಗೆ ಜೋಯಿಸ ಅವನನ್ನು ಬಗ್ಗಿಸಿ ಬೆನ್ನಮೇಲೆ ನಾಲ್ಕು ಗುದ್ದಿದ ಕಪಿನೀಪತಿ ಅಮ್ಮಮ್ಮೋ ಅಂತ ಕಿರುಚಿದ. ಶೀನ ''ಏನಂದ್ಕೊಂಡಿದೀಯ... ನೀನು ಮನಸ್ಸಿಗೆ ಬಂದಾಗ ಬರಬಹುದು ಇಲ್ದೆ ಇದ್ದಾಗ ಕೇರ್ ಮಾಡದೇ ಇರಬಹುದು ಅಂತಾನಾ ಅಡ್ಡೆ ಅನ್ನೋದೊಂದಿದೆ ಇಲ್ಲಿ ನಾವುಗಳು ನಿನಗೋಸ್ಕರ ಕಾಯ್ತಿರ್ತೀವಿ ಅನ್ನೋ ಜ್ಞಾನ ಬೇಡ ನಿನಗೆ'' ಅಂದ.

''ಅದೇನಾಯ್ತೂಂದ್ರೆ, ನನ್ನ ಹೆಂಡ್ತಿಗೆ ಒಂದು ವಾರದಿಂದ ಹುಷಾರಿಲ್ಲ ಹಾಸಿಗೆ ಹಿಡಿದಿದ್ಲು... ಅದಿಕ್ಕೆ...'' ಅಂದ ಕಪಿನೀಪತಿ.

''ಅದಿಕ್ಕೆ ನೀನು ಅವರನ್ನ ಹಿಡ್ಕೊಂಡು ಕೂತ್ಕೊಂಬಿಟ್ಯಾ... ಅಡ್ಡೆಗೆ ಚಕ್ಕರ್ ಹಾಕಿದ್ದಕ್ಕೆ ಹೆಂಡ್ತಿಗೆ ಕಾಹಿಲೆ ಅಂತ ಸುಳ್ ಹೇಳ್ತೀಯಾ'' ಅಂದ ಅಯ್ಯಂಗಾರಿ.

''ಬೇಕಾದ್ರೆ ಡಾಕ್ಟರು ಶ್ಯಾಮಲ ಅವರನ್ನ ಹೋಗಿ ಕೇಳ್ರೋ'' ಅಂದ ಕಪಿನೀಪತಿ.

''ಸರಿ ನಿನ್ನ ಹೆಂಡ್ತಿಗೆ ಕಾಹಿಲೆ ಅಂತಾನೆ ಇಟ್ಕೊ. ನಮಗೊಂದು ಮಾತು ತಿಳಿಸೋಕೆ ಏನು ಬಂತು ರೋಗ.''

''ನಾನು ತಿಳಿಸೋಣ ಅಂತಿದ್ದೆ ಆದರೆ ಮನೆ ಬಿಟ್ಟು ಬರೋಕೇ ಆಗ್ಲಿಲ್ಲ''

''ಕತ್ತೆಬಾಲ, ಒಂದು ಫೋನ್ ಮಾಡಕ್ಕೆ ಆಗ್ತಿರ್ಲಿಲ್ವ.''

''ನಿನಗೆ ನಮ್ಮನ್ನೆಲ್ಲ ಕಂಡ್ರೆ ಅಸಡ್ಡೆ ಕಣೋ''

ಕಪಿನೀಪತಿ ಮತ್ತೆ ನಶ್ಯದ ಡಬ್ಬಿ ಎಲ್ಲರ ಮುಂದೆ ಹಿಡಿದಾಗ ಈಗ ಎಲ್ಲರೂ ಒಂದೊಂದು ಚಿಟಿಕೆ ನಶ್ಯ ತಗೊಂಡು ಮೂಗಿಗೇರಿಸಿಕೊಂಡರು.

''ನಾನು ಹೇಳೋದು ಸ್ವಲ್ಪ ಕೇಳ್ರೋ'' ಅಂದ ಕಪಿನೀಪತಿ.

''ಏನೋ ಕೇಳೋದು... ಮನೇಲಿ ಫೋನ್ ಇಲ್ವ. ಔಷಧಿ ತರಕ್ಕೆ ನೀನು ಹೊರಕ್ಕೆ ಬರ್ತಿರ್ಲಿಲ್ವ'' ಅಂದ ಶೀನ.

ಜೋಯಿಸ ಅವನ ತಲೆಮೇಲೆ ಹೊಡೆದು ''ಅವನೇನೋ ಹೇಳ್ತಿದಾನೆ ಇರೋ'' ಅಂದ.

''ನನ್ನ ಹೆಂಡ್ತಿಗೆ ಕಾಹಿಲೆ ಅಲ್ವ ನನಗೆ ಕಷ್ಟ ಆಗುತ್ತೆ ಅಂತ ನನ್ನ ಹೆಂಡ್ತಿ ಅವರಮ್ಮನಿಗೆ

ಫೋನ್ ಮಾಡಿ ಒಂದೆರಡು ದಿನ ಬಂದುಹೋಗು ಅಂದಳು. ಆದ್ರೆ ನಮ್ಮತ್ತೆಗೇ ಹುಷಾರಿರಲಿಲ್ಲ ಅವರು ನಾದಿನೀನ ಕಳಿಸಿದರು.''

''ನಾದಿನಿ ಅಂದ್ರೆ ಯಾರು''

''ನನ್ನ ಹೆಂಡ್ತಿ ತಾಯಿಗೆ ಏನೋ ದೂರದ ಸಂಬಂಧ''

'ಅದ್ಸರಿಯೋ ಈ ಪುರಾಣ ನಮಗೇಕೆ ಹೇಳ್ತಿದೀಯ' ಅಂತ ಕೇಳಿದ ಶೀನ.

''ಸ್ವಲ್ಪ ತಡ್ಕೊಳೋ... ನಂದಿನಿ ನಮ್ಮನೆಗೆ ಬಂದ್ಲು ನೋಡು ನಮ್ಮನೆ ಕಲರೇ ಬದಲಾಗಿಹೋಯ್ತು ಅವಳಿಗೂ ಸಲವತ್ತಾಗಿದೆ ಇಬ್ಬರು ಮಕ್ಕಳಿದಾರೆ ಆದರೆ ಅವಳಿಗೆ ಬರೇ ಇಪ್ಪತ್ತು ಅಂತ ಹೇಳಬಹುದು. ಅದೇನು ಮಾತು ಅದೇನು ಕಿಲಕಿಲ. ಅದೇನು ಕೈ ರುಚಿ ಅದೇನು ವಿಶ್ವಾಸ ಅಬ್ಬಬ್ಬ ನಾನಂತೂ ಕ್ಲೀನ್ ಬೋಲ್ಡ್ ಆಗಿಹೋದೆ. ಅವಳು ಮನೇಲಿ ಓಡಾಡ್ತಾ ಇದ್ರೆ ಒಂಥರಾ ಕರಂಟ್ ಪಾಸ್ ಆಗ್ತಾ ಇತ್ತು ಅಂತೀನಿ''

ಜೋಯಿಸನಿಗೆ ತಾಳ್ಮೆ ಕೆಟ್ಟಿತು.

'ಯಾವ್ದೋಳ ಪುರಾಣ ಕಟ್ಕೊಂಡು ನನಗೇನೋ' ಅಂದ.

''ಅಯ್ಯೋ ಬೇಕೂಫ ಅಡ್ಡೆಗೆ ಯಾಕೆ ಬರಲಿಲ್ಲ ಅಂತ ಕೇಳಿದ್ಯಲ್ಲ ಅದಿಕ್ಕೆ ಹೇಳ್ತಿದೀನಿ ಅವಳನ್ನ ಬಿಟ್ಟು ಹ್ಯಾಗೋ ಬರಲಿ. ಮನೆಗೆ ಬಂದ ದಿನಾನೇ ನನ್ನ ಕಣ್ ತುಂಬ್ಕೊಂಬಿಟ್ಳು ಅಂತೀನಿ''

'ನಾಚಿಕೆಯಾಗಲ್ವ ನಿನಗೆ ಈ ವಯಸ್ನಲ್ಲಿ'

''ಅಯ್ಯೋರಾಮ ನಾಚಿಕೆ ಯಾಕೋ... ಅವಳು ನಮ್ಮನೆಗೆ ಬಂದು ಹೋದಮೇಲೆ ನನಗೆ ಎಷ್ಟೊಂದು ಜೀವನೋತ್ಸಾಹ ಬಂದಿದೆ ಅಂತೀಯ. ಅವಳನ್ನ ಹೊಗಳಿದೆ ಅಂದಾಕ್ಷಣ ಇನ್ನೇನೂ ಅರ್ಥವಲ್ಲ.... ಅದೊಂದು ರೀತಿ ಜೀವನ ಚಿಲುಮೆಕಣೋ ನಾನೂ ಅವಳ ಜೊತೆ ಅಡಿಗೆ ಮನೇಲಿ ಇದ್‌ಬಿಡ್ತಿದ್ದೆ ತರಕಾರಿ ಹೆಚ್ಚಿ ಕೊಡ್ತಿದ್ದೆ ಕಾಯಿ ತುರ್ಕೊಡ್ತಿದ್ದೆ. ಹುಳಿಗೆ ರುಬ್ಬಿ ಕೊಡ್ತಿದ್ದೆ''

'ಅಂತೂ ನಿನ್ನ ಕೈಲಿ ಚೆನ್ನಾಗಿ ಕೆಲಸ ಮಾಡಿಸಿದಳು ಅನ್ನು'

'ಅದೇನೋ ಗೊತ್ತಿಲ್ಲ ಅವಳು ನಮ್ಮ ಮನೆಗೆ ಬಂದು ಹೋದ ಮೇಲೆ ನಮ್ಮ ಮನೆ ವಾತಾವರಣವೇ ಬದಲಾಯ್ತು ಒಂಥರಾ ಆನಂದ ಒಂಥರಾ ಥ್ರಿಲ್ಲು... ಹೀಗೆ ಏನೇನೋ.

'ಈಗ ಅವಳೆಲ್ಲಿ'

''ನನ್ನ ಹೆಂಡ್ತಿ ಹುಷಾರಾದ್ಲಲ್ಲ ಅದಿಕ್ಕೆ ಅವಳು ಊರಿಗೆ ಹೊರಟುಹೋದ್ಲು''

'ಅಂದ್ರೆ ನಾಳೆಯಿಂದ ಅಡ್ಡೆಗೆ ಬರ್ತೀಯ'

''ಬರದೇ ಇನ್ನೆಲ್ಲೋ ಹೋಗ್ಲಿ... ಲೋ.. ನಿಮಗೆಲ್ಲ ಜೀವನೋತ್ಸಾಹ ಏನೂಂತ ಗೊತ್ತಾಗಬೇಕಾದರೆ ಒಂದ್ಸಾರಿ ನಿಮ್ ನಿಮ್ ಹೆಂಡ್ರು ಸಖತ್ ಕಾಹಿಲೆ ಬೀಳಬೇಕು ನಾದಿನಿಯಂಥ ಹುಡುಗಿ ನಿಮ್ಮ ಮನೆಗೆ ಬರಬೇಕು''

ಇವರೆಲ್ಲ ಮನೆ ಕಡೆ ಹೊರಟಾಗ ಪಿಳ್ಳೆಯೊಂದು ಬಂದು ಅಯ್ಯಂಗಾರಿಗೆ ''ಮಾಮ ಮಾಮಿಗೆ ಹುಷಾರಿಲ್ಲ ತಲೆ ತಿರುಗಿ ಬಿದ್ದಿದ್ದಾರೆ ಶೀಘ್ರವಾಂಗೋ'' ಅಂದಿತು.

ಅಯ್ಯಂಗಾರಿ ಕಚ್ಚೆ ಸರಿ ಮಾಡಿಕೊಂಡು ಮನೆ ಕಡೆ ದಾಪುಗಾಲು ಹಾಕಿದ.

ಇವನು ಇನ್ನೊಂದ್ ವಾರ ಅಡ್ಡೆಗೆ ಬರಲ್ಲ. ಬಂದಮೇಲೆ ಇವನಿನ್ನೇನು ಪುರಾಣ ಷುರುಮಾಡ್ತಾನೋ ಅಂತ ಎಲ್ಲರೂ ಗೊಣಗಿಕೊಂಡರು.

ತುಂತುರು

- ಭಾರತೀಯರು ಜಿಪ್ಪುಣರು. ಆದುದರಿಂದಲೇ ಅವರು ಸೊನ್ನೆಯನ್ನು ಕಂಡು ಹಿಡಿದರು.
- ನಾವು ಯಾರನ್ನೇ ಭೇಟಿ ಮಾಡಿದರೂ ನಮಗೆ ಗೊತ್ತಿಲ್ಲದ ಒಂದು ಸಂಗತಿ ಅವರಿಗೆ ಗೊತ್ತಿರುತ್ತದೆ.
- It is the survival of the fittest, not the triumph
- ಮೊಬೈಲ್ ಗಾದೆ: ಪಾಪಿ ಮರ ಏರಿದರೂ ಸಿಗ್ನಲ್ ವೀಕ್.
- ಎಲ್ಲರೂ ಸ್ವರ್ಗಕ್ಕೆ ಹೋಗಲು ಬಯಸುತ್ತಾರೆ, ಆದರೆ ಯಾರೂ ಸಾಯಲು ತಯಾರಿಲ್ಲ.
- I went to an Oslo book shop where I was sold a book worth Rs. 60 for Rs. 100, when I asked for change he said the change must come from within.
- ಗಂಧದ ಮಾಲೆಯನ್ನು ಪರಿಮಳದಲ್ಲಿ ಮಾಡುತ್ತಾರೆ.
- ನಮ್ಮನ್ನು ಪ್ರೀತಿಸುವಂತೆ ಯಾರಿಗೂ ಬಲವಂತ ಮಾಡಲು ಸಾಧ್ಯವಿಲ್ಲ.
- ಗಂಡಸರ ಕರವಸ್ತ್ರಕ್ಕೆ ಹೋಲಿಸಿದರೆ ಮಹಿಳೆಯರ ಕರವಸ್ತ್ರವೇಕೆ ಅಷ್ಟು ಚಿಕ್ಕದಿದೆ? ಭಾರಿ ನೆಗಡಿಯಾದಾಗ ಒಮ್ಮೆ ಸೀನಿದರೆ ಅಥವಾ ಸಿನಿಮಾ ಹಾಲಿನ ಕತ್ತಲಿನಲ್ಲಿ ಒಮ್ಮೆ ಕಣ್ಣು ಒರೆಸಿಕೊಳ್ಳುವುದಕ್ಕೆ ಅದು ಸಾಕಾಗುತ್ತದೆ ಅಷ್ಟೆ.
- A mother understands what the child does not say
- ದಿನಪತ್ರಿಕೆಯಲ್ಲಿ ತಪ್ಪೇ ಇರಲಿಲ್ಲ ಅಂದರೆ ಅಂದು ಪತ್ರಿಕೆಯೇ ಪ್ರಕಟವಾಗಿಲ್ಲ ಎಂದರ್ಥ.
- ಕೌನ್ ಬನೇಗ ರಾಷ್ಟ್ರಪತಿ? ಒಬ್ಬ ಅಸಲಿ ಕ್ರೋರ್‌ಪತಿಯನ್ನೇ ಆರಿಸಿದರೆ ಹೇಗೆ? ಅದೇ ನಾರಾಯಣ ಮೂರ್ತಿ...
- Vajpayee was so often down on knees that both his knees had to be replaced.
- Log puchenge aap kasie hai jab tak ki aap ke jeb me in paise hain.

– ದಿಂನಾಆ

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ
ತೀರ್ಪುಗಾರರ ಮೆಚ್ಚುಗೆ ಪಡೆದ ಲೇಖನ

ತ್ಯಾಂಪಣ್ಣ ಪುರಾಣದಲ್ಲೊಂದು ಯಾತ್ರಾಪರ್ವ

– ಡಾ|| ಬಿ. ಪ್ರಭಾಕರ ಶಿಶಿಲ

ನಮ್ಮ ಊರು ಪಶ್ಚಿಮ ಘಟ್ಟದ ಸೆರಗಲ್ಲಿ ಪುಟ್ಟ ನದಿಯ ಎರಡು ದಂಡೆಗಳಲ್ಲಿ ಸದ್ದಿಲ್ಲದೆ ಪವಡಿಸಿಕೊಂಡಿರುವ ಚೆಲುವಿನ ತಾಣ. ಜನ ತುಂಬಾ ಸರಳ ಸ್ವಭಾವದವರು. ಹೆಸರಲ್ಲೂ ಉಳಿತಾಯ ಮಾಡುವವರು. ಅಜ್ಜನ ಹೆಸರು ಮೊಮ್ಮಗನಿಗೆ, ಅಜ್ಜಿಯ ಹೆಸರು ಮೊಮ್ಮಗಳಿಗೆ ಇಟ್ಟುಬಿಟ್ಟರಾಯಿತು. ನಾಲ್ಕೇ ಹೆಸರು ಯುಗ ಯುಗಗಳಿಗೂ ಸಾಲುತ್ತವೆ.

ಹಾಗಾಗಿ ತ್ಯಾಂಪಣ್ಣ, ಸೋಂಪಣ್ಣ, ದೂಮಣ್ಣ, ರಾಮಣ್ಣ, ಸುಂದರಿ, ಗುಲಾಬಿ, ದೇವಕಿ, ಚೋಮು - ಹೆಸರಿನವರು ಊರಿಡೀ ತುಂಬಿಕೊಂಡಿದ್ದಾರೆ. ಒಂದೇ ಹೆಸರಿನವರು ಹೀಗೆ ತುಂಬಿಕೊಂಡಿದ್ದರೆ ಕನ್‌ಫ್ಯೂಸನ್ನು ಆಗೋದಿಲ್ವೇ ಅಂತ ನಿಮಗೆ ಆಶ್ಚರ್ಯವಾಗಬಹುದು. ಅದಕ್ಕಾಗಿ ಪ್ರತಿ ಹೆಸರಿನ ಮುಂದುಗಡೆ ಊರಜನ ಧಾರಾಳವಾಗಿ ವಿಶೇಷಣಗಳನ್ನು ಸೇರಿಸಿ ಬಿಟ್ಟಿದ್ದಾರೆ. ಅದು ತಲೆ ತಲಾಂತರಗಳವರೆಗೂ ಮುಂದುವರಿಯುತ್ತಲೇ ಇರುತ್ತದೆ.

ಹಾಗೆ ಹೆಸರು ಗಳಿಸಿದ ದೋಂಟಿ ತ್ಯಾಂಪಣ್ಣ ಸರಿ ಸುಮಾರು ಏಳು ಅಡಿ ಉದ್ದವಿದ್ದಾನೆ. ದೋಂಟಿ ಎಂದರೆ ಉದ್ದನೆಯ ಗಳ. ಅವನ ಅಪ್ಪ ದೋಂಟಿ ಸೋಂಪಣ್ಣನೂ ಅಷ್ಟೇ ಉದ್ದವಿದ್ದನಂತೆ. ತನ್ನ ಮಗನಿಗೂ ಸೋಂಪಣ್ಣನೆಂದೇ ಹೆಸರಿರಿಸಿದ್ದಾನೆ. ಮಗ ಬೆಳೆಯುವ ಲಕ್ಷಣ ನೋಡಿದರೆ ಕೆಲವೇ ವರ್ಷಗಳಲ್ಲಿ ಅವನೂ ದೋಂಟಿ ಸೋಂಪಣ್ಣನೆಂದು ಖ್ಯಾತನಾಗಲಿದ್ದಾನೆಂದು ದೋಂಟಿ ತ್ಯಾಂಪಣ್ಣ ಹೇಳುತ್ತಿರುತ್ತಾನೆ.

ದೋಂಟಿ ತ್ಯಾಂಪಣ್ಣ ನಮ್ಮಲ್ಲಿ ಅಡಿಕೆ ಮತ್ತು ತೆಂಗಿನಕಾಯಿ ಕೊಯ್ಯಲು ಬರುವವ. ಅವನ ಹೈಟಿಗೆ ಅದು ತಕ್ಕ ಕೆಲಸವೆ. ಉದ್ದದ ಮರಗಳನ್ನು ಅವನು ದಾಪುಗಾಲಿನಲ್ಲಿ ಹತ್ತುವುದನ್ನು ನೋಡುವುದೇ ಚೆಂದ. ಅವನು ಆಹಾರದ ವಿಷಯದಲ್ಲೂ ಧಾರಾಳಿಯೆ. ಒಂದು ಕೇಜಿಗಿಂತ ಒಂದೆರಡು ಗುಲಗಂಜಿ ಹೆಚ್ಚು ತೂಕದ ಅಕ್ಕಿ ಅವನಿಗೆ ಒಂದು ಹೊತ್ತಿಗೆ ಬೇಕು. ಇಡ್ಲಿ, ದೋಸೆ, ಕಡುಬು ಎಂದಾದರೆ ಹತ್ತಿರತ್ತಿರ ಅರ್ಧ ಸೆಂಚುರಿ ಬಾರಿಸಿಯೇ ಎದ್ದು ಬಿಡುವ ಸಾಧನೆ ಅವನದ್ದು.

ನನಗೆ ಅವನೆಂದರೆ ತುಂಬಾ ಇಷ್ಟ. ನಮ್ಮ ಕೂಡು ಕುಟುಂಬ ಯಜಮಾನ ದೊಡ್ಡ ಮಾವನಿಗೂ ದೋಂಟಿ ತ್ಯಾಂಪಣ್ಣನೆಂದರೆ ಅಕ್ಕರೆ. ಊರ ರಹಸ್ಯಗಳನ್ನು ಅವರಿಬ್ಬರು ಹಂಚಿಕೊಳ್ಳುವಾಗ ನನ್ನನ್ನು ದೂರ ಅಟ್ಟಿಬಿಡುತ್ತಿದ್ದುದರಿಂದ ನಮ್ಮೂರ ಭವ್ಯ ಇತಿಹಾಸವನ್ನು ವಸ್ತುನಿಷ್ಠವಾಗಿ ದಾಖಲಿಸಲು ನನ್ನಿಂದ ಸಾಧ್ಯವಾಗಿಲ್ಲ. ಆದರೆ

ಲೋಕಾಭಿರಾಮದ ಮಾತುಕತೆಯಲ್ಲಿ ನನ್ನನ್ನು ಇಬ್ಬರೂ ಸಹಿಸಿಕೊಳ್ಳುತ್ತಿದ್ದರು. ನಮ್ಮೂರ ಬಗೆಗಿನ ಸಾಮಾನ್ಯ ಜ್ಞಾನ ತನ್ನ ತಲೆಯಲ್ಲಿ ದಾಖಲಾಗುತ್ತಿದ್ದುದೇ ಅಂತಹ ಮಾತುಕತೆಗಳಿಂದ.

ನಮ್ಮೂರ ತ್ಯಾಂಪಣ್ಣಗಳದ್ದೇ ಒಂದು ಚರಿತ್ರೆ. ಅವು ದಾಖಲಾಗದ ಕಾರಣ ಐತಿಹ್ಯಗಳಾಗಿ ಮೌಖಿಕ ಪರಂಪರೆಯಾಗಿ ಮುಂದುವರಿಯಲಿವೆ. ಅಡಿಕೆ ತೆಂಗು ಕೊಯ್ಯುವ ದೋಂಟಿ ತ್ಯಾಂಪಣ್ಣನ ಬಗ್ಗೆ ಹೇಳಿದೆನಲ್ಲಾ? ಇನ್ನುಳಿದ ತ್ಯಾಂಪಣ್ಣರಲ್ಲಿ ಗರ್ನಾಲು ತ್ಯಾಂಪಣ್ಣ ಊರಜಾತ್ರೆ, ಕಂಬುಲ, ಬಯಲಾಟ, ಭೂತದ ಕೋಲಗಳಲ್ಲಿ ಗರ್ನಾಲು ಮತ್ತಿತರ ಸಿಡಿಮದ್ದು ಸಿಡಿಸುವ. ಅವ ದಿಲ್ ಪುಕಾರ್ ಬೀಡಿ ಸೇದುತ್ತಾ ಅದರ ಮೂತಿಗೆ ಗರ್ನಾಲಿನ ಬತ್ತಿ ಇಟ್ಟು, ಅದು ಸುರ್ ಸುರ್ ಅನ್ನುವಾಗ ಆಕಾಶದೆತ್ತರಕ್ಕೆ ಬಿಸುಟು, ಢಾಂ ಸದ್ದಿನಿಂದ ಎಲ್ಲರನ್ನೂ ಬೆಚ್ಚಿ ಬೀಳಿಸುವವ. ಜಾತ್ರೆಯಲ್ಲಿ ದೇವರ, ಕೋಲಗಳಲ್ಲಿ ಭೂತಗಳ ಕೃಪೆಗೆ ಪಾತ್ರನಾಗುವ ಅವನ ಅಕವುಂಟಿನಲ್ಲಿ ತುಂಬಾ ಪುಣ್ಯ ಜಮೆಯಾಗಿದೆಯಂತೆ.

ಇನ್ನೊಬ್ಬ ಪೀಂಟೆಲು ಯಾನೆ ಸೊಟ್ಟ ಮೂತಿ ತ್ಯಾಂಪಣ್ಣ, ಅವನ ಬಾಯಿ ಸ್ವಲ್ಪ ಎಡಭಾಗಕ್ಕೆ ತಿರುಗಿದಂತಿರುವುದರಿಂದ ಈ ಹೆಸರು. ಮೂತಿ ಹೇಗೂ ಇರಲಿ, ಅವನ ಕೈಗುಣ ದೊಡ್ಡಾಸ್ಪತ್ರೆಯ ಡಾಕ್ಟರರಿಗೂ ಇಲ್ಲ. ವಿಷ ಜಂತುಗಳ, ಹಾವುಗಳ ಮತ್ತು ಹುಚ್ಚು ನಾಯಿಗಳ ಕಡಿತಕ್ಕೆ ಅವನಲ್ಲಿ ಮದ್ದಿವೆ. ಅದನ್ನು ನೀಡಿ ಅವನು ನಮ್ಮೂರಿನ ಎಷ್ಟೋ ಅಮೂಲ್ಯ ಜೀವಗಳನ್ನು ಉಳಿಸಿ ಊರಿಗೆ ತುಂಬಲಾಗದ ನಷ್ಟ ಸಂಭವಿಸದಂತೆ ನೋಡಿಕೊಂಡಿದ್ದಾನೆ. ಅವನಷ್ಟು ಪುಣ್ಯವಂತರು ಬೇರೆ ಯಾರಿರಲು ಸಾಧ್ಯ?

ಸಿರಿಬಾಯಿ ತ್ಯಾಂಪಣ್ಣ ಮಂತ್ರವಾದಿಯಾಗಿ ಪ್ರಸಿದ್ಧಿ ಪಡೆದವ. ಅವನ ಸೀಳ್ದುಟಿಗಳಿಂದ ಮಂತ್ರದ ಶಬ್ದಗಳು ಹೊರಗೆ ಬರುವುದನ್ನು ನೋಡುವುದು ಕಣ್ಣಿಗೆ, ಕೇಳುವುದು ಕಿವಿಗೆ ಭಾಗ್ಯ. ನಮ್ಮೂರಲ್ಲಿ ಸತ್ತವರು ಊರು ಬಿಟ್ಟು ಹೋಗುವುದಿಲ್ಲ. ಪ್ರೇತವಾಗಿ ಮದುವೆ, ಜಾತ್ರೆ, ಭೂತಕೋಲ, ನಾಗತಂಬಿಲ, ಕಂಬಳ, ಕೋಳಿಕಟ್ಟ ಹೀಗೆ ಜನ ಸೇರುವಲ್ಲಿ ತಮಗಿಷ್ಟ ಬಂದ ಹೆಂಗಸರ ದೇಹಗಳನ್ನು ಹೊಕ್ಕು ಪರಾಕ್ರಮ ಪ್ರದರ್ಶಿಸುತ್ತಾರೆ. ಹಾಗೆ ಪ್ರೇತಭಾಧೆಗೆ ಒಳಗಾದ ಹೆಂಗಸರ ದೇಹಗಳಿಂದ ಪ್ರೇತೋಚ್ಚಾಟನೆ ಮಾಡಲು ಸಿರಿಬಾಯಿ ತ್ಯಾಂಪಣ್ಣನೇ ಬೇಕು. ಪ್ರೇತಗಳಿಗೇ ಅಪ್ಪಂದಿರಂತಿರುವ ಬ್ರಹ್ಮರಕ್ಕಸರನ್ನೂ ಅವನು ಉಚ್ಚಾಟಿಸಿ ಬಿಡುತ್ತಾನೆ. ಅಂದ ಮೇಲೆ ಹುಲು ಮಾನವರು ಅವನಿಗೆ ಎಷ್ಟು ಗೌರವ ನೀಡಿಯಾರೆಂಬುದನ್ನು ನೀವೇ ಊಹಿಸಿಕೊಳ್ಳಬಹುದು.

ಕುಜಲಿ ತ್ಯಾಂಪಣ್ಣ ತುಂಬಾ ತಮಾಷಿಯ ಮನುಷ್ಯ. ಈಚಲು ಮರ ಹತ್ತಿ ಕುಜಲಿ (ಕಳ್ಳು ಗಡಿಗೆ) ಇರಿಸಿ ಶೇಂದಿ ಇಳಿಸುವವ ಅವ, ಶೇಂದಿಯನ್ನು ಸೋಮರಸವೆಂದು ಕರೆದು ಭಾರತದ ಮೂವತ್ತಮೂರು ಕೋಟಿ ದೇವತೆಗಳು ಅದನ್ನು ಸೇವಿಸುತ್ತಿದ್ದರೆಂದು ಪುರಾಣ ಶಾಸ್ತ್ರಾಧಾರಗಳಿಂದ ಸಾಬೀತು ಪಡಿಸಬಲ್ಲ ಸಮರ್ಥ ಅವ. ಅವನ ಮಾತಿನ ಮೋಡಿಯಿಂದಾಗಿ ಶೇಂದಿಯನ್ನು ಶೂದ್ರರು ಅತಿ ಶೂದ್ರರು ಇಷ್ಟಪಟ್ಟು ಕುಡಿದರೆ,

ದೇವನಾಂಪ್ರಿಯ ಸೋಮರಸವೆಂದು ಬಗೆದು ವಿಪ್ರರು ಮತ್ತು ಅತಿ ವಿಪ್ರರು ಕಷ್ಟಪಟ್ಟು (ಕಾಣಬಾರದಲ್ಲಾ?) ಕುಡಿಯುತ್ತಾರೆ. ಕುಜಲಿ ತ್ಯಾಂಪಣ್ಣ ನಮ್ಮೂರಲ್ಲಿ ಹಾಗೆ ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ತಂದವರು! ಸೋಮರಸದಿಂದಾಗಿ ವರ್ಗಭೇದ, ವರ್ಣಭೇದ, ಜಾತಿ ಭೇದ ಅಳಿಸಿ ಹಾಕಿದ ಅವನ ಬಗ್ಗೆ ಎಲ್ಲರಿಗೂ ಪ್ರೀತಿ.

ಅವನೊಟ್ಟಿಗೆ ಜನಪ್ರಿಯತೆಯಲ್ಲಿ ಪೈಪೋಟಿ ನಡೆಸುವವನು ವಿಜ್ಞಾನಿ ತ್ಯಾಂಪಣ್ಣ, ಅವನು ಕಳ್ಳಭಟ್ಟಿ ಇಳಿಸುವುದರಲ್ಲಿ ಬಲು ನಿಪುಣ. ಕೋಳಿಯ ಒಕ್ಕ, ಬ್ಯಾಟರಿ ಚೂರು, ಚಪ್ಪಲಿ ತುಂಡು ಇನ್ನೂ ಏನೇನೋ ಹಾಕಿ ಮತ್ತು ಬರಿಸುವ ಏ-ವಸ್ತು ಶರಾಬು ತಯಾರಿಸಿ ಅವನು ಬೇಕಾದವರಿಗೆಲ್ಲಾ ರಾಜಾರೋಷವಾಗಿ, ಮರ್ಯಾದೆಗೆ ಅಂಜುವವರಿಗೆ ಗುಟ್ಟಾಗಿ ಸಪ್ಲಾಯಿ ಮಾಡುತ್ತಾನೆ. ಅವನನ್ನು ಗಂಗಸರ (ಶರಾಬು) ತ್ಯಾಂಪಣ್ಣನೆಂದು ಊರವರು ಕರೆಯುತ್ತಿದ್ದರು. ನಮ್ಮೂರ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯರು ಕನ್ನಡದ ವಿಜ್ಞಾನಿಗಳ ಪ್ರಯೋಗಾಲಯಗಳಲ್ಲಿ ಬಟ್ಟಿ ಇಳಿಸುತ್ತಾರೆ, ಎಂದೊಮ್ಮೆ ರಾಜ್ಯೋತ್ಸವ ಭಾಷಣದಲ್ಲಿ ಹೇಳಿದ್ದೇ ಗಂಗಸರ ತ್ಯಾಂಪಣ್ಣನು ವಿಜ್ಞಾನಿ ತ್ಯಾಂಪಣ್ಣನಾಗಲು ಕಾರಣ. ಅವನೊಮ್ಮೆ ಪೋಲೀಸರಿಗೆ ಸಿಕ್ಕಿಬಿದ್ದು ಕೇಸಾದಾಗ ಅವನ ಹೆಸರು ಗಂಗಸರ ತ್ಯಾಂಪಣ್ಣ ಅಲಿಯಾಸ್ ವಿಜ್ಞಾನಿ ತ್ಯಾಂಪಣ್ಣ ಎಂದೇ ದಾಖಲಾಗಿತ್ತು. ಕೇಸು ನಿಲ್ಲಲಿಲ್ಲ. ಆದಕ್ಕೆ ''ನಮ್ಮೂರಲ್ಲಿ ಹತ್ತು ಬಾಟಲು ಗಂಗಸರ ಪತ್ತೆ. ಪೋಲಿಸ್ ಸ್ಟೇಷನ್ನಿನಲ್ಲಿ ಅದು ನಾಪತ್ತೆ'' ಎಂಬ ಜೋಕು ಪ್ರಚಲಿತದಲ್ಲಿದೆ. ವಿಜ್ಞಾನಿ ತ್ಯಾಂಪಣ್ಣ ತನ್ನ ಈ ಸಾಧನೆಯನ್ನು ಗಿನ್ನೆಸ್ ದಾಖಲೆ ಕೋರನಂತೆ ಹೇಳಿಕೊಳ್ಳುವುದುಂಟು.

ಚೊಟ್ಟೆ ತ್ಯಾಂಪಣ್ಣ ನಮ್ಮೂರಿನ ಅಂಚೆಯ ಅಣ್ಣ. ಅವನ ಎಡಕಾಲು ಬಲಗಾಲಿಗಿಂತ ಸ್ವಲ್ಪ ಚಿಕ್ಕದು. ಆದುದರಿಂದ ಅವನಿಗೆ ಚೊಟ್ಟೆ (ಕುಂಟ) ತ್ಯಾಂಪಣ್ಣನೆಂಬ ಹೆಸರು ಬಂದದ್ದು. ಹಾಗಿದ್ದರೂ ಅವನು ನಾಲ್ಕು ಮೈಲು ದೂರದಿಂದ ಪೋಸ್ಟು ತಂದು ಊರಿಡೀ ಹಂಚುವ ಸ್ಪೀಡು ನೋಡಬೇಕು. ಊರಿಗೆ ನವಭಾರತ ಪೇಪರನ್ನೂ ಹಂಚುವವ ಅವನೇ. ಸುದ್ದಿ ತ್ಯಾಂಪಣ್ಣ, ಪೋಸ್ಟುಮೇನ್ ತ್ಯಾಂಪಣ್ಣ ಎಂಬ ಅವನ ಉಪ ನಾಮಧೇಯಗಳು ಅವನ ಅಪಾರ ಜನಪ್ರಿಯತೆಗೆ ಸಾಕ್ಷಿ.

ತೋಟೆ ತ್ಯಾಂಪಣ್ಣ ನಮ್ಮೂರ ಹೊಳೆಯಲ್ಲಿ ಡೈನಮೈಟ್ ಸಿಡಿಸಿ ಮೀನು ಹಿಡಿಯುವುದರಲ್ಲಿ ಬಹಳ ಚಾಲಾಕು. ಒಮ್ಮೆ ಡೈನಮೈಟ್ ಬಲಗೈಯಲ್ಲಿ ಸಿಡಿದು ಕೆಳಭಾಗ ಚೂರುಚೂರಾಗಿ ಹೋಯಿತು. ಕೈ, ಹೋದರೇನಂತೆ? ಬಂತಲ್ಲಾ ಅವನಿಗೆ ಮೋಟು ಕೈ ತ್ಯಾಂಪಣ್ಣನೆಂಬ ಹೊಸ ಹೆಸರು! ಈಗ ಅವನು ತುಂಡಾದ ಕೈಯ ಮಂಡಿಯಲ್ಲಿ ಬೀಡಿ ಇರಿಸಿ ಎಡಗೈಯಿಂದ ಡೈನಮೈಟ್ ಮೂತಿಗೆ ಬೆಂಕಿ ಹಚ್ಚಿ ನೀರಿಗೆಸೆದು ಮೀನು ಹಿಡಿಯುವ ಕಾಯಕ ಮುಂದುವರಿಸಿದ್ದಾನೆ. ಸಮುದ್ರದ ಮೀನನ್ನು ಸವಿಯುವ ಭಾಗ್ಯವಿಲ್ಲದ ನಮ್ಮೂರ ಜನರಿಗೆ ಹಸಿ ಮೀನು ಸಪ್ಲಾಯಿ ಮಾಡುವವನೇ ಅವನು. ಓಪನ್ನಾಗಿ ಮೀನು ತಿನ್ನಬಾರದವರಿಗೆ ಅವನು ಮೀನು ಸಾರು ಮಾಡಿ ಸೀಕ್ರೆಟ್ಟಾಗಿ ಮನೆಗೇ ಮುಟ್ಟಿಸುತ್ತಾನೆ, ಎಂಬ ಸುದ್ದಿ ನಮ್ಮೂರ ಓಪನ್ ಸೀಕ್ರೆಟ್ಟು. ತೋಟೆ ತ್ಯಾಂಪಣ್ಣನು

ಪರಮವೀರ ಚಕ್ರ ಪ್ರಶಸ್ತಿಗೆ ಅರ್ಹನು ಎಂದು ನಮ್ಮೂರ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯರು ಹೇಳುವುದುಂಟು.

ನಮ್ಮೂರಿಗೊಬ್ಬ ಪಟೇಲರಿದ್ದಾರೆ. ಒಳ್ಳೆ ಗುಜ್ಜಾನೆ ಮರಿಯಂತಿರುವ ಅವರು ಶೋಕಿಲಾಲ, ರಸಿಕ ಚಕ್ರವರ್ತಿ. ಸಿಟ್ಟು ಬಂದಾಗ ನಮ್ಮೂರ ಜನ ನಿನ್ನವ್ವನ್, ನಿನ್ನಕ್ಕನ್, ನಿನ್ ಹೆಂಡ್ರನ್ ಎಂದು ಬಯ್ಯುವುದಿಲ್ಲ. ಬದಲಾಗಿ ನಿನ್ನ ಅಜ್ಜಿಗೆ ಪಟ್ಲೇರ್ ಎಂದು ಬಿಡುತ್ತಾರೆ. ಆ ಹಂತದ ವರೆಗಿನ ರಸಿಕರಾಗಿರುವ ಪಟೇಲರಿಗೊಬ್ಬ ಸಂಗಡಿಗನಿದ್ದಾನೆ. ಅವನು ಕುರುಂಟು ಯಾನೆ ಪಾಸಾಡಿ (ಸಂಗಡಿಗ) ತ್ಯಾಂಪಣ್ಣ. ಪಟೇಲರ ರಸಿಕತೆಯಲ್ಲಿ ಅವನಿಗೆ ಪಾಲಿದೆಯಂತೆ. ಅವನ ಭಾಗ್ಯಕ್ಕೆ ಊರವರು ಮತ್ಸರ ಮಿಶ್ರಿತ ಗೌರವದಿಂದ ಕುರುಂಟು ತ್ಯಾಂಪಣ್ಣನನ್ನು ಕಾಣುತ್ತಾರೆ.

ಇಸ್ಪೀಟು ಮತ್ತು ಕೋಳಿಕಟ್ಟ ನಮ್ಮೂರಿನ ಎರಡು ಜಾನಪದ ಕ್ರೀಡೆಗಳು. ಮಕ್ಕಳು ಹತ್ತು ವರ್ಷಗಳ ಒಳಗೇ ಇವೆರಡು ಕ್ರೀಡೆಗಳಲ್ಲಿ ನೈಪುಣ್ಯ ಪಡೆದುಬಿಡುತ್ತಾರೆ. ಕ್ರೀಡೆಗಳ ಬಗ್ಗೆ ಪ್ರಬಂಧ ಬರೆಯಲು ಕೊಟ್ಟರೆ ಕೋಳಿಕಟ್ಟದ ಸವಿಸ್ತಾರ ವಿವರಣೆ ಮಾಡಿ ಬಿಡುತ್ತಾರೆ ಎಂದು ನಮ್ಮೂರ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯರು ವಿಶ್ಲೇಷಿಸುವುದುಂಟು. ಇವೆರಡು ಜಾನಪದ ಕ್ರೀಡೆಗಳನ್ನು ಒಲಿಂಪಿಕ್ಸಿಗಿರಿಸಿದರೆ ಆರೂ ಪದಕಗಳು ನಮ್ಮೂರಿಗೇ ಗ್ಯಾರಂಟಿ. ಇಸ್ಪೀಟಿನಲ್ಲಿ ಜೋಕರ್ ತ್ಯಾಂಪಣ್ಣ ನಂಬರು ವನ್ನು! ಮಾತು ಮಾತಿಗೆ ನಾನ್ ವೆಜ್ಜು ಜೋಕು ಹಾರಿಸುವುದಕ್ಕಾಗಿ ಅವನಿಗೆ ಈ ಹೆಸರು ಬರೀ ಲಂಗೋಟಿಯಲ್ಲೇ ಊರಿಡೀ ಸುತ್ತುವ ಅವನಿಗೆ ಮೂವರು ಹೆಣ್ಣುಮಕ್ಕಳು. ನನ್ನನ್ನು ಕಂಡಾಗೆಲ್ಲಾ "ಏನು ಅಳಿಯದೇವ್ರೇ" ಎಂದು ಕೇಳ್ತೋನು! ಅವನ ಕಣ್ಣು ತಪ್ಪಿಸಿ ಓಡುವುದು ನನಗೆ ದೊಡ್ಡ ಸಮಸ್ಯೆಯಾಗಿ ಬಿಡುತ್ತಿತ್ತು. ಅವನು ಹೇಗೂ ಇರಲಿ ಅವನು ಜೋಕು ಇಡೀ ಊರಿಗೇ ಇಷ್ಟ.

ಕೋಳಿಕಳ್ಳ ತ್ಯಾಂಪಣ್ಣನದು ಇನ್ನೊಂದು ಕತೆ. ಮನೆಗೆ ತಾಗಿಕೊಂಡೇ ಅವನ ಕೋಳಿ ಮನೆಯಿದೆ. ಅದರಲ್ಲಿ ಭರ್ತಿ ಕೋಳಿ ಕಟ್ಟದ ಹುಂಜಗಳು. ಕೆಲವು ವರ್ಷಗಳ ಹಿಂದೆ ಅವನಿಗೆ ಹಾದಿಯಲ್ಲಿ ಕಾಣಸಿಗುವ ಕೋಳಿಗಳನ್ನು ಎತ್ತಿಕೊಂಡು ಬರುವ ಎಲ್ಲವೂ ನನ್ನದೆಂಬ ವಿಶ್ವ ಬಂಧುತ್ವ ಪ್ರಜ್ಞೆ ಇತ್ತಂತೆ. ಕೆಲವೊಮ್ಮೆ ಸಿಕ್ಕಿಬಿದ್ದು ಸಹಸ್ರನಾಮ, ಚಪ್ಪಲಿ ಸೇವೆ, ಪೊರಕೆ ಪೂಜೆ ಆಗುತ್ತಿತ್ತಂತೆ. ಅದೆಲ್ಲಾ ವೈಭವಯುತ ಗತ ಇತಿಹಾಸ. ಈಗ ಅವನ ಗತ್ತೇ ಬೇರೆ. ಎರಡು ಜೇಬಿನ ಅಂಗಿ ಹಾಕಿಕೊಂಡು ತಾಂಬೂಲ ಮೆದ್ದುಕೊಂಡು ಎರಡು ಬೆರಳುಗಳ ಮೂಲಕ ಕೆಂಪು ರಸವನ್ನು ಪಿಚಕ್ಕೆಂದು ಅಷ್ಟು ದೂರಕ್ಕೆ ಹಾರಿಸುವುದನ್ನು ನೋಡುವುದೇ ಚೆಂದ. ಅವನ ಒಂದು ಜೇಬಿನಲ್ಲಿ ಸುತ್ತ ಮುತ್ತಣ ಹತ್ತಾರು ಊರುಗಳಲ್ಲಿ ನಡೆಯಲಿರುವ ಕುಕ್ಕಟ ಕದನದ ಆಕ್ಕರೆಯ ಕರೆಯೋಲೆಗಳು. ಇನ್ನೊಂದರಲ್ಲಿ ಕುಕ್ಕಟ ಪಂಚಾಂಗ. ಯಾವ ದಿನ, ಎಷ್ಟು ಹೊತ್ತಿಗೆ, ಯಾವ ಬಣ್ಣದ ಹುಂಜನಿಗೆ ಬಾಳು ಕಟ್ಟಿದರೆ ಗೆಲುವು ಹದಿನಾರಾಣೆ ಗ್ಯಾರಂಟಿ ಎನ್ನುವುದನ್ನು ಅವನು ಕುಕ್ಕಟ ಪಂಚಾಂಗ ನೋಡಿ ಹೇಳಿಬಿಡುತ್ತಾನಂತೆ. ಅವನಿಗೆ ನಮ್ಮೂರ ಜ್ಯೋತಿಸಿ ಬೋಳಂತಾಯ ಭಟ್ಟರಿಗಿಂತಲೂ ಹೆಚ್ಚು ಗೌರವ ಸಿಗುತ್ತದೆ.

ಬಾಳುಕತ್ತಿ ತ್ಯಾಂಪಣ್ಣನೆಂದರೆ ನಮ್ಮೂರಲ್ಲಿ ಹೆದರದವರೇ ಇಲ್ಲ. ಅವ ಒಂದು ಪೆಟ್ಟಿಗೆಯಲ್ಲಿ ಸಮಸ್ತ ಆಯುಷ್ಕರ್ಮ ಸಾಧನಗಳನ್ನು ಹಾಕಿಕೊಂಡು ಮನೆಮನೆಗೆ ಹೋಗಿ ಕ್ಷೌರ ಮಾಡುವವನು. ಅವನ ಸೊಂಟದಲ್ಲಿ ಮೂರಿಂಚು ದಪ್ಪದ ಹಸಿರು ಬೆಲ್ಟು, ಅದರಲ್ಲಿ ಒಂಬತ್ತಿಂಚು ಉದ್ದದ ಬಾಳುಕತ್ತಿಯೊಂದು ನೇತಾಡುತ್ತಿರುತ್ತದೆ. ಒಂದು ಎರಡು ಆಗಿ ಮೂರನೆ ಮಾತಿಗೆ ''ಕತ್ತಿ ತೆಗೆದು ಕುತ್ತಿ ಬಿಡುತ್ತೇನೆ'' ಎಂದು ಹೇಳುವುದು ಅವನ ಅಭ್ಯಾಸ. ಕುಡಿದ ಮತ್ತಿನಲ್ಲಿ ಒಂದಿಬ್ಬರಿಗೆ ಗಾಯ ಮಾಡಿದ್ದಕ್ಕೆ ಅವನೆಂದರೆ ಎಲ್ಲರಿಗೂ ಹೆದರಿಕೆ. ಒಮ್ಮೊಮ್ಮೆ ಊರಿನ ಪಂಚಾತಿಕೆಗೂ ಬಂದು ಅವನು ಕತ್ತಿ ತೋರಿಸಿ ಅಂತಿಮ ತೀರ್ಪು ಕೊಡುತ್ತಿದ್ದುದುಂಟು. ಅವನು ನಮ್ಮ ಮನೆಗೆ ಬಂದು ದೊಡ್ಡ ಮಾವನಿಂದ ಯಕ್ಷಗಾನದ ಹಾಡು ಹೇಳಿಸಿಕೊಳ್ಳುತ್ತಿದ್ದ. ರಾಗವೆಂದರೆ ದೇವರಿಗೇ ಪ್ರೀತಿ. ಆದರೆ ನಾವು ಸಹಿಸಿಕೊಳ್ಳಲೇಬೇಕಿತ್ತು. ಎದುರು ಹಾಕಿಕೊಂಡರೆ ಮತ್ತೆ ಕ್ಷೌರ ಮಾಡುವವರು ಯಾರು? ನಮ್ಮಲ್ಲಿಂದ ರಾತ್ರೆ ಹೊರಡುವಾಗ ಪಂಜು ಉರಿಸಿಕೊಂಡು ಹೋಗುವ ಅವನನ್ನು ತೂಟೆ ತ್ಯಾಂಪಣ್ಣ ಎಂದೂ ಊರವರು ಕರೆಯುತ್ತಾರೆ. ದೊಡ್ಡ ಮಾವ ಅವನನ್ನು ಭಾಗವತ ತ್ಯಾಂಪಣ್ಣ ಎಂದು ಕರೆಯುವಾಗ ಅವನ ಮುಖ ಅರಳುವುದು ನೋಡಬೇಕು!

ಹೀಗೆ ನಮ್ಮೂರ ಸಮಸ್ತ ತ್ಯಾಂಪಣ್ಣಗಳು ನಾನಾ ಕ್ಷೇತ್ರಗಳಲ್ಲಿ ವ್ಯಾಪಿಸಿ ಹಣ ಮತ್ತು ಕೀರ್ತಿ ಗಳಿಸುತ್ತಿರುವಾಗ ದೋಂಟಿ ತ್ಯಾಂಪಣ್ಣ ನನಗೆ ಎರಡೂ ಇಲ್ಲದಾಯ್ತಲ್ಲ ದೇವರೇ ಎಂದು ಮರುಗತೊಡಗಿದ. ದೊಡ್ಡ ಮಾವನಲ್ಲಿ ತನ್ನ ಅಂತರಂಗವನ್ನು ಬಿಚ್ಚಿಟ್ಟದ್ದಕ್ಕೆ ಅವರು ಒಮ್ಮೆ ಶಬರಿಮಲೆಗೆ ಹೋಗಿ ಬಾ. ಆಗ ಸ್ವಾಮಿ ಅಂತಾದರೂ ಕರೆಯುತ್ತಾರೆ'' ಎಂಬ ಸೂಪರ್ ಸುಪ್ರೀಂ ಐಡಿಯ ಕೊಟ್ಟುಬಿಟ್ಟರು. ಮರುದಿನವೇ ಕರಿಲುಂಗಿ, ಕರಿಶಾಲು, ಕಪ್ಪು ಸರ ಹಾಕಿದ ದೋಂಟಿ ತ್ಯಾಂಪಣ್ಣ ಹಣೆಯಲ್ಲಷ್ಟು ಬೂದಿ ಬಳಕೊಂಡು ಹಾಜರು. ''ತ್ಯಾಂಪಣ್ಣ ಸ್ವಾಮಿ ಬನ್ನಿ, ಹೋಗಿ'' ಎಂದು ಅವನಿಗೆ ಬಹುವಚನ ಬಳಸಲು ದೊಡ್ಡ ಮಾವ ಹರಸಾಹಸ ಪಡಬೇಕಾಯಿತು. ಒಂದಷ್ಟು ದಿನ ಊರಲ್ಲಿ ಅವನು ತ್ಯಾಂಪಣ್ಣ ಸ್ವಾಮಿಯಾಗಿ ಚಲಾವಣೆಯಾದ. ನಮ್ಮೂರಿನಿಂದ ಮಲೆಗೆ ಹೋದ ಮೊತ್ತಮೊದಲ ತ್ಯಾಂಪಣ್ಣನೆಂಬ ದಾಖಲೆಯೊಂದಿಗೆ ಊರ ಇತಿಹಾಸದ ಪುಟಗಳಲ್ಲಿ ರಾರಾಜಿಸಿದ.

ಇದು ಕಳೆದು ಎರಡು ತಿಂಗಳಾಗಿರಬಹುದು. ಒಂದು ದಿನ ಪಟೇಲರ ಸಂಗಡಿಗ ಕುರುಂಟು ತ್ಯಾಂಪಣ್ಣ ಮನೆಗೆ ಬಂದು ''ಸಂಜೆ ಪಂಚಾತಿಕೆ ಉಂಟಂತೆ. ನೀವು ಕಟ್ಟೆಗೆ ಬರಬೇಕಂತೆ'' ಎಂದು ಪಟೇಲರ ನಿರೂಪವನ್ನು ದೊಡ್ಡ ಮಾವನಿಗೆ ಮುಟ್ಟಿಸಿ ಹೋದ. ದೊಡ್ಡ ಮಾವನ ಜತೆಯಲ್ಲಿ ಪಂಚಾತಿಕೆ ಕಟ್ಟೆಗೆ ನಾನೂ ಹೋದೆ. ಶರಾಬು ಭಟ್ಟಿ ಇಳಿಸುವ ವಿಜ್ಞಾನಿ ಯಾನೆ ಗಂಗಸರ ತ್ಯಾಂಪಣ್ಣನು, ದೋಂಟಿ ತ್ಯಾಂಪಣ್ಣ ಯಾನೆ ತ್ಯಾಂಪಣ್ಣ ಸ್ವಾಮಿಯ ಮೇಲೇನೋ ಫಿರ್ಯಾದು ಸಲ್ಲಿಸಿದ್ದಕ್ಕೆ ನ್ಯಾಯ ತೀರ್ಮಾನ ಮಾಡಲು ಸಭೆ ಕರೆಸಿದ್ದಾಗಿ ಪಟೇಲರು ಪ್ರಕಟಿಸುವುದರೊಂದಿಗೆ ಪಂಚಾತಿಕೆ ಆರಂಭವಾಯಿತು.

ಪಟೇಲರ ಮಾತು ಮುಗಿಯುತ್ತಿದ್ದಂತೆ ವಿಜ್ಞಾನಿ ತ್ಯಾಂಪಣ್ಣ ಯಾನೆ ಗಂಗಸರ ತ್ಯಾಂಪಣ್ಣನು ಎದ್ದು ನಿಂತನು. ''ಈ ದೋಂಟಿ ತ್ಯಾಂಪಣ್ಣನು ಶಬರಿಮಲೆಗೆ ಹೋಗುವ

ಮೊದಲು ನನ್ನಲ್ಲಿ ಕಡಮಾಡಿಕುಡಿದ ಗಂಗಸರದ ಬಾಬತ್ತು, ಇವನಿಂದ ನಾಲ್ಕುನೂರ ಐವತ್ತೆಂಟು ರೂಪಾಯಿ ಬರಲಿಕ್ಕುಂಟು. ನನಗೆ ಹೋಗಲಿಕ್ಕೆ ಆಗಲಿಲ್ಲ. ಇವನಾದರೂ ಹೋದನಲ್ಲಾ ಎಂದು ನಾನು ಸಾಲ ಮನ್ನಾ ಮಾಡಿರುತ್ತೇನೆ. ಆದರೆ ಮಲೆಯಿಂದ ಬಂದ ನಂತರ ದೋಂಟಿ ತ್ಯಾಂಪಣ್ಣನು ಗಂಗಸರ ಕಾಸುತ್ತಿದ್ದಾನೆ. ಊರಲ್ಲಿ ಮಾರುತ್ತಿದ್ದಾನೆ. ಇದು ನನ್ನ ಹೊಟ್ಟೆಗೆ ಹೊಡಿಯುವ ಕೆಲಸ. ಊರ ಹಿರೀಕರು ನನಗೆ ನ್ಯಾಯ ದೊರಕಿಸಿ ಕೊಡಬೇಕು'' ಎಂದು ಕೈಮುಗಿದ.

ಪಟೇಲರು ನಿನ್ನ ಉತ್ತರವೇನು ಎಂಬಂತೆ ದೋಂಟಿ ತ್ಯಾಂಪಣ್ಣ ಸ್ವಾಮಿಯತ್ತ ನೋಟ ಹಾಯಿಸಿದ್ದಕ್ಕೆ ಅವನು ಎದ್ದು ನಿಂತ. ''ಗಂಗಸರದ ವಿಜ್ಞಾನಿ ತ್ಯಾಂಪಣ್ಣನ ಹೊಟ್ಟೆಗೆ ಹೊಡಿಯುವ ಬುದ್ಧಿ ನನಗಿಲ್ಲ ದೇವರೇ. ಶಬರಿಮಲೆಗೆ ಹೋಗಿ ಬರಲು ಐದು ಸಾವಿರ ಖರ್ಚಾಯಿತು. ಸಾಲ ತೀರಿಸಲೆಂದೇ ನಾನು ಈಗ ಭಟ್ಟಿ ಇಳಿಸುತ್ತಿರುವುದು. ಶಬರಿಮಲೆಗೆ ಹೋಗಲು ಹೇಳಿದ್ದು, ಐದು ಸಾವಿರ ಸಾಲ ಕೊಟ್ಟದ್ದು ಅವರೇ. ಬೇಕಾದರೆ ಕೇಳಿ ನೋಡಿ'' ಎಂದು ನನ್ನ ದೊಡ್ಡ ಮಾವನನ್ನು ತೋರಿಸಿಬಿಟ್ಟ.

ಈಗ ಇಡೀ ಸಭೆ ದೊಡ್ಡ ಮಾವನನ್ನು ನೋಡತೊಡಗಿತು. ದೊಡ್ಡ ಮಾವ ವಿಜ್ಞಾನಿ ತ್ಯಾಂಪಣ್ಣನ ಪರವಹಿಸಿದರೂ ತಪ್ಪು, ದೋಂಟಿ ತ್ಯಾಂಪಣ್ಣನ ಪರ ನಿಂತರೂ ತಪ್ಪು ಎನ್ನುವ ಸನ್ನಿವೇಶ ನಿರ್ಮಾಣವಾಯಿತು. ಸ್ವಲ್ಪ ಹೊತ್ತಿನ ಬಳಿಕ ದೊಡ್ಡ ಮಾವ ತೀರ್ಪಿತ್ತರು. ''ದೋಂಟಿ ತ್ಯಾಂಪಣ್ಣನು ತ್ಯಾಂಪಣ್ಣ ಸ್ವಾಮಿಯಾಗಿ ಎಲ್ಲರಿಂದಲೂ ಗೌರವ ಪಡೆಯಲಿ ಎಂದು ನಾನು ಯಾತ್ರೆಯ ಸೂಚನೆ ಮತ್ತು ಸಾಲ ಕೊಟ್ಟದ್ದು ನಿಜ. ಊರ ಹಿರೀಕರು ದೋಂಟಿ ತ್ಯಾಂಪಣ್ಣನಿಗೆ ಐದು ನೂರೋ, ಸಾವಿರವೋ ಕೊಟ್ಟು ಸಾಲ ತೀರಿಸುವುದಾದರೆ ನನ್ನ ಐದು ನೂರೋ, ಸಾವಿರವೋ ಬಿಟ್ಟುಬಿಡುತ್ತೇನೆ.''

ದೊಡ್ಡ ಮಾವನ ಮಾತಿಗೆ ಸ್ಮಶಾನ ಮೌನ. ಸ್ವಲ್ಪ ಹೊತ್ತು ಬಿಟ್ಟು ದೊಡ್ಡ ಮಾವ ಮುಂದುವರಿಸಿದರು. ''ಹಾಗಾದರೆ ದೋಂಟಿ ತ್ಯಾಂಪಣ್ಣ ಸಾಲ ಮುಗಿಸುವವರೆಗೆ ಭಟ್ಟಿ ಇಳಿಸಲಿ. ಆಮೇಲೆ ಗಂಗಸರ ವಿಜ್ಞಾನಿ ತ್ಯಾಂಪಣ್ಣನವರು ಮಾತ್ರ ಕಾಸಿದರೆ ಸಾಕು.''

ಪಟೇಲರು ತಲೆತೂಗಿದರು. ಇನ್ನು ಮುಂದೆ ಬೆಳಿಗ್ಗೆ ವಿಜ್ಞಾನಿ ತ್ಯಾಂಪಣ್ಣನಲ್ಲಿ, ಸಂಜೆ ದೋಂಟಿ ತ್ಯಾಂಪಣ್ಣನಲ್ಲಿ ಬಿಟ್ಟಿಯಾಗಿ ಭಟ್ಟಿ ಸರಾಯಿಯ ಸೌಭಾಗ್ಯವನ್ನು ಅನುಭವಿಸಲಿರುವ ಬ್ರಹ್ಮಾನಂದದಲ್ಲಿ ತೇಲಿಹೋದರು.

ಈಗ ನಮ್ಮೂರಲ್ಲಿ ಇಬ್ಬರು ವಿಜ್ಞಾನಿಗಳಿದ್ದಾರೆ. ಕನ್‌ಫ್ಯೂಷನ್ನು ಬೇಡವೆಂದು ಊರ ಜನ ಒಬ್ಬನನ್ನು ಮೊದಲನೇ ವಿಜ್ಞಾನಿ ಗಂಗಸರ ತ್ಯಾಂಪಣ್ಣನೆಂದೂ, ಇನ್ನೊಬ್ಬನನ್ನು ಇಮ್ಮಡಿ ವಿಜ್ಞಾನಿ ದೋಂಟಿ ತ್ಯಾಂಪಣ್ಣನೆಂದೂ ಕರೆಯುತ್ತಾರೆ.

❖❖❖

ಶುಭಾಶಯಗಳೊಂದಿಗೆ

ಪ್ರಭಾ ಕಣ್ಣಿನ ಆಸ್ಪತ್ರೆ

ಮತ್ತು

ಸಂಶೋಧನಾ ಕೇಂದ್ರ

504, 40ನೇ ಅಡ್ಡರಸ್ತೆ, 7ನೇ ಬ್ಲಾಕ್,
ಜಯನಗರ, ಬೆಂಗಳೂರು - 560 070
ದೂರವಾಣಿ: 2634 4131, 41 / 2663 7041

ಮತ್ತು

ವಿಠಲ ಅಂತರರಾಷ್ಟ್ರೀಯ ನೇತ್ರಶಾಸ್ತ್ರಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ,
7ನೇ ಬ್ಲಾಕ್, ಬನಶಂಕರಿ 3ನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು - 560 085
ದೂರವಾಣಿ: 2672 2213/14/15/19

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR